
# brown book

**THE BOOK WAS DRENCHED**

UNIVERSAL
LIBRARY
OU_200210
UNIVERSAL
LIBRARY


ಶ್ರೀ
ಕೈಸ್ತಾಚಲಗ್ರಂಥಮಾಲೆ
ಆನಂದವನ
ನನ್ನ ಗತಿ!
ಭಿ. ಪ. ಕಾಳೆ.
೪ ಆಣೆ
ಕೋರ್ಟಿ. ರಾಮರಾವ

# ನನ್ನ ಗತಿ!

( ಪತ್ತೇದಾರಿ ಕತೆ )

ಭಿ. ಪ. ಕಾಳೆ.

ಪ್ರಕಾಶಕ:

ಯ. ಗು. ಕುಲಕರ್ಣಿ

ಸಂಪಾದಕ, ಸ. ಚ.,

ಆನಂದವನ

೧೯೪೧

೪ ಆಣೆ

# ನನ್ನ ಗತಿ!

ಅಥವಾ

## ಸತ್ಯವಂತನ ಕಥೆ.

### ಕಥಾರಂಭ

ಭಗವಾನ್‌ದಾಸನು ಒಬ್ಬ ಪುರಾತನದ ಸುಪ್ರಸಿದ್ಧ ಪತ್ತೇದಾರನೆಂದು ನಮ್ಮ ಪ್ರಾಂತದಲ್ಲೆಲ್ಲ ಖ್ಯಾತಿಪಡೆದಿದ್ದನು. ಆತನ ಸಂಬಂಧದ ಹಲವು ಆಖ್ಯಾಯಿಕೆಗಳು ಆಬಾಲವೃದ್ಧರಿಗೆ ಗೊತ್ತಿದ್ದವು. ಆತನಂತಹ ನಿಸ್ಪೃಹ ವ್ಯಕ್ತಿಯು ವಿರಳವೆಂದೇ ಅನ್ನುತ್ತಿದ್ದರು. ಆತನು ಯಾವುದೊಂದು ಪತ್ತೇದಾರಿಯ ಕೆಲಸವನ್ನು ಕೈಕೊಂಡನೆಂದರೆ, ಅನ್ನ-ನೀರು-ನಿದ್ರೆಗಳ ಪರಿವೆಯಿಲ್ಲದೆ ಆ ಕೆಲಸವನ್ನು ಶಕ್ಯವಾದಷ್ಟು ತೀವ್ರ ಪ್ರಮಾಣಸಹಿತವಾಗಿ ಪೂರೈಸಿ ಕೊಡುತ್ತಿದ್ದನು. ತಾನು ಕೈಕೊಂಡ ಕೆಲಸದಲ್ಲಿ ಯಾರ ಛಡೆ-ಮುರುವತ್ತುಗಳನ್ನೂ ಇಡುತ್ತಿರಲಿಲ್ಲ. ತನ್ನ ಕೆಲಸ ಸಾಧಿಸಲಿಕ್ಕೆಂದು ಆತನು ಯಾವ ಕೃತ್ರಿಮ ಯೋಜನೆಗಳನ್ನೂ ಮಾಡುತ್ತಿರಲಿಲ್ಲ. ಆದರಿಂದ ನಮ್ಮ ಪ್ರಾಂತದಲ್ಲಿ ಆತನಿಗೆ ಹೆಚ್ಚಾಗಿ ಗೌರವವಿದ್ದಿತು. ಒಂದು ದಿನ ನಾನು ನನ್ನದೊಂದು ಕೆಲಸಕ್ಕಾಗಿ ಆ ವೃದ್ಧ ಭಗವಾನ್‌ದಾಸನೆಡೆಗೆ ಹೋದೆನು.

ಆಗ ಆ ಮುದುಕನು ತಮ್ಮ ಮನೆಯ ಹೊರ ಪಡಸಾಲೆಯೊಳಗಿನ ಹಾಸುಗೆಯ ಮೇಲೆ ಅಡ್ಡಾಗಿ ತನ್ನ ಮೊಮ್ಮಗನೋ-ಮರಿಮಗನೋ ತಿಳಿಯದು, ಸುಮಾರು ನಾಲ್ಕೈದು ವರ್ಷ ವಯಸ್ಸಿನ ಒಬ್ಬ ಹುಡುಗನನ್ನು ವಿನೋದಕ್ಕಾಗಿ ಮೊಳಕಾಲ ಮೇಲೆ ಹತ್ತಿಸಿಕೊಂಡು ಎತ್ತಾಡುವ ಅಳಂಚ-ಮಳಂಚ ಆಟವಾಡಿಸುತ್ತಿದ್ದನು. ನಾನು ಬಾಗಿಲ ಬಳಿ ಬಂದುದನ್ನು ಕಂಡು ಭಗವಾನ್‌ದಾಸನು ಕೂಡಲೆ ಆ ಆಟವನ್ನು ಬಿಟ್ಟುಗೊಟ್ಟನು; ಹಾಗು ನನ್ನನ್ನು ಕೂರ ಹೇಳಿ, ತನ್ನ ಮನೆಯ ಚಾಕರನನ್ನು ಕರೆದು ನನಗೊಂದು ಲೋಟಾ ಕಾಫಿ ಹಾಗು ತಾಂಬೂಲ ತಂದುಕೊಡ ಹೇಳಿದನು. ಆ ಸೇವಕನಾದರೂ ಆತನ ಒಡೆಯನಂತೆಯೇ ಬಲು ಚುರುಕನಿದ್ದುದರಿಂದ, ಅಲ್ಪಾವಧಿಯಲ್ಲೇ ಕಾಫಿ-ತಾಂಬೂಲಗಳು ನನ್ನೆದುರಿಗೆ ಮಂಡಿಸಲ್ಪಟ್ಟವು.

ಆ ಮೇಲೆ ಆ ಮುದುಕನು ಚನ್ನಾಗಿ ನಶ್ಯವೇರಿಸಿಕೊಂಡು ಕುಳಿತು, ನನ್ನ ಸಂಗತಿಯನ್ನೆಲ್ಲ ನಿದಾನವಾಗಿ ಕೇಳಿಕೊಳ್ಳಹತ್ತಿದನು. ಆಗ ನಾನು ಆತನೆದುರಿಗೆ ಹೇಳಿದ ನನ್ನ ಸಂಗತಿಯು ಹೀಗಿದ್ದಿತು:—

(೧)

ಆಗ ನಾನು ಏನನ್ನು ಯೋಚಿಸಿ ಆ ಭಗವಾನ್‌ದಾಸನನ್ನು ನನ್ನ ಕೆಲಸಕ್ಕೆ ನಿಯಮಿಸಿಕೊಂಡೆನೆಂಬದನ್ನು ಈಗ ಸ್ಮರಿಸಿಕೊಂಡು ಹೇಳುವದು ಸಾಧ್ಯವಿರುವದಿಲ್ಲ. ಎಷ್ಟೋ ಭಯದಿಂದಲೂ, ಎಷ್ಟೋ ಸಿಟ್ಟಿನಿಂದಲೂ ಹಾಗು ಎಷ್ಟೋ ಅನುತಾಪದಿಂದಲೂ ಆಗ ನಾನು ಬಹುಮಟ್ಟಿಗೆ ಹುಚ್ಚನಂತೆಯೇ ಆಗಿಬಿಟ್ಟಿದ್ದೆನು. ವಾಚಕ ಮಹಾಶಯರೇ, ನೀವು ಯಾರನ್ನಾದರೂ ಎಂದಾದರೂ ಹೃತ್ಪೂರ್ವಕವಾಗಿ ಪ್ರೀತಿಸುತ್ತಿದ್ದರೆ-ನಿಜವಾದ ಪ್ರೀತಿ, ಪ್ರೇಮವೆಂದು ಏತಕ್ಕೆ ಅನ್ನುವರೋ, ಅದೇ ರೀತಿಯಿಂದ ನೀವು ಆ ವ್ಯಕ್ತಿಯನ್ನು ಪ್ರೀತಿಸುತ್ತಿರುವುದಾದರೆ-ನನಗೆಷ್ಟು ಮರ್ಮಾಂತಿಕ ಕ್ಲೇಶಗಳಾಗುತ್ತಿರುವವೆಂಬದನ್ನು ನೀವು ತಿಳಿಯ

ಬಹುದು. ನಾನು ಈಗಲೂ ಆ ನಿದಾರುಣ ಕಷ್ಟವನ್ನು ಸಹಿಸುತ್ತ ಜೀವಿಸಿರುವದು ಬಹು ಆಶ್ಚರ್ಯಕರವಲ್ಲವೇ? ಆದಿರಲಿ.

ನಾನು ಶೈಶವಾವಸ್ಥೆಯಿಂದಲೂ ಸಾವಿತ್ರಿಯನ್ನು ಪ್ರೀತಿಸುತ್ತಿರುತ್ತೇನೆ. ಸಾವಿತ್ರಿಯಾದರೂ ನನ್ನನ್ನು ಸರ್ವಾಂತಃಕರಣದಿಂದಲೂ ಪ್ರೀತಿಸುತ್ತಿದ್ದಳು. ಆಕೆಯ ಆ ಪ್ರೀತಿಯು ಮಟ್ಟನ್ನು ಅಳೆದು ತಿಳಿಸುವದು ಶಕ್ಯವಿಲ್ಲ. ನಾನು ಸತ್ತರೂ ಕೂಡ ಆ ನನ್ನ ಸಾವಿತ್ರಿಯನ್ನು ಮರೆಯಲಾರೆನು! ಸಾವಿತ್ರಿಯೊಡನೆ ನನ್ನ ವಿವಾಹವಾಗುವುದೆಂದು ನಾನು ಬಾಲ್ಯಕಾಲದಿಂದಲೂ ಕೇಳಿ ತಿಳಿದಿದ್ದೆನು; ಆದರೆ ಆಗ ನನ್ನ ಹೃದಯದ ಯಾವ ಪ್ರವೃತ್ತಿಯೂ ಜಾಗೃತೆಗೊಂಡಿರಲಿಲ್ಲ; ಆದರೂ ಆ ಸಂಗತಿಯನ್ನು ಕೇಳಿ ಕೇಳಿದಾಗ, ಯಾವುದೋ ಒಂದು ತಿಳಿಯದಂತಹ ಆನಂದಪ್ರವಾಹದಿಂದ ನನ್ನ ಸಂಪೂರ್ಣ ಹೃದಯವು ಉತ್ಸಾಹಗೊಳ್ಳದಿರುತ್ತಿರಲಿಲ್ಲ. ಬರಬರುತ್ತ ನಾನು ದೊಡ್ಡವನಾದರೂ ನನ್ನಲ್ಲಿಯ ಆ ವೃತ್ತಿಯು ಸ್ವಲ್ಪವೂ ಚಲಿಸದೆ, ಹಾಗೆಯೇ ಇದ್ದಿತು. ನನ್ನ ಮನೆತನವು ಅಷ್ಟೊಂದು ಸಿರಿವಂತವಿರದ್ದರಿಂದ, ಸಾವಿತ್ರಿಯನ್ನು ನನಗೆ ಕೊಟ್ಟು ಲಗ್ನ ಮಾಡಲಿಕ್ಕೆ ಸಾವಿತ್ರಿಯ ತಂದೆಯು ಕೊಂಚ ಹಿಂದು-ಮುಂದೆ ನೋಡುತ್ತಿದ್ದರೂ ಸಾವಿತ್ರಿಯ ತಾಯಿ ಹಾಗು ಅಣ್ಣನಾದ ನಾರಾಯಣ ಇವರು ಸಾವಿತ್ರಿಯನ್ನು ನನಗೇ ಕೊಟ್ಟು ಮದುವೆ ಮಾಡಿಬಿಡಬೇಕೆಂದು ಸಾವಿತ್ರಿಯ ತಂದೆಯನ್ನು ಹೆಚ್ಚಾಗಿ ಒತ್ತಾಯಪಡಿಸುತ್ತಿದ್ದರು.

ಸಾವಿತ್ರಿಯ ಅಣ್ಣನಾದ ನಾರಾಯಣನು ನನ್ನ ಸಹಾಧ್ಯಾಯಿಯು; ಅದರಿಂದ ಅವರುಗಳ ಬಲವಂತದ ಮೂಲಕ ಕೊನೆಗೆ ಸಾವಿತ್ರಿಯ ತಂದೆಯು ಸಾವಿತ್ರಿಯನ್ನು ನನಗೆ ಕೊಡಲಿಕ್ಕೆ ಒಪ್ಪಿಕೊಳ್ಳಬೇಕಾಯಿತು. ಆದರಿಂದ ಸಾವಿತ್ರಿಯು ಇನ್ನು ಕೆಲ ದಿನಗಳಲ್ಲಿ ನನ್ನವಳೇ ಆಗುವಳೆಂಬ ದೃಢನಂಬಿಗೆಯಿಂದ ನನ್ನ ಅಂತರಂಗವು

ಸಂಪೂರ್ಣ ಸಮಾಧಾನದಿಂದ ತುಳುಕಾಡಹತ್ತಿತು!

ಮುಂದೆ ಕೆಲ ದಿನಗಳಲ್ಲಿಯೇ ವೈದ್ಯರ ಸಲಹೆಯ ಮೇರೆಗೆ ನಾನು ನನ್ನ ರೋಗಗ್ರಸ್ತ ತಾಯಿಯೊಡನೆ ಬಳ್ಳಾರಿ ಪ್ರಾಂತಕ್ಕೆ ಹವೆ ಬದಲಾಯಿಸಲಿಕ್ಕೆಂದು ಹೊರಡಬೇಕಾಯಿತು. ನಾವುಗಳು ಅಲ್ಲಿಗೆ ಹೋದುದರಿಂದ, ನನ್ನ ತಾಯಿಯ ರೋಗ ಪರಿಹಾರವಾಗುವದೊತ್ತಟ್ಟಿಗೇ ಉಳಿದು, ಅವಳ ಆ ರೋಗವು ದಿನದಿನಕ್ಕೆ ಹೆಚ್ಚಾಗತೊಡಗಿತು. ನಾನು ಎಷ್ಟು ಕಷ್ಟ ಸಹಿಸಿ ಔಷಧ-ಪಥ್ಯ, ಸೇವಾ-ಶುಶ್ರೂಷೆ ಮಾಡಿದರೂ ಅವಳಿಗೆ ಗುಣವಾಗದೆ, ಅವಳು ಅಲ್ಲಿಯೇ ಮರಣ ಹೊಂದಿದಳು.

ತಾಯಿಯ ಹೊರತು ಸಂಸಾರದಲ್ಲಿ ನನಗೆ ನನ್ನವರೆಂಬುವವರಿನ್ನಾರೂ ಇರಲಿಲ್ಲ. ತಾಯಿಯ ಮರಣದಿಂದ ಸಂಸಾರದೊಳಗಿನ ನನ್ನ ಎಲ್ಲ ಬಂಧನಗಳೂ ಸಡಿಲಾಗಿ ಬಿಟ್ಟವು. ಆದರಿಂದ ಇಡೀ ಲೋಕವೇ ನನಗೆ ಶೂನ್ಯಮಯವಾಗಿ ತೋರಹತ್ತಿತು. ಆ ಶೂನ್ಯತೆಯಲ್ಲಿ-ಆ ದೈನ್ಯಾವಸ್ಥೆಯಲ್ಲಿ-ಸಾವಿತ್ರಿಯೊಬ್ಬಳೇ ನನ್ನ ಸಂಪೂರ್ಣ ಹೃದಯದಲ್ಲಿ ಪ್ರವೇಶಿಸಿ, ನನ್ನಲ್ಲಿ ಅಭಿನವ ಆಶೆಗಳನ್ನು ಹುಟ್ಟಿಸಲಿಕ್ಕೆ ಪ್ರಾರಂಭಿಸಿದಳು.

ನಾನು ಬಳ್ಳಾರಿ ಸೀಮೆಯಿಂದ ಒಂದೆರಡು ವರ್ಷಗಳ ಮೇಲೆ ಊರಿಗೆ ಹಿಂದಿರುಗಿದೆನು. ಆಗ ಸಾವಿತ್ರಿಯು ಊರಲ್ಲಿರಲಿಲ್ಲ-ನನ್ನಾಕೆಯಾಗಿ ಉಳಿದಿರಲಿಲ್ಲ; ಆಗ ಅವಳು ಬೇರೆಯವರ ಸ್ವತ್ತಾಗಿ ಬಿಟ್ಟಿದ್ದಳು! ನಾನು ಅವಳ ಹೆಸರನ್ನು ಎತ್ತುವದೂ ಕೂಡ ಪಾಪಾಚರಣೆ ಮಾಡಿದಂತಾಗುತ್ತಿತ್ತು. ಆ ಮರ್ಮಾಂತಿಕ ಸಂಗತಿಯನ್ನು ಕೇಳುವ ಮೊದಲೇ ನನಗೆ ಸಾವು ಉಂಟಾಗಿದ್ದರೆ, ಎಷ್ಟೋ ಶ್ರೇಯಸ್ಕರವಾಗುತ್ತಿತ್ತು.

ಸಾವಿತ್ರಿಯ ತಂದೆಯು ಆ ವಿವಾಹವನ್ನು ಬಲಪೂರ್ವಕವಾಗಿ ಮಾಡಿದ್ದನು. ಆತನು ತನ್ನ ಹೆಂಡತಿ-ಮಕ್ಕಳ ಸಲಹೆಯ ಕಡೆಗೆ

ಮುಂಚಿನಂತೆ ಕಿವಿಗೊಟ್ಟಿದ್ದರೆ, ಅವನಿಂದ ಆ ಅನುಚಿತ ಕಾರ್ಯವಾಗುತ್ತಿದ್ದಿಲ್ಲ. ಉಪಾಯವಿಲ್ಲ.

ಸಾವಿತ್ರಿಯ ಮದುವೆಯು ಯಾವನ ಜೊತೆಗೆ ಆಗಿದ್ದಿತೋ, ಆತನ ಹೆಸರು ಶಂಕರರಾಯನೆಂದು. ಆತನಾದರೂ ನನಗೆ ಗುರ್ತಿನವನೇ ಆಗಿದ್ದನು. ಆತನಾದರೂ ನನ್ನ ಮುಂಚಿನ ಜೀವನ್ಮಿತ್ರನೇ ಆಗಿದ್ದನು. ಆತನ ಮನೆಯಲ್ಲಿ ಹಿರಿಯರಾರೂ ಉಳಿಯದ್ದರಿಂದ, ಹುಟ್ಟಾ ನಿರ್ದಯ ಪ್ರಕೃತಿಯ ಶಂಕರರಾಯನ ಚರಿತ್ರವು ತಂದೆ-ತಾಯಿಗಳ ತರುವಾಯ ತಾರುಣ್ಯದ ಭರವಲ್ಲಿ ತೀರ ತಾಳಗೆಟ್ಟುಬಿಟ್ಟಿತ್ತು. ಆಗಿನಿಂದ ನಾನು ಆತನೊಡನೆ ಸಹಕರಿಸಿ ನಡೆಯುತ್ತಿರಲಿಲ್ಲ- ಆಕಸ್ಮಿಕವಾಗಿ ದಾರಿಯಲ್ಲೆಲ್ಲಾದರೂ ಅವನು ಭೆಟ್ಟಿಯಾದರೆ, ಪರಸ್ಪರರಲ್ಲಿ ಕುಶಲ ಪ್ರಶ್ನೆಗಳ ಹೊರತು ಮಿತ್ರತ್ವದ ಯಾವ ಸಂಭಾಷಣವೂ ನಡೆಯುತ್ತಿರಲಿಲ್ಲ.

ಶಂಕರರಾಯನ ವಾರ್ಷಿಕ ಆದಾಯವು ಸಾವಿರ-ಹನ್ನೆರಡು ರೂಪಾಯಿನದಿರಬಹುದು. ಆದರಿಂದಲೂ, ತಿಂಗತಿಂಗಳಿಗೆ ಕೆಲ ಸಾಲ-ಕೈಗಡ ಮಾಡಿಕೊಂಡೂ ಅವನು ತನ್ನ ಸಂಸಾರದ ಖರ್ಚು, ತನ್ನ ಸಾಮಾನ್ಯ ಚಟಗಳ ಖರ್ಚು, ವೇಶ್ಯೆ ಮತ್ತು ಸೆರೆಗಳ ಖರ್ಚುಗಳನ್ನು ಹೇಗಾದರೂ ನೀಗಿಸುತ್ತಿದ್ದನು ನಾರಾಯಣನು ನನಗೆ ಭೆಟ್ಟಿಯಾದಾಗಲೆಲ್ಲ ಶಂಕರರಾಯನ ಸಂಬಂಧದ ಈ ವಿಷಯವನ್ನು ನನ್ನೊಡನೆ ಚರ್ಚಿಸಿ ತನ್ನ ಹೆಚ್ಚಿದ ಅನುತಾಪವನ್ನು ವ್ಯಕ್ತಗೊಳಿಸುತ್ತಿದ್ದನು; ಹಾಗು ತನ್ನ ಪಿತೃನಿಂದೆಯೆಂಬ ಮಹಾಪಾಪದಲ್ಲಿ ಮುಳುಗಿ ಮುಳುಗಿ ಏಳುತ್ತಿದ್ದನು!

ನಾನು ಬಳ್ಳಾರಿ ಸೀಮೆಯಿಂದ ಊರಿಗೆ ಹಿಂದಿರುಗಿ ಬರುವಷ್ಟರಲ್ಲಿ ಸಾವಿತ್ರಿಯ ತಂದೆಯು ಅವಳ ಲಗ್ನವನ್ನುಆ ಸೆರೆಗುಡುಕ ಶಂಕರರಾಯನೊಡನೆ ಮಾಡಿ ಕೊಟ್ಟು, ಮುಂದೆ ಸ್ವಲ್ಪೇ ದಿನಗಳಲ್ಲಿ ಆ ಅನು

ತಾಪದಿಂದ ತಾನೂ ಬಳಲಿ, ಇಹಲೋಕವನ್ನು ತ್ಯಜಿಸಿದ್ದನು: ಅದರಿಂದ ತನ್ನ ಮಗಳ ವಿಷಯದ ಹೆಚ್ಚಿನ ಶೋಚನೀಯ ಸ್ಥಿತಿಯನ್ನು ನೋಡಲಿಕ್ಕೆ ಆತನೀಗ ಉಳಿದಿರಲಿಲ್ಲ.

( ೨ )

ಸಾವಿತ್ರಿಯು ಪರವನಿತೆಯಾದುದರಿಂದ ನನ್ನ ಮನಸ್ಸು ಅತ್ಯಂತ ದುಃಖಿತವಾಯಿತು. ಬಗೆಬಗೆಯಿಂದ ಸಮಾಧಾನ ಹಚ್ಚಿಕೊಳ್ಳಹೋದರೂ ಸಾಧ್ಯವಾಗಲಿಲ್ಲ. ಈ ಸ್ಥಿತಿಯಲ್ಲಿ ಮತ್ತೊಂದು ವರ್ಷವು ಕ್ರಮಿಸಿ ಹೋಯಿತು. ಸಾವಿತ್ರಿಯ ಗಂಡನಾದ ಶಂಕರರಾಯನ ಮನೆಯು ಸಾವಿತ್ರಿಯ ತಂದೆಯ ಮನೆಯಿಂದ ಹೆಚ್ಚು ದೂರ ಇರಲಿಲ್ಲ. ಅವೆರಡರ ನಡುವೆ ಒಂದು ತಾಸಿನ ದಾರಿಯ ಅಂತರವಿರಬಹುದು. ಆದರೂ ಕೂಡ ಶಂಕರರಾಯನು ಸಾವಿತ್ರಿಯನ್ನು ಲಗ್ನವಾದ ನಂತರ ಇದುವರೆಗೆ ಒಮ್ಮೆಯೂ ಕೂಡ ತವರು ಮನೆಗೆ ಹೋಗಗೊಟ್ಟಿದ್ದಿಲ್ಲ. ಸಾವಿತ್ರಿಯಾದರೂ ಆ ಬಗ್ಗೆ ವಿಶೇಷ ಆತುರಪಡುವದಿಲ್ಲೆಂಬದು ನಾರಾಯಣನ ಹೇಳಿಕೆಯಿಂದ ತಿಳಿದಿದ್ದಿತು. ತಂದೆಯ ಮರಣಕಾಲಕ್ಕೆ ಮಾತ್ರ ತವರು ಮನೆಗೆ ಹೋಗಲೇಬೇಕೆಂದು ಸಾವಿತ್ರಿಯು ಗಂಡನೆದುರಿಗೆ ಹಟ ತೊಟ್ಟಿದ್ದಳು; ಆದರೆ ರಾಕ್ಷಸ ಸದೃಶನಾದ ಆ ನೀಚನ ಹತ್ತಿರ ಅವಳ ಆ ಹಟವು ನಡೆಯಲಿಲ್ಲೆಂಬದೇನೂ ಆಶ್ಚರ್ಯವಲ್ಲ. ಅಂದಿನಿಂದಲೇ ಸಾವಿತ್ರಿಯು ತವರು ಮನೆಗೆ ಹೋಗುವ ತನ್ನ ಹವ್ಯಾಸವನ್ನು ಸಂಪೂರ್ಣವಾಗಿಯೇ ತೊರೆದು ಬಿಟ್ಟಿದ್ದಳು; ಇತ್ತೀಚೆಗೆ ಆ ಮಾತು ಕೂಡ ಅವಳ ಬಾಯಿಂದ ಹೊರಡುತ್ತಿರಲಿಲ್ಲ!

ಈ ಸಲ ನಾಡಹಬ್ಬದ ಸಮಯಕ್ಕೆ ಸಾವಿತ್ರಿಯೊಮ್ಮೆ ತವರು ಮನೆಗೆ ಬಂದಿದ್ದಳು; ಆದರೆ ಈಗ ಅವಳು ಅಲ್ಲಿಗೆ ಬಂದದ್ದು ನಾಡಹಬ್ಬವನ್ನು ನೋಡಲಿಕ್ಕೂ ಅದರಲ್ಲಿ ಭಾಗವಹಿಸಿ ಮೆರೆಯಲಿಕ್ಕೂ ಎಂದು ಬಂದವಳಲ್ಲ. ಸಾವಿತ್ರಿಯ ತಾಯಿಗೆ ಘನರೋಗವುಂಟಾ

ಗಿದ್ದಿತು. ಈ ಸಮಯದಲ್ಲಿ ಅವಳನ್ನು ನೋಡಲಿಕ್ಕೆಂದೂ ಅವಳ ಸೇವಾ-ಶುಶ್ರೂಷೆ ಮಾಡಲಿಕ್ಕೆಂದೂ ಅವಳು ತವರುಮನೆಗೆ ಬಂದಿದ್ದಳು. ತಾಯಿಯ ಅಪ್ಪಣೆಯ ಮೇರೆಗೆ ನಾರಾಯಣನು ಶಂಕರರಾಯನಿಗೆ ಹಲವು ಬಗೆಯಿಂದ ಹೇಳಿ, ಪ್ರಾರ್ಥಿಸಿ, ಕೈಕಾಲುಗಳಿಗೆ ಬಿದ್ದು, ಅತ್ತು-ಕರೆದು ತಂಗಿಯನ್ನು ತನ್ನ ಮನೆಗೆ ಕರೆತಂದಿದ್ದನು.

ನಾನು ದಿನಾಲು ನಾರಾಯಣನ ರೋಗಗ್ರಸ್ತ ತಾಯಿಯನ್ನು ನೋಡಲು ಹೋಗುವಂತೆ ಆ ದಿನವೂ ನೋಡಹೋದೆನು. ನನಗೆ ಅವರ ಮನೆಯಲ್ಲಿ ಬಾಲ್ಯಕಾಲದಿಂದಲೂ ಮುಕ್ತದ್ವಾರವಿದ್ದಿತು. ನಾನು ಬಯಸಿದಾಗಲೆಲ್ಲ ಅವರ ಮನೆಗೆ ನಿರಾತಂಕವಾಗಿ ಹೋಗುತ್ತಿದ್ದೆನು; ಬರುತ್ತಿದ್ದೆನು. ಇಂಥ ಹೊತ್ತಿನಲ್ಲಿಯೇ, ಇಂಥ ದಿನವೇ ಹೋಗಬೇಕು, ಬರಬೇಕು ಎಂಬ ನಿಯಮವೇನೂ ಇರಲಿಲ್ಲ. ಈ ಪದ್ಧತಿಯಂತೆ ನಾನು ಆ ದಿನ ಅವರಲ್ಲಿಗೆ ಹೋದಾಗ ಮುಚ್ಚಂಜೆಯ ಸಮಯವಾಗಿದ್ದಿತು.

ಸಾಯಂಕಾಲದ ನಂತರ ಶುಕ್ಲಪಕ್ಷದ ಅಷ್ಟಮಿಯ ಬಹು ಸುಂದರವಾದ ಬೆಳದಿಂಗಳು ಬಿದ್ದಿತ್ತು. ಒಂದಿಷ್ಟೂ ಮೋಡಗಳಿಲ್ಲದ ಶುಭ್ರ ಆಕಾಶವು ನಕ್ಷತ್ರಗಳ ತೇಜದಿಂದ ಕರ್ಪೂರದ ಪರ್ವತದಂತೆ ಶೋಭಿಸುತ್ತಿದ್ದಿತು. ಸಮೀಪದಲ್ಲಿಯೇ ಪ್ರವಹಿಸುತ್ತಿದ್ದ ಚಿಕ್ಕ ನದಿಯ ಸುಮಧುರ ಕಲರವವು ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಎದುರಿಗಿನ ದಾರಿಯಿಂದ ನಡೆದಿದ್ದ ಯಾವನೋ ಒಬ್ಬ ಮಾರ್ಗಸ್ಥ ಬಾಲಕನು:—“ಗುಣಮಣಿ ಕೃಷ್ಣಾ ಈ ದೀನನ ಮೇಲೆ ದಯೆದೋರುವಿಯಾ?” ಎಂಬ ಗೀತಚರಣವನ್ನು ಮತ್ತೆ ಮತ್ತೆ ಹಾಡುತ್ತ ತನ್ನ ಮನರಂಜನೆ ನಡೆಸಿದ್ದನು. ಆ ಗಾಯನದಿಂದ ಆ ಬಾಲಕನ ಹೃದಯವು ಹರ್ಷಪ್ರಫುಲ್ಲಿತವಾಗಿದ್ದಿತು. ಆಗ ಅವನು ಎಷ್ಟು ಉನ್ಮಾದ, ಮತ್ತು ಆನಂದೋಚ್ಛ್ವಾಸಗಳಿಂದ ತುಂಬಿದ್ದನೆನ್ನಲಿ? ಜೀವನ್ಮೃತನೂ ಜಗತ್ತಿ

ನೊಳಗಿನ ಯಾವ ಆನಂದವನ್ನೂ ಎಂದೂ ಪಡೆಯದಂಥವನೂ ಆದ ನಾನು ಅದನ್ನು ತಿಳಿಯುವ ಬಗೆ ಹೇಗೆ? ನಾನು ನನ್ನ ಹೃದಯದಲ್ಲಿ ಯಾವ ನರಕಾಗ್ನಿಯನ್ನು ಸ್ಥಾಪಿಸಿಕೊಂಡಿರುವೆನೋ ಅದನ್ನು ಆಜೀವನದಲ್ಲಿ ಸಹಿಸಲೇಬೇಕಾಗುವುದು. ನಾನು ಆಗ ಯಾವ ಕಡೆಗೆ ಮೋರೆ ತಿರುವಿ ನೋಡಿದರೂ ಎಲ್ಲವೂ ಕೇವಲ ಹಾಸ್ಯಪ್ರಫುಲ್ಲ! ನಗುತ್ತಿರುವ ಚಂದ್ರ, ನಗುತ್ತಿರುವ ನಕ್ಷತ್ರಮಾಲೆ, ನಗುತ್ತಿರುವ ಭೂಪ್ರದೇಶ, ನಗುತ್ತಿರುವ ಮಾವು ಮೊದಲಾದ ಮರಗಳ ಟೊಂಗೆಗಳಲ್ಲಿ ಕುಳಿತ ಹಕ್ಕಿಗಳಝುಂಕರಿಸುತ್ತಿರುವ ಮಧುರ ಕಂಠಸ್ವರ, ಬೆಳದಿಂಗಳಿನಿಂದ ನಗುತ್ತಿರುವ ಪ್ರಕೃತಿಯ ಸುಂದರ ಸುಲಲಿತ ಶೋಭೆ! ಆದರೆ ನಾನು ಮಾತ್ರ ಶಾಂತಿಶೂನ್ಯ, ಆಶಾಶೂನ್ಯ, ಕರ್ತವ್ಯಚ್ಯುತ, ಉದ್ದೇಶಹೀನನಾದ ಯಾವನೋ ಒಬ್ಬ ದುರದೃಷ್ಟ ಮಾರ್ಗದೊಳಗಿನ ಒಬ್ಬಾನೊಬ್ಬ ಒಬ್ಬೊಂಟಿಗ ಭಿಕಾರಿಯಾಗಿದ್ದೆನು.

ಆ ಮನೆಯ ತಲೆಬಾಗಿಲ ಬಳಿಯಲ್ಲೇ ನಾರಾಯಣನು ನನಗೆ ಭೆಟ್ಟಿಯಾದನು. ಆಗ ಆತನು ಡಾಕ್ಟರರ ಔಷಧಾಲಯಕ್ಕೆ ನಡೆದಿದ್ದನು. ಅದರಿಂದ ಆಗ ಆತನೊಡನೆ ವಿಶೇಷ ಮಾತು ಕಥೆಗಳು ನಡೆಯಲಿಲ್ಲ. ನಾನು ಹಾಗೆಯೇ ಮನೆಯೊಳಗೆ ಹೋಗಿ, ಯಾವ ಕೋಣೆಯಲ್ಲಿ ನಾರಾಯಣನ ತಾಯಿಯು ಮಲಗಿದ್ದಳೋ, ಆ ಕೋಣೆಯ ಬಾಗಿಲಿಗೆ ಹೋಗಿ ನಿಂತುಕೊಂಡೆನು. ಆಗ ಅಲ್ಲಿ ನಾರಾಯಣನ ತಾಯಿಯು ಹಾಸಿಗೆಯ ಮೇಲೆ ಬಿದ್ದುಕೊಂಡು ನರಳುತ್ತಿದ್ದಳು. ಅವಳ ಬಳಿಯಲ್ಲೇ ಒಬ್ಬ ಸೊರಗಿ ಸಾಯಲಾಗಿದ್ದ ಹೆಣ್ಣುಮಗಳು ಕುಳಿತು, ಆ ರೋಗಿಯ ಹಣೆಯ ಮೇಲೆ ಮೆಲ್ಲ ಮೆಲ್ಲನೆ ಕೈಯಾಡಿಸುತ್ತಿದ್ದಳು. ದೀಪದ ಬೆಳಕು ಒಂದು ಕಡೆಯಿಂದ ಬಂದು ಅಲ್ಲಿ ಹಾಗೆ ಕುಳಿತಿದ್ದ ಆ ಸ್ತ್ರೀಯ ಒಣಗಿ ಬಾಡಿದಂತಹ ಗಲ್ಲಗಳು, ಕೋಳಿಯಂಥ ಉದ್ದನ್ನ ಕುತ್ತಿಗೆ, ರಕ್ತವಿಲ್ಲದೆ ಕಪ್ಪಿಟ್ಟು ಹೋಗಿದ್ದ ತುಟಿಗಳಿಂದ

ಯುಕ್ತವಾದ ಸಾಯಲಾರದ ಹೆಣದಂತಹ ಮೋರೆಯ ಮೇಲೆ ಬಿದ್ದಿತ್ತು. ನಾನು ಆ ಸ್ತ್ರೀವ್ಯಕ್ತಿಯನ್ನು ಒಮ್ಮೆಲೆ ಗುರ್ತಿಸದಾದೆನು; ಕೆಲ ಕ್ಷಣಗಳ ನಂತರದಲ್ಲಿ ಅವಳೇ ನನ್ನ ಸಾವಿತ್ರಿಯೆಂಬದು ತಿಳಿಯಿತು. ಸುಮಾರು ಎರಡು ವರ್ಷಗಳ ತರುವಾಯ ನಾನು ಇಂದೇ ಸಾವಿತ್ರಿಯನ್ನು ಕಂಡದ್ದು. ಅವಳನ್ನು ಈ ದಿನ ಆ ಅವಸ್ಥೆಯಲ್ಲಿ ನೋಡುವದಕ್ಕಿಂತ ನೋಡದಿದ್ದರೇ ಕ್ಷೇಮಕರವಾಗುತ್ತಿತ್ತು. ಮೋಡವಿಲ್ಲದ ಆಕಾಶದೊಳಗಿನ ಪೂರ್ಣಚಂದ್ರನಂತಹ ಸಾವಿತ್ರಿಯ ನಗೆಮೊಗವು ಕಡು ಬಿಸಿಲಿನಿಂದ ಬಳಲಿ ಬೆಂಡಾದಂತೆ ತೀರ ಕಕ್ಕಾವಿಕ್ಕಿಯಾಗಿಯೂ ಬಿಳುಪಾಗಿಯೂ ತೋರಹತ್ತಿತ್ತು. ಅವಳ ಆ ಲಾವಣ್ಯೋಜ್ವಲ ಸುಂದರ ದೇಹಲತೆಯು ಬಾಡಿ ನೆಲಕ್ಕೆ ಬಿದ್ದಿದ್ದ ಹೂವಿನಂತೆ ಕಾಂತಿಹೀನವಾಗಿತ್ತು. ಹರಿಣದಂತಹ ತೇಜಃಪುಂಜಗಳಾದ ಹಾಗು ಸ್ನೇಹಪ್ರಫುಲ್ಲಗಳಾದ ಆಕೆಯ ಅತ್ಯಂತ ವಿಸ್ತೃತವಾದ ಕಣ್ಣುಗಳು ಕಂದಿ ಹೋಗಿದ್ದವು. ನಾನು ವಿಷಾದದಿಂದ, ಭಗ್ನವಾದ ಹೃದಯದಿಂದ ಸಾವಿತ್ರಿಯನ್ನು ನೋಡಹತ್ತಲು. ಪರಕ್ಷಣದಲ್ಲಿಯೇ ಅಂಗಾಲಿನಿಂದನ ಡುನೆತ್ತಿಯವರೆಗಿನ ನನ್ನ ಶರೀರವೆಲ್ಲ ಬೆವರೊಡೆಯಿತು. ಎರಡೇ ವರ್ಷಗಳಲ್ಲಿ ಮನುಷ್ಯರ ದೇಹಸ್ಥಿತಿಯು ಇಷ್ಟು ಭಯಾನಕವಾಗಿ ಪರಿಣಮಿಸುವದೇ! ದೇವಾ, ಇದು ಪರಮಾಶ್ಚರ್ಯಕರದ ಸಂಗತಿಯಲ್ಲವೆ?

ಬಳಿಕ ನಾನು ನನ್ನ ಮನದೊಳಗೇ ದೇವರನ್ನು ಕುರಿತು ಪ್ರಾರ್ಥಿಸತೊಡಗಿದೆನು:--'ಎಲೈ ಕರುಣಾಳುವೇ! ಎಲೈ ಅನಾಥ ರಕ್ಷಕನೇ! ಎಲೈ ದೀನರ ಆಶ್ರಯಸ್ಥಾನವೇ, ನಿರಾಶ್ರಯಿಗಳ ಆಶ್ರಯಿಯೇ! ಯಾವಳ ಆಶೆಯನ್ನು ನಾನು ತ್ಯಜಿಸಿರುವೆನೋ, ಯಾವಳ ಹೆಸರನ್ನು ಎತ್ತುವದು-ಚಿಂತಿಸುವದು ಕೂಡ ನನಗೆ ಅಧಿಕಾರವಿರುವದಿಲ್ಲವೋ, ದೇವಾ! ಅವಳನ್ನು ಈ ಕಂಗಾಲ ಸ್ಥಿತಿಯಲ್ಲಿ ನನ್ನಮುರಿಗೆ ಹಿಡಿದಿರುವೆಯಾ? ಪ್ರಭು! ನನ್ನ ಹೃದಯವು ಅಸಹ್ಯ ವೇದನೆಗಳಿಂದ ಒಡೆದು ಚೂರು

ಚೂರಾಗಿ ಹೋಗಲಿ. ಅವಿರತ ತೃಷಾನಲದಿಂದ ಸುಟ್ಟು ಸೂರೆಗೊಳ್ಳಲಿ. ಅದು ಬೆಂದು ಬೆಂಡಾಗಿ ಹೋದರೂ ಚಿಂತೆಯಿಲ್ಲ; ಆದರೆ ಏನಾದರೂ ನನ್ನ ಸಾವಿತ್ರಿಯನ್ನು ಮಾತ್ರ ಸುಖಿಯಾಗಿರಿಸು. ಅವಳ ಈ ಕಾಡಿಗೆಯಂತೆ ಕಪ್ಪಿಟ್ಟಿರುವ ಮುಖವನ್ನು ಮತ್ತೆ ಪೂರ್ಣ ಚಂದ್ರನಂತೆ ಬೆಳಗಿಸು! ದೇವಾ! ನಾನು ಇಹಜನ್ಮದಲ್ಲಿ ನಿನ್ನೆಡೆಯಲ್ಲಿ ಇದಕ್ಕೂ ಹೆಚ್ಚಿನದೇನನ್ನೂ ಬಯಸುವುದಿಲ್ಲ.

(೩)

ನನ್ನನ್ನು ಕಂಡಕೂಡಲೆ ಸಾವಿತ್ರಿಯು ಮೋರೆಯ ಮೇಲೆ ಸೆರಗನ್ನೆಳೆದುಕೊಂಡಳು; ಹಾಗು ತವಕದಿಂದ ಅಲ್ಲಿಂದೆದ್ದು ನಾಚಿಕೆಯಿಂದ ತಲೆ ತಗ್ಗಿಸಿಕೊಂಡು, ಗಾಬರಿಯಿಂದ ಆ ರೋಗಿಯ ಕೋಣೆಯಿಂದ ಹೊರಬಿದ್ದಳು. ಆ ಅವಸರದ ಚಲನವಲನದಲ್ಲಿ ಆಕೆಯ ಹಣೆಗೆ ಬಾಗಿಲದ ಅಂಚು ಬಡಿದು, ಬುಗುಟೆ ಬಂದಿತು! ಆಗ ಆಕೆಯು ಆ ಕೋಣೆಯ ಹೊರಗೆ ಹೋಗಿ ಒತ್ತಟ್ಟಿಗೆ ಕುಳಿತುಕೊಂಡಳು.

ನಾನು ಬೆಪ್ಪನಂತಾದೆನು. ಆಗ ಏನು ಮಾತಾಡಬೇಕೆಂಬದು ನನಗೆ ತಿಳಿಯಲೊಲ್ಲದು ಕಡೆಗೆ ಹೇಳಿದೆನೇನಂದರೆ:--"ಸಾವಿತ್ರೀ. ಇಲ್ಲಿಯೇ ಕೂಡ್ರು; ನಿನಗೆ ನನ್ನ ಗುರ್ತು ಹತ್ತಲಿಲ್ಲೇನು?''

ಸಾವಿತ್ರಿಯನ್ನು ನೋಡಿದ ಕೂಡಲೆ ಅವಳು ಸಾವಿತ್ರಿಯು ಅಹುದೋ ಅಲ್ಲವೋ ಎಂದು ಮೊದಲು ನನಗೆ ಹೇಗೆ ಒಂದು ಬಗೆಯ ಅನುಮಾನವುಂಟಾಗಿದ್ದಿತೋ, ಹಾಗೆಯೇ ನನ್ನ ವಿಷಯವಾಗಿ ಅವಳಿಗೂ ಆಗಿರಬಹುದೆಂದು ನಾನು ತರ್ಕಿಸಿದೆನು. ಈ ಸಾವಿತ್ರಿಯು ಆ ಸಾವಿತ್ರಿಯಂತಿಲ್ಲವೆಂದು ನನ್ನ ಮನಸ್ಸಿಗೆ ಒಮ್ಮೆಲೆ ಹೊಳೆಯಿತು. ಅದು ಏನೇ ಇರಲಿ; ಅಷ್ಟರಲ್ಲಿ ಪಕ್ಕದ ಕೋಣೆಯೊಳಗಿಂದ ಯಾವುದೊಂದು ಹಸುಗೂಸಿನ ಅಳುವು ಕೇಳಬರತೊಡಗಿತು. ಸಾವಿತ್ರಿಯು ತಾಯಿಯನ್ನು ಕುರಿತು ಮೆಲ್ಲನೆ "ನಾನು ಈಗಲೆ ಬರುತ್ತೇನೆ"ಂದು ಹೇಳಿ, ಅತ್ತ ನಡೆದಳು.

ನಾನು ಚಿಂತೆಯಿಂದ ಬಳಲಿದವನಾಗಿ ಆ ರೋಗಿಯ ಹಾಸುಗೆಯ ಬಳಿಗೆ ಹೋಗಿ ನಿಂತುಕೊಂಡೆನು. ಆಗ ಸಾವಿತ್ರಿಯ ತಾಯಿಗೆ ತುಸ ಜಂಪುಹತ್ತಿತ್ತು. ಅವಳ ಮೋರೆಯು ನಾನು ನಿಂತುಕೊಂಡಿದ್ದ ಕಡೆಗಿರದೆ, ಬೇರೆ ಕಡೆಗಿದ್ದಿತು. ಅದನ್ನು ನಾನು ಮೊದಲಿಗೆ ತಿಳಿಯದೆ, "ಈಗ ನಿಮಗೆ ಹೇಗಿದೆ?" ಎಂದು ಮೆಲ್ಲನೆ ಕೇಳಿದೆನು.

ಅಷ್ಟು ಶಬ್ದದಿಂದಲೇ ಸಾವಿತ್ರಿಯ ತಾಯಿಯ ಆ ಜಂಪು ಹರಿಯಿತು. ಆವಳು ನನ್ನನ್ನು ನೋಡಿ ತನ್ನ ಹತ್ತರ ಕೂಡ್ರ ಹೇಳಿದಳು. ನಾನು ನಿತ್ಯದಂತೆ ಅವಳ ಹಾಸುಗೆಯ ಒಂದು ಕಡೆಗೆ ಕುಳಿತುಕೊಂಡೆನು. ತದನಂತರ ಅವಳು ಮಾತನಾಡತೊಡಗಿದಳು:—"ತಮ್ಮಾ, ಈ ಬೇನೆಯು ನನಗೆ ಹಿಹಿತವೆನಿಸುವದಿಲ್ಲ. ನಾನು ಈ ಬೇನೆಯೊಳಗಿಂದ ಬದುಕುವೆನೆಂದು ನನಗೆ ತೋರುವದಿಲ್ಲ. ನಾರಾಯಣನಿರುವನು; ಸಾವಿತ್ರಿಯಿರುವಳು. ಅವರನ್ನು ನೀನು ಎಂದಿನಂತೆ ನೋಡಿಕೋ. ನೀನು ಅವರನ್ನು ನಿನ್ನ ಚಿಕ್ಕ ತಮ್ಮ-ತಂಗಿಯರಂತೆ ನೋಡಿಕೊಳ್ಳುತ್ತೀ ಎಂಬದನ್ನು ನಾನು ಬಲ್ಲೆನು. ಇನ್ನು ಅವರಿಗೆ ನಿನ್ನ ಹೊರತು ಬೇರೆ ಯಾವ ಆಪ್ತರಿಷ್ಟರೂ ಇರುವುದಿಲ್ಲ. ತಮ್ಮಾ, ಸತ್ಯವಂತಾ! ನೀನೇ ಅವರುಗಳ ನಿಜ ಸಹೋದರನು!"

ಆಗ ನಾನು ಹೇಳಿದೆನೇನಂದರೆ:—ಈ ಬಗ್ಗೆ ನೀವು ನನ್ನನ್ನು ಕುರಿತು ಹೆಚ್ಚಾಗಿ ಹೇಳುವ ಆವಶ್ಯಕತೆಯಿರುವದಿಲ್ಲ. ನಾರಾಯಣನೂ ಸಾವಿತ್ರಿಯೂ ನನ್ನನ್ನು ತಮ್ಮ ಹಿರಿಯ ಅಣ್ಣನಂತೆ ಮನ್ನಿಸುವದನ್ನೇನು ನಾನು ಅರಿತಿಲ್ಲವೇ? ಆಜೀವನದವರೆಗೂ ನಾನು ಅವರುಗಳ ಕಲ್ಯಾಣವನ್ನೇ ಚಿಂತಿಸುವವನು. ದೇವರ ದಯೆಯಿಂದ ನೀವು ಬೇಗನೆ ಆರೋಗ್ಯಲಾಭವನ್ನಷ್ಟು ಪಡೆದರೆ, ಎಲ್ಲವೂ ಸರಿಹೋಗುವುದು!"

ನಾರಾಯಣನ ತಾಯಿಯು ಆಗ ಹೇಳಿದಳು:—"ಬೇಡಪ್ಪಾ-ಬೇಡ. ನನಗಿನ್ನು ಬದುಕುವ ಇಚ್ಛೆಯೇ ಇರುವುದಿಲ್ಲ; ಆದರೆ ನಾನೀಗ

ನಾರಾಯಣನ ವಿಷಯವಾಗಿ ಚಿಂತಿಸುವುದಿಲ್ಲ. ಅವನು ಗಂಡು ಹುಡುಗನು; ಓದು ಬರೆಹವನ್ನು ಕಲಿತಿರುವನು. ದೊಡ್ಡವರ ಮನೆಯ ಕನ್ಯೆಯೊಡನೆ ಆತನ ಮದುವೆಯೂ ಆಗಿದೆ. ಏನಾದರೂ ಆತನು ಇಂದಿಲ್ಲ ಕೆಲವು ದಿನಗಳ ಮೇಲಾದರೂ ತಲೆಯೆತ್ತಿ ನಿಂತುಕೊಂಡಾನು. ನಾನು ಚಿಂತಿಸುತ್ತಿರುವದು ಕೇವಲ ಸಾವಿತ್ರಿಯ ಬಗ್ಗೆ. ಸಾವಿತ್ರಿಯ ಗಂಡನು ದುರ್ವ್ಯಸನಿಯು! ಒಣ ಠೇಂಕಾರದ ಮನುಷ್ಯನು! ನನ್ನ ಬಂಗಾರದಂತಹ ಸಾವಿತ್ರಿಯ ಗತಿಯನ್ನು ಆತನೆಂತು ಮಾಡಿರುವನೆಂಬದನ್ನು ನೆನಸಿದರೆ, ಕಂಬನಿಗಳು ಧಾರೆಗಟ್ಟಿ ಸುರಿವವು. ಸಾವಿತ್ರಿಯ ಈ ಕಠಿಣಾವಸ್ಥೆಯನ್ನು ಕಂಡು ನನಗೆ ಮರಣವೂ ಸುಖವೆನಿಸುವುದಿಲ್ಲ. ಸಾವಿತ್ರಿಯು ಈಗ ಇಲ್ಲಿಗೆ ಬಂದಿರುತ್ತಾಳೆ; ಹಲವು ಉಪಾಯಗಳಿಂದ ನಾವು ಅವಳನ್ನು ಇಲ್ಲಿಗೆ ಕರೆತಂದಿರುತ್ತೇವೆ."

"ಹೌದು; ನಾನು ಈಗ ತಾನೇ ಅವಳನ್ನು ನೋಡಿದೆನು; ಆದರೆ ನಾನು ಮೊದಲು ಅವಳನ್ನು ಗುರ್ತಿಸದಾದೆನು!" ಎಂದು ನಾನು ಹೇಳಲು,

ನಿಟ್ಟುಸಿರುಗರೆದು, ಸಾವಿತ್ರಿಯ ತಾಯಿಯು:—"ಹೌದಪ್ಪಾ-ಹೌದು. ನಮ್ಮ ಸಾವಿತ್ರಿಯು ಈಗ ಅದೇ ಬಗೆಯಾಗಿರುತ್ತಾಳೆ" ಎಂದು ಆ ಮುದುಕೆಯ ಬಾಯಿಂದ ಶಬ್ದಗಳು ಹೊರಡುತ್ತಿರುವಾಗಲೇ ಅವಳ ಕಣ್ಣುಗಳಿಂದ ಎರಡು ಅಶ್ರುಬಿಂದುಗಳು ಪಟ್ ಪಟ್ಟೆಂದು ಹಾಸುಗೆಯ ಮೇಲೆ ಬಿದ್ದವು! ಬಳಿಕ ಆ ವೃದ್ಧಳು:—"ತಮ್ಮಾ,. ಸಾವಿತ್ರಿಗೊಂದು ಕೂಸಾಗಿದೆ; ನೀನು ನೋಡಿರುವೆಯಾ?"

ನಾನು ಒತ್ತಾಯದ ನಗೆದೋರುತ್ತ:-'ಇಲ್ಲ' ಎಂದು ಅಂದೆನು.

(೪)

ಸಾವಿತ್ರಿಯು ಪಕ್ಕದ ಕೋಣೆಯಲ್ಲೀ ಇದ್ದಳು. ಆ ಮುದುಕೆಯು ಸಾವಿತ್ರಿಯನ್ನು ಕೂಗಿ ಕರೆದು:—"ಸಾವಿತ್ರೀ, ಮನಮೋಹನ

ನನ್ನೊಮ್ಮೆ ಇಲ್ಲಿಗೆ ಕರೆಕೊಂಡು ಬಾ. ಇಗೋ, ಇಲ್ಲಿ ನಿಮ್ಮ ಸತ್ಯವಂತಣ್ಣನು ಬಂದಿರುತ್ತಾನೆ. ಅವನು ನಿನ್ನ ಮನಮೋಹನನನ್ನು ನೋಡಲಿ" ಎಂದು ಹೇಳಿದಳು.

ಇದನ್ನು ಹೇಳಲಿಕ್ಕೆ ಕಾರಣವಿಷ್ಟೇ, ಈ ಮೊದಲಿನ ಹಸುಗೂಸಿನ ಆಳೋಣವನ್ನು ಕೇಳಿ ಹಾಗು ಆಗಿನ ಸಾವಿತ್ರಿಯ ಚಡಪಡಿಕೆಯನ್ನು ನೋಡಿ ಸಾವಿತ್ರಿಗೆ ಮಗುವಾಗಿದೆ ಎಂಬುವದನ್ನು ನಾನು ಆಗಲೆ ಕಲ್ಪಿಸಿದ್ದೆನು. ಮುಂದೆ ಅಲ್ಪಾವಕಾಶದಲ್ಲೇ ಬಗಲಲ್ಲಿ ಗಂಡು ಕೂಸನ್ನೆತ್ತಿಕೊಂಡಂಥ ಸಾವಿತ್ರಿಯು ನಾನು ಕುಳಿತಿದ್ದ ಕೋಣೆಗೆ ಬಂದಳು. ಅವಳನ್ನು ನೋಡಲು, ಬಾಲ್ಯದಲ್ಲಿ ಉಸುಗಿನ ಅನ್ನ, ಬೀದಿಯೊಳಗೆ ಬೆಳೆದ ಸೊಪ್ಪಿನ ಪಲ್ಲೆ, ಬರಿಯ ನೀರ ಸಾರು, ಮಣ್ಣಿನಿಂದ ಮಾಡಿದ ರೊಟ್ಟಿ ಮುಂತಾದವುಗಳನ್ನು ಸಿದ್ಧಪಡಿಸುವ ಅಸೀಮ ಕಾರ್ಯಕ್ಷಮತಾಧಾರಿಣಿಯಾದ ಅಡುಗಲಜ್ಜಿಯೂ ಹಾಸ್ಯಚಪಲಳೂ ಆದ ಆ ಸಾವಿತ್ರಿ ಇವಳಿರದೆ, ಇವಳು ಮಾತೃಪದಾಧಿಷ್ಠಾತ್ರಿಯಾದ ಸಾವಿತ್ರಿಯಾಗಿದ್ದಳು!

ಸಾವಿತ್ರಿಯು ಅಲ್ಲಿಗೆ ಬಂದವಳೇ ದೂರ ನೆಲದ ಮೇಲೆ ಕುಳಿತಳು. ಬಾಲ್ಯದಲ್ಲಿ ನಾನೂ ಆಕೆಯೂ ಒತ್ತಟ್ಟಿಗೆ ಕುಳಿತು ಆಟವಾಡಿದ್ದೆವು; ಕಣ್ಣುಚ್ಚಿನಾಟ, ಕುದುರೆಯಾಟ ಆಡಿದ್ದೆವು; ಹಲವು ಪ್ರಸಂಗಗಳಲ್ಲಿ ಜಗಳ ಕಾದಿದ್ದೆವು; ಮತ್ತೆ ಒಂದುಗೂಡಿದ್ದೆವು. ಹಾಗೆ ಕಾದಾಟ ಮುಗಿದ ಮೇಲೆ ಕೂಡಿದಾಗ ಒತ್ತಟ್ಟಿಗೆ ಕುಳಿತು ಎಷ್ಟೋ ಮಾತು-ಕತೆಗಳನ್ನಾಡಿದ್ದೆವು; ಆದರೆ ಆ ನಮ್ಮ ಶೈಶವಾವಸ್ಥೆಯು ಖಂಡಿತವಾಗಿ ಯಾವ ದಿನ ಮುಗಿಯಿತೆಂಬವನ್ನು ಇಂದಿಗೂ ನನ್ನಿಂದ ಹೇಳಲಿಕ್ಕಾಗುವದಿಲ್ಲ. ಈಗ ಕೇವಲ ಅದರ ನೆನಪು ಮಾತ್ರ ಉಳಿದಿರುತ್ತದೆ. ಏನೇ ಆಗಲಿ, ಆಕೆಯು ಈಗ ನನ್ನ ಆ ಬಾಲ್ಯ ಸಖಿಯಾದ ಸಾವಿತ್ರಿಯಾಗಿರದಿದ್ದರೂ, ಈ ಸಾವಿತ್ರಿಯು ನಮ್ಮ ಗ್ರಾಮದ, ನಮ್ಮ ಓಣಿಯ

ನನ್ನ ಪರಿಚಯದ ಹುಡುಗಿ ಎಂಬದನ್ನಾದರೂ ಆಕೆ ಅಲ್ಲಗಳೆಯುವಂತಿರಲಿಲ್ಲ. ಅದರಿಂದ ನನ್ನನ್ನು ಕಂಡಕೂಡಲೆ ಅವಳು ಅಷ್ಟು ನಾಚಿಕೊಳ್ಳುವ ಅವಶ್ಯಕತೆಯೇನೂ ಇರಲಿಲ್ಲ. ಸಾವಿತ್ರಿಯು ಅಲ್ಲಿಗೆ ಬಂದು ಕುಳಿತಾಗಲೂ ತನ್ನ ಮೋರೆ ಮುಚ್ಚುವ ಹಾಗೆ ಸೆರಗನ್ನು ಮುಖದ ಮೇಲೆ ಜಗ್ಗಿಕೊಂಡೇ ಕುಳಿತಳು. ನಾನು ಅಷ್ಟರಲ್ಲಿ ಅವಳ ಆ ಗಂಡು ಹುಡುಗನನ್ನು ಪ್ರೀತಿಯಿಂದ ಎತ್ತಿಕೊಂಡೆನು.

ಆ ಮಗುವು ಒಳ್ಳೇ ಸುಂದರವೂ ಸಲಕ್ಷಣವೂ ಆಗಿದ್ದಿತು. ಆ ಮಗುವಿನ ಮೋರೆ, ಮೂಗು, ಕಣ್ಣುಗಳ ಮಾಟವೆಲ್ಲ ಕೇವಲ ಅದರ ತಾಯಿಯಾದ ಸಾವಿತ್ರಿಯಂತೆಯೇ ಇದ್ದಿತು. ಸಾವಿತ್ರಿಯ ಮನಸ್ಸಿಗೆ ಮೋಹಿನಿಯನ್ನುಂಟು ಮಾಡುವ ಸಲುವಾಗಿಯೇ ಆ ಮನಮೋಹನನು ಜನ್ಮಿಸಿದ್ದರಿಂದ, ಸಾವಿತ್ರಿಯೇ ಅವನಿಗೆ 'ಮನಮೋಹನ' ಎಂಬ ಸಾರ್ಥಕ ಹೆಸರನ್ನಿಟ್ಟಿರುವಳೆಂಬಂತೆ ನನಗನಿಸಿತು.

ತದನಂತರ ಸಾವಿತ್ರಿಯ ಜನನಿಯು ಸಾವಿತ್ರಿಯ ದೌರ್ಭಾಗ್ಯವವನ್ನು ಕುರಿತು ಹತ್ತಾರು ಸಾರೆ ಹಳಿದಳು; ಹಾಗು ಸಾವಿತ್ರಿಯ ಗಂಡನಾದ ಶಂಕರರಾಯನನ್ನು ಅನೇಕ ಬೈಗಳುಗಳಿಂದ ಬೈಯುತ್ತ ನಿಂದಾವಾದ್ಯವನ್ನು ಬಾರಿಸಹತ್ತಿದಳು. ತಾಯಿಯ ಆ ಕೃತಿಯಿಂದ ಮೊದಲೇ ಚಿಂತೆಯಿಂದ ಬಾಡಿದ್ದ ಸಾವಿತ್ರಿಯ ಮುಖವು ಮತ್ತಿಷ್ಟು ಕಪ್ಪಿಟ್ಟಿತು; ಇನ್ನಿಷ್ಟು ಅಪ್ರಸನ್ನವಾಯಿತು. ಪತಿನಿಂದಾ ಶ್ರವಣವು ಹಿಂದೂ ರಮಣಿಮಾತ್ರರಿಗೆಲ್ಲ ಅಪ್ರೀತಿಕರವೆಂಬುದೇನೋ ನಿಜ. ಅವರಲ್ಲೂ ಸಾವಿತ್ರಿಯು ಸುಶಿಕ್ಷಿತಳು, ಸತ್ಕುಲೋತ್ಪನ್ನಳು. ಅಂದಬಳಿಕ ಆ ಸಾವಿತ್ರಿಯ ಪತಿಭಕ್ತಿಯು ಅಚಲವಾಗಲಿ; ಸಾವಿತ್ರಿಯ ಚರಿತ್ರಹೀನ ಪತಿಯು ದೇವತುಲ್ಯನಾಗಲಿ: ಅದರಿಂದ ಸಾವಿತ್ರಿಯು ಸುಖಿಯಾಗಲಿ; ಅಂದರೆ ಅದೇ ನನಗೆ ಸುಖಕರವು, ಎಂದು ನಾನು ನನ್ನ ಮನಸ್ಸಿನಲ್ಲೇ ಹಾರೈಸಹತ್ತಿದ್ದೇನು ಚೋಜಿಗ!

(೫)

ಸಾವಿತ್ರಿಯ ಜನನಿಯು ಆ ರೋಗದಿಂದ ಬದುಕಿಳಿಯಲಿಲ್ಲ. ಅವಳ ಪವಿತ್ರ ಆತ್ಮವು ಆ ಮೊದಲೇ ಪರಲೋಕವನ್ನು ಕುರಿತು ತೆರಳಿದ್ದ ಆಕೆಯ ಪತಿಯು ಕಡೆಗೆ ಹೊರಟು ಹೋಯಿತು. ಮುಂದೆರಡು ತಿಂಗಳುಗಳಿಗೆ ತಂದೆ-ತಾಯಿಗಳನ್ನು ಕಳಕೊಂಡ ಸಾವಿತ್ರಿಯು ತನ್ನ ಗಂಡನ ಮನೆಗೆ ಹಿಂದಿರುಗಿದಳು; ಹಾಗು ಮುಂಚಿನಂತೆ ಈಗಲೂ ಆ ದುರ್ಭಾಗ್ಯಿನಿಯು ಆ ಸೆರೆಗುಡುಕ, ವಿಚಾರ-ವಿವೇಕಶೂನ್ಯನಾದ ಗಂಡನ ಹಿಂಸೆಯಿಂದ ಉತ್ಪೀಡಿತಳಾಗತೊಡಗಿದಳು-

ಬರಬರುತ್ತ ನನ್ನಲ್ಲಿಯ ಧೈರ್ಯವು ಕಳಚತೊಡಗಿತು. ಏನು ಮಾಡಬೇಕಾದರೂ ಮಾಡಿ ಸಾವಿತ್ರಿಯನ್ನು ಆ ಕಷ್ಟದಿಂದ ಮುಕ್ತಗೊಳಿಸಬೇಕೆಂದು ನನಗನಿಸಹತ್ತಿತು. ಅದಕ್ಕೇನು ಉಪಾಯ ಕೈಕೊಳ್ಳಬೇಕು? ಎಂಬ ವಿಷಯದಲ್ಲಿ ನಾನು ಹಲವುಬಗೆಯಾಗಿ ಚಿಂತಿಸಿದ ನಂತರ ನಿರ್ಧರಿಸಿದ್ದೇನಂದರೆ—ಕೆಲ ದಿನಗಳ ಮುಂಚೆ ಸಾವಿತ್ರಿಯ ಗಂಡನಾದ ಆ ಶಂಕರರಾಯನಿಗೂ ನನಗೂ ಹೆಚ್ಚಾಗಿ ಸ್ನೇಹವಿದ್ದಿತು. ಅದನ್ನೇ ಈಗ ಮತ್ತಿಷ್ಟು ಬೆಳೆಸಬೇಕು. ಹಾಗೆ ಆತನೊಡನೆ ಸ್ನೇಹಭಾವದಿಂದ ನಡೆಯುವದರಿಂದ, ಕ್ರಮವಾಗಿ ಆತನ ಹೇಯತಮವಾದ ನಿಂದ್ಯ ಚಾರಿತ್ರ್ಯವನ್ನು ಕೆಲಮಟ್ಟಿಗಾದರೂ ಸಂಶೋಧನ ಮಾಡಬಲ್ಲೆನೆಂದು ಆಗ ನನಗನಿಸಿತು.

ನಾನು ಅದರಂತೆ ಪ್ರತ್ಯಕ್ಷ ಪ್ರಯತ್ನಿಸಲು ನನ್ನ ಇಚ್ಛೆಯಂತೆಯೇ ಘಟಿಸಿತು. ಅದರಿಂದ ನಾನು ಆಗಾಗ್ಗೆ ಅದೇಕೆ, ಪ್ರತಿನಿತ್ಯವೂ ಶಂಕರರಾಯನಿಗೆ ಭೆಟ್ಟಿಯಾಗಿ, ಆತನೊಡನೆ ಮಾತು-ಕಥೆಯಾಡಹತ್ತಿದೆನು. ಪರಸ್ಪರರಲ್ಲಿ ಮತ್ತೆ ಜೀವಾಳದ ಸ್ನೇಹಭಾವವು ಉಂಟಾಗಲಿಕ್ಕೆ ಪ್ರಾರಂಭವಾಯಿತು. ಇತ್ತೀಚೆಗೆ ನಾನು ಆತನ ಮನೆಗೆ ಹೋಗಲು; ಅವನು ನನ್ನನ್ನು ಹೆಚ್ಚಾದ ಆದರದಿಂದ ಬರಮಾಡಿಕೊಳ್ಳಹತ್ತಿದನು.

ಮುಂದೆ ನಾಲ್ಕೆಂಟು ದಿನಗಳ ತರುವಾಯ ಮಾತಿಗೆಮಾತು ಹೊರಟಾಗ ತಿಳಿದು ಬಂದುದೇನೆಂದರೆ—ಶಂಕರರಾಯನು ಸಾವಿತ್ರಿಯನ್ನು ಹೆಚ್ಚಾಗಿ ಪ್ರೀತಿಸುವನು. ಅದನ್ನು ಕೇಳಿ ನಾನು ಸುಖಿಯಾದುದೇನೋ ನಿಜ; ಆದರೆ ಆತನ ಆ ಅತ್ಯಂತ ಪ್ರೀತಿಯಲ್ಲಿ ಯಾವ ಅತ್ಯಂತ ಅತ್ಯಾಚಾರವುಂಟಾಗುತ್ತಿದ್ದಿತೋ ಅದರ ಕಾರಣವು ಮಾತ್ರ ಎಷ್ಟು ಪ್ರಯತ್ನಿಸಿದರೂ ನನಗೆ ಸರಿಯಾಗಿ ತಿಳಿಯದಾಯಿತು.

ಹೇಗೆಯೋ ಇರಲಿ; ಆತನ ಆ ಮನೋಭಾವನೆಯ ಮೂಲಕ ನನ್ನ ಮನಸ್ಸು ಹಲವು ಆಶೆಗಳಿಂದ ಪರಿಪೂರ್ಣವಾಯಿತು. ನನ್ನ ಹಲವು ಬಗೆಯ ಉಪದೇಶಗಳ ವೃಷ್ಟಿವರ್ಷಣದಿಂದ ಆತನ ಪ್ರೇಮ ತೃಷ್ಣಾರ್ತ ಮರುಹೃದಯದಲ್ಲಿ ಒಮ್ಮೆಲ್ಲೊಮ್ಮೆ ಸತ್‌ಪ್ರವೃತ್ತಿಯ ಬೀಜಾಂಕುರವಾಗುವ ಸಂಭವವು ಹೆಚ್ಚಾಗಿರುವುದೆಂದು ನಾನು ನನ್ನ ಮನಸ್ಸಿನಲ್ಲೇ ತಿಳಿದುಕೊಂಡೆನು. ನಾನು ಹಲವು ಶಾಸ್ತ್ರವಚನಗಳನ್ನು ಹೇಳಿ ಹಾಗು ಅನೇಕ ಐತಿಹಾಸಿಕ ಸಂಗತಿಗಳನ್ನು ತಿಳಿಸಿ ಆವನಿಗೆ ಮನಗಾಣಿಸಿದೆನೇನೆಂದರೆ, ಧರ್ಮಪತ್ನಿಯನ್ನು ಹಿಂಸಿಸುವದು ಶಾಸ್ತ್ರವಿಗರ್ಹಿತ ಕೆಲಸವು; ಹಾಗೆ ಆಚರಿಸುವವನಿಗೆ ಅಧಃಪತನವು-ನರಕವಾಸವು-ತಪ್ಪಿದ್ದಲ್ಲ.

ನನಗೂ ನಾರಾಯಣನಿಗೂ ಇದ್ದ ಗುರುಶಿಷ್ಯಾನುಬಂಧುತ್ವದ ಸಂಬಂಧವೂ ನಾನು ನಾರಾಯಣನಿಗೆ ಆಗಾಗ್ಗೆ ಆತನ ಮನೆಯ ಹಿರಿಯನಂತೆ ಬೋಧಿಸುತ್ತಿರುವದೂ ಇದೆಲ್ಲ ಶಂಕರರಾಯನಿಗೆ ಕ್ರಮವಾಗಿ ತಿಳಿಯಿತು. ಅದರಿಂದ ತಾನೂ ಇನ್ನು ಮುಂದೆ ನನ್ನ ಉಪದೇಶದಂತೆ ನಡೆಯಬೇಕೆಂದು ಯೋಚಿಸಿ, ಅದಕ್ಕಾಗಿ ಶಂಕರರಾಯನು ನನ್ನಲ್ಲಿ ಅತಿಶಯವಾದ ಪ್ರೇಮಾದರಗಳನ್ನು ತೋರಿಸತೊಡಗಿದನು.

ಈ ಬಗೆಯಾಗಿ ನಾನು ಶಂಕರರಾಯನನ್ನು ಮೆಲ್ಲಮೆಲ್ಲನೆ ಸುಧಾರಿಸತೊಡಗಿದನು. ಕೆಲ ದಿನಗಳ ವರೆಗೆ ಆತನು ನನ್ನ ಹೇಳಿಕೆಯಂತೆಯೇ

ವರ್ತಿಸಿದನು; ಆದರೆ ತದನಂತರ ಮಾತ್ರ ನಾಯಿಯ ಬಾಲವು ಡೊಂಕೇ, ಎಂಬಂತಾಯಿತು! ಆತನು ಯಾವ ದಿವಸ ಹೆಚ್ಚಾಗಿ ಕುಡಿಯುತ್ತಿದ್ದನೋ, ಆ ದಿನ ಸಾವಿತ್ರಿಯ ಮೇಲಿನ ಆತನ ಅತ್ಯಾಚಾರಗಳಿಗೆ ಮೇರೆಯೇ ಉಳಿಯುತ್ತಿರಲಿಲ್ಲ. ಆಗ ನಾನು ಉಪದೇಶಿಸುತ್ತ ಕೂಡ್ರುವ ಬದಲು, ಆತನನ್ನು ಹೆಚ್ಚಾಗಿ ಬೈದು-ಅಂದು ತಿರಸ್ಕರಿಸುತ್ತಿದ್ದೆನು. ಅಂಥ ಪ್ರಸಂಗಗಳಲ್ಲಿ ಆತನು ಒಮ್ಮೊಮ್ಮೆ ಮೌನವನ್ನು ತಾಳಿರುತ್ತಿದ್ದರೆ, ಹಲಕೆಲವು ಸಾರೆ ನನ್ನ ಮೇಲೆಯೇ ಏರಿ ಬರಹತ್ತಿದ್ದನು.

ಒಂದು ದಿವಸ ಶಂಕರರಾಯನು ಸೆರೆ ಕುಡಿದು ಮತ್ತನಾಗಿದ್ದರೂ ಸರಳ ಚಿತ್ತನಂತೆ ತನ್ನ ಕಲುಷಿತ ವೃತ್ತಿಗಳಿಂದ ಮಿಶ್ರವಾದ ಆತ್ಮಚರಿತ್ರವನ್ನು ನನ್ನೆದುರು ಹೇಳಹತ್ತಿದ್ದರಿಲ್ಲಿ ಆತನ ಅಸಭ್ಯ ವ್ಯವಹಾರವೇನೂ ನನಗೆ ಗೋಚರವಾಗಲಿಲ್ಲ. "ಅಣ್ಣಾ, ಸತ್ಯವಂತಾ, ನಾನು ಸನ್ಮಾರ್ಗದಿಂದ ನಡೆಯಬೇಕೆಂಬ ಬಗ್ಗೆ ನೀನು ಹೆಚ್ಚಾಗಿ ಪ್ರಯತ್ನಿಸುತ್ತಿರುವೆಯೆಂಬದು ನನಗೇನು ತಿಳಿಯುವದಿಲ್ಲವೇ? ನಾನು ಇಷ್ಟು ವ್ಯಸನಗ್ರಸ್ತನಾಗಿದ್ದರೂ, ಸ್ವಂತದ ಹಿತಾಹಿತಗಳ ಬಗ್ಗೆ ಜ್ಞಾನಶೂನ್ಯನಾಗಿದ್ದರೂ ಆದಾಗ್ಯೂ ನಾನು ನಿನ್ನ ಭಾವವನ್ನು ಚೆನ್ನಾಗಿ ತಿಳಿಯಬಲ್ಲೆನು. ನೀನು ನನ್ನನ್ನು ಹಲವು ಪ್ರಕಾರಗಳಿಂದ ತಿಳಿ ಹೇಳಿದರೂ ಕೂಡ ನಾನು ಅರಿತುಕೊಳ್ಳಲಿಲ್ಲ. ನೀನು ನನ್ನನ್ನು ನನ್ನ ಹಿತದ ಸಲುವಾಗಿಯೇ ಅವಹೇಲನೆಗೊಳಿಸಿದೆಯಾದರೂ ನಾನು ಬುದ್ಧಿವಂತನಾಗಲಿಲ್ಲ. ನೀನು ಹೇಳಿದ್ದೆಲ್ಲ ನನಗೆ ಚೆನ್ನಾಗಿ ತಿಳಿಯುತ್ತದೆ; ಮತ್ತು ಇನ್ನು ಹಾಗೆಯೇ ವರ್ತಿಸಬೇಕೆಂಬ ಸಂಕಲ್ಪವನ್ನು ಕೂಡ ನಾನು ನನ್ನ ಮನಸ್ಸಿನಲ್ಲಿ ಆಗಾಗ್ಗೆ ಮಾಡುತ್ತಿರುತ್ತೇನೆ; ಆದರೆ ನಾನು ಹೆಚ್ಚಾಗಿ ಕುಡಿದೆನೆಂದರೆ, ನನ್ನ ಆ ಮೊದಲಿನ ಸಂಕಲ್ಪಗಳೆಲ್ಲ ಮಹಾಪೂರದಲ್ಲಿ ತೇಲಿಹೋಗುತ್ತಿರುವ ಹುಲ್ಲಿನಂತಾಗುತ್ತವೆ. ಇನ್ನು ನಾನು ಬದುಕಿ ಉಳಿಯಬೇಕಾದರೆ, ನನ್ನಿಂದ ಈ ಕುಡಿಯೋಣವನ್ನು ಬಿಡುವುದಾಗುವ

ದಿಲ್ಲ; ಒಂದುವೇಳೆ ನಾನು ವ್ಯಸನಗ್ರಸ್ತನಾಗದೆ ಇರುವುದು ಶಕ್ಯವಿದ್ದರೆ, ನಾನು ಹೀಗೆ ಎಂದಿಗೂ ಮದಗ್ರಸ್ತನಾಗುತ್ತಿರಲಿಲ್ಲ. ನನ್ನ ಮನಸ್ಸಿನ ಅಂತರಂಗದಲ್ಲಿ ಏನಿದೆ ಎಂಬದನ್ನು ಆದಾರು ಬಲ್ಲರು? ಅಣ್ಣಾ, ಸತ್ಯವಂತಾ, ಚೆನ್ನಾಗಿ ಕೇಳಿಕೋ. ಈ ಲೋಕದಲ್ಲಿ ನಿನಗೆ ನನ್ನಂತಹ ಘೋರ ಶತ್ರುವು ಇನ್ನೊಬ್ಬನಿಲ್ಲ. ನೀನು ಸಾವಿತ್ರಿಯಲ್ಲಿ ಅತ್ಯಂತ ಪ್ರೀತಿಯುಳ್ಳವನಿರುತ್ತೀ ಎಂಬದು ನನಗೆ ಚನ್ನಾಗಿ ಗೊತ್ತಿದೆ; ಹಾಗು ಸಾವಿತ್ರಿಯೊಡನೆ ನಿನ್ನ ಮದುವೆಯಾಗುವುದಿದ್ದಿತೆಂಬದೂ ನನಗರಿಯದ ವಿಷಯವಾಗಿಲ್ಲ; ಆದರೆ—''

ಶಂಕರರಾಯನ ಆ ನುಡಿಗಳನ್ನು ಕೇಳಿ ನಾನು ಆಪಾದಮಸ್ತಕ ಪರಿಯಂತ ನಡುಗಿಬಿಟ್ಟೆನು. ಆತನು ನನ್ನ ಆ ಸ್ಥಿತಿಯ ಕಡೆಗೆ ಲಕ್ಷ್ಯಗೊಡದೆ ಹೇಳತೊಡಗಿದೆನು:-'ಆದರೆ ಸಾವಿತ್ರಿಯು ನಿನ್ನನ್ನು ಪ್ರೀತಿಸುತ್ತಿರುವಳೋ ಇಲ್ಲವೋ ಎಂಬ ವಿಷಯವನ್ನು ತಿಳಕೊಳ್ಳುವ ಬಗ್ಗೆ ಮಾತ್ರ ನಾನು ಇದುವರೆಗೆ ಒಮ್ಮೆಯೂ ಪ್ರಯತ್ನಿಸಿರುವದಿಲ್ಲ. ಯಾವ ದಿವಸ ನಾನು ಸೌಂದರ್ಯಮಂಡಿತಳಾದ ಸಾವಿತ್ರಿಯನ್ನು ಕಣ್ಣುಟ್ಟ ನೋಡಿದೆನೋ, ಆ ಕ್ಷಣದಿಂದಲೇ ಆಕೆಯ ವಿಷಯದ ಒಂದು ಸಹಿಸಲಾರದಂತಹ ಆಕಾಂಕ್ಷೆಯು ನನ್ನ ಇಡೀ ಹೃದಯವನ್ನು ತುಂಬಿಬಿಟ್ಟಿತು. ಸ್ನೇಹ, ಮಮತೆ, ಪ್ರೇಮ ಪ್ರಭೃತಿಗಳ ಯಾವ ಅಸ್ತಿತ್ವವು ನನ್ನ ಹೃದಯದಲ್ಲಿರುವದೋ ಅದೆಲ್ಲದರ ಬಗ್ಗೆ ನನ್ನ ಸ್ವಂತದಲ್ಲಿಯೂ ಕೊಂಚವೂ ವಿಶ್ವಾಸವಿರಲಿಕ್ಕಿಲ್ಲ; ಆದರೆ ಯಾವ ದಿವಸ ದೇವತೆಯ ಪ್ರತಿಮೆಯಂತೆ ಸಂಪೂರ್ಣ ಮಹಿಮಾಮಯಳಾದ ಸಾವಿತ್ರಿಯನ್ನು ನಾನು ಕಂಡೆನೋ, ಆಗಿನಿಂದ ನೂರಾರು ಸತ್‌ಪ್ರವೃತ್ತಿಗಳು ನನ್ನ ಹೃದಯದಲ್ಲಿ ಉದ್ಘಾಟನ ಹೊಂದಿ, ಅವೇ ಆ ದೇವಿಯ ವಿಗ್ರಹವನ್ನು ಅರ್ಚಿಸುವುದಕ್ಕೆ ಸಹಸ್ರ ಬಾಹುಗಳನ್ನು ಚಾಚಿಕೊಂಡು ಒಮ್ಮೆಲೆ ನಿರತವಾಗಿರುವವು. ತದನಂತರ ನನಗೆ ತಿಳಿದ ಸುದ್ದಿಯಿಂದ ಸಾವಿತ್ರಿಯ ವಿವಾಹವು ಅಣ್ಣಾ,

ನಿನ್ನೊಡನಾಗುವುದೆಂಬುದು ನನಗೆ ತಿಳಿದು ಬಂತು. ಅದಕ್ಕಾಗಿ ಸಾವಿತ್ರಿಯ ತಾಯಿಯೂ ನಾರಾಯಣನೂ ಹೆಚ್ಚಾಗಿ ಒತ್ತಾಯಪಡಿಸುತ್ತಿದ್ದರೆಂಬುದೂ ತಿಳಿಯಿತು; ಮತ್ತು ನಿನ್ನ ಆರ್ಥಿಕ ಸ್ಥಿತಿಯು ಹೇಗೆಯೇ ಇರಲಿ, ನಿನ್ನ ಸಚ್ಚರಿತ್ರದಲ್ಲಿ ಅವರಿಗೆ ಸಂಪೂರ್ಣ ನಂಬಿಗೆಯಿದ್ದಿತು. ನನ್ನ ಸ್ವಂತದ ಅಭಿಲಾಷೆ ತೃಪ್ತಿಗಾಗಿ ನಾನು ನಿನ್ನಲ್ಲಿಯ ಅವರುಗಳ ಆ ನಂಬಿಗೆ ಕೆಡಿಸುವ ಉದ್ಯೋಗವನ್ನು ಶೀಘ್ರವೇ ಕೈಕೊಳ್ಳಬೇಕೆಂದು ನಿಶ್ಚಯಿಸಿಕೊಂಡೆನು.''

ನಾನು ಸ್ತಂಭಿತ ಹೃದಯದಿಂದಲೂ, ಬಿಗಿಹಿಡಿದ ಉಸಿರಿನಿಂದಲೂ, ಆ ಪಾಖಂಡಿಯ ಆ ವೃತ್ತಾಂತವನ್ನು ಕೇಳಿಕೊಳ್ಳಹತ್ತಿದೆನು.

“ಆ ಬಳಿಕ ನೀನು ನಿನ್ನ ರೋಗಗ್ರಸ್ತ ಜನನಿಯನ್ನು ಕಟ್ಟಿಕೊಂಡು ಔಷಧ ಕೊಡಿಸಲಿಕ್ಕೆಂದು ಬಳ್ಳಾರಿಯ ಕಡೆಗೆ ಹೊರಟು ಹೋದೆ. ನಾನು ಆ ಸುಯೋಗವನ್ನೇ ಪ್ರತೀಕ್ಷಿಸತೊಡಗಿದ್ದೆನು. ನೀನು ಯಾವ ದಿವಸ ನಿನ್ನ ಗ್ರಾಮವನ್ನು ಬಿಟ್ಟು ಬಳ್ಳಾರಿಯ ಕಡೆಗೆ ನಡೆದೆಯೋ, ತತ್ಪೂರ್ವದಲ್ಲಿ ಎರಡನೇ ದಿನ ಮುಂಚೆ ಹರಿಹರ ದೀಕ್ಷಿತರ ವಿಧವಾ ಕನ್ಯೆಯು ಒಮ್ಮೆಲೆ ಇಲ್ಲದಂತಾಗಿದ್ದಳು. ಆ ಕೃಷ್ಣ ಕೃತ್ಯವು ನನ್ನಿಂದಲೇ ಜರುಗಿಸಲ್ಪಟ್ಟಿದ್ದಿತು. ನಾನು ಆ ದೀಕ್ಷಿತರ ಮಗಳಾದ ಮೋಹಿನಿಯನ್ನು ಊರಿಂದ ಓಡಿಸಿಕೊಂಡೊಯ್ದು ಯಾರಿಗೂ ಪತ್ತೆ ಹತ್ತದಂತೆ ಒಂದು ಅತ್ಯಂತ ಗುಪ್ತವಾದ ಸ್ಥಳದಲ್ಲಿರಿಸಿದ್ದೆನು. ಸಮಾಜದ ದೃಷ್ಟಿಯಿಂದ ಆ ವಿಧವಾ ಮೋಹಿನಿಯು ಎಷ್ಟೇ ದೋಷಿಯಾಗಲಿಕ್ಕಿಲ್ಲೇಕೆ, ಆದರೆ ಅದು ಅವಳ ದೋಷವಲ್ಲ; ಅದು ಸಮಾಜದೊಳಗಿನ ಆ ಬಗೆಯ ಪ್ರತಿಬಂಧದ ರೂಢಿಯ ದೋಷವೇ ಆಗಿದ್ದಿತು. ನೀನು ಬಳ್ಳಾರಿಗೆ ಹೊರಡುವ ಮುಂಚೆ ಆರು ತಿಂಗಳಿನಿಂದಲೂ ನನಗೂ ಮೋಹಿನಿಗೂ ಪರಿಚಯವಾಗಿದ್ದಿತು. ಮೋಹಿನಿಯು ನನ್ನನ್ನು ಅತ್ಯಂತ ಪ್ರೀತಿಸುತ್ತಿದ್ದಳು. ಈಗಲಾದರೂ ಅವಳ ಪ್ರೇಮವು ನನ್ನಲ್ಲಿ ಅದೇ

ಬಗೆಯಾಗಿದೆ. ಹಾಯ! ನಾನು ಆಕೆಯ ಆ ನಿಃಸ್ವಾರ್ಥ ಪ್ರೇಮದಲ್ಲಿಯೇ ಕೊನೆಯುವರೆಗೂ ಮುಗ್ಧನಾಗಿಬಿಟ್ಟಿದ್ದರೆ, ರೂಪೈಶ್ವರ್ಯಮಯಿಯಾದ ಸಾವಿತ್ರಿಯು ನನ್ನದೃಷ್ಟಿಗೇ ಬೀಳದಿದ್ದರೆ, ಹಾಗು ಅದೊಂದೇ ಬಾರೆಯ ಅವಳ ದರ್ಶನವು ನನ್ನ ಸಂಪೂರ್ಣ ಹೃದಯವನ್ನು ಮೋಹಮಯ ವಾಗಗೊಳಿಸವಿದ್ದರೆ, ಪಾಪದಲ್ಲೇ ಏಕಾಗಲೊಲ್ಲದು, ಅಥವಾ ಪುಣ್ಯ ದಲ್ಲೇ ಏಕಾಗಲೊಲ್ಲದು ಮೋಹಿನಿಯ ಸಹವಾಸದಲ್ಲೇ ನಾನೊಂದು ಬಗೆಯ ಸುಖಸಮಾಧಾನಗಳಲ್ಲಿರುತ್ತಿದ್ದೆನು; ಆದರೆ ಈಗ ಆ ಮಾತಿ ರಲಿ. ಆ ಮೇಲೆ ನಾನು ಊರೊಳಗೆ ಸುದ್ದಿ ಬೀರಿಬಿಟ್ಟೆನೇನಂದರೆ, ಮೋಹಿನಿಯನ್ನು ಸತ್ಯವಂತನೇ ಅಪಹರಿಸಿಕೊಂಡೊಯ್ದಿರಬೇಕೆಂದು.

"ಎಂಥ ಕೊಲೆಪಾತಕಿ ನೀನು!"

"ನೀನು ಮೋಹಿನಿಯನ್ನು ಮೊದಲು ಬಳ್ಳಾರಿಗೆ ಕಳಿಸಿ ಕೊಟ್ಟು, ಆವಳನ್ನು ಅಲ್ಲಿ ಯಾವುದೊಂದು ಸ್ವತಂತ್ರ ಮನೆಯಲ್ಲಿರಿಸಿ, ಇನ್ನೊಂ ದು ಮನೆ ಹಿಡಿದು ನೀನು ಅಲ್ಲಿ ನಿನ್ನ ತಾಯಿಯ ಶುಶ್ರೂಷೆಗೆ ತೊಡ ಗಿರುತ್ತೀ; ಮತ್ತು ಇದೇ ಉದ್ದೇಶವನ್ನಿಟ್ಟುಕೊಂಡೇ ನೀನು ಬಳ್ಳಾರಿಗೆ ಹೋಗಿರುತ್ತೀ. ಎಂಬ ಸುದ್ದಿಯು ನಿಮ್ಮ ಗ್ರಾಮದಲ್ಲೆಲ್ಲ ನಿನಾದಮಯ ವಾಯಿತು ಆ ಮೇಲೆ ಎಷ್ಟೋ ಸುಳ್ಳು ಪ್ರಮಾಣಗಳನ್ನು ಸಿದ್ಧಪಡಿಸಿ, ಇತ್ತಕಡೆಯವರೆಲ್ಲರಲ್ಲೂ ಆ ಸಂಗತಿಯು ದೃಢಪಡುವಂತೆ ಮಾಡಿ ದೆನು. ನಾರಾಯಣನೂ ಸಾವಿತ್ರಿಯ ತಾಯಿಯೂ ನಿನ್ನನ್ನು ಚನ್ನಾಗಿ ಬಲ್ಲವರು. ಅವರು ಆ ಸಂಗತಿಯನ್ನು ಅತ್ಯಂತ ವಿಸ್ಮಯದೊಂದಿ ಗೆ ಹೇಗಾದರೂ ಕೇಳಿಕೊಂಡರು; ಆದರೆ ಅವರು ಅದನ್ನು ಎಳ್ಳಷ್ಟೂ ನಂಬಲಿಲ್ಲ. ಆದರೂ ಅವರಿಂದ ನನ್ನ ಅಭೀಷ್ಟ ಸಿದ್ಧಿಸಲಿಕ್ಕೆ ಯಾವ ಪ್ರತಿಬಂಧವೂ ಈಗ ಆಗಲಿಲ್ಲ. ಯಾಕಂದರೆ ಸಾವಿತ್ರಿಯ ತಂದೆಯು ಈ ಸಾರೆ ಅವರ ಮಾತನ್ನು ಲೆಕ್ಕಿಸಕೂಡದೆಂಬ ದೃಢನಿಶ್ಚ ಯದಿಂದಲೇ ಕಾರ್ಯಪ್ರವೃತ್ತನಾಗಿದ್ದನು. ಅದರಿಂದ ಆವನಿಗೆ

ಊರೊಳಗಿನ ನಿನ್ನ ವಿಷಯದ ಆ ಪ್ರವಾದದಲ್ಲಿ ಸಹಜವಾಗಿಯೇ ನಂಬಿಗೆ ಹುಟ್ಟಿತು. ತದನಂತರ ನಾನು ನನ್ನಸುಡುತ್ತಿರುವ ಹಸ್ತಗಳಿಂದ ಒಂದು ಕ್ಷುದ್ರ ಮೋಹಕ ಗಿಳಿಯನ್ನು ಗಿಡದಿಂದ ನೆಲಕ್ಕೆ ಕೆಡಹಿದೆನು; ಹಾಗು ಅವೇ ದಿವಸ ಅದೇ ನನ್ನಾ ಸುಡುತ್ತಿರುವ ಕೈಗಳಿಂದ ಅಕ್ಷಯ್ಯವಾದ ನನ್ನಸ್ವಂತದ ಚಿತೆಯನ್ನು ನಿರ್ಮಿಸಿಕೊಂಡೆನು. ಕೇವಲ ನನ್ನೊಬ್ಬನ ಚಿತೆಯನ್ನೇ ಅಲ್ಲ, ಸಾವಿತ್ರಿಯ ಹಾಗು ನಿನ್ನ ಚಿತೆಗಳನ್ನು ಕೂಡ ನಿರ್ಮಿಸಿ, ಒಮ್ಮೆಲೆ ಮೂರೂ ಜನರ ಹೃತ್ಪಿಂಡಗಳನ್ನು ತುಂಡರಿಸಿ ಆ ಚಿತಾನಲದಲ್ಲಿ ಚೆಲ್ಲಿಕೊಟ್ಟೆನು!"

ಆತನ ಆ ನಿರರ್ಗಲ ಭಾಷಣವನ್ನು ಕೇಳಿ, ಅನಿವಾರ್ಯ ಸಿಟ್ಟಿನಿಂದ ನನ್ನ ಶ್ವಾಸವು ರುದ್ಧವಾಯಿತು. ಈತನನ್ನು ಈಗಲೇ ಕಾಲಿನಿಂದೊದ್ದು ತುಳಿದು ಕೊಂದು, ಇವನ ಈ ಪಾಪೀ ಜೀವವನ್ನು ಈ ಭೂಲೋಕದಿಂದ ಹೊರದೂಡಿಬಿಡಬೇಕೆಂದು ನನ್ನ ಮನಸ್ಸಿಗನಿಸಿತು; ಆದರೆ ಆಗಲೂ ನಾನು ಸಾವಿತ್ರಿಯನ್ನು ನೆನಿಸಲು, ಅದೇ ನನ್ನ ಸಾವಿತ್ರಿಯು! ಈ ರಕ್ಕಸನು ಆ ದೇವಿಯ ಗಂಡನು! ಹಾಗು ಆ ಮನಮೋಹನ ಬಾಲಕನು. ಆತನನ್ನು ಆತನ ಯಾವ ಅಪರಾಧದ ಸಲುವಾಗಿ ನಾನು ಪಿತೃಹೀನಗೊಳಿಸಬೇಕು?

ದೇವರು ನನಗೆಂದೂ ಈ ಬಗೆಯ ಬುದ್ಧಿಯನ್ನು ಕೊಡದಿರಲಿ. ಶಂಕರರಾಯನನ್ನು ಕೊಲೆಗೆಯ್ಯುವುದರಿಂದೇನೂ ಲಾಭವಿಲ್ಲ; ಆದರೆ ಅಂದಿನಿಂದ ನಾನು ಪ್ರತಿಜ್ಞೆಗೆಯ್ದುದೇನಂದರೆ, ಸದುಪಾಯದಿಂದಲೇ ಆಗಲಿ-ದುರುಪಾಯದಿಂದಲೇ ಆಗಲಿ, ಹೇಗೆಯೇ ಆಗಲಿ, ಈ ಪಾಖಂಡಿಯ ದುಃಸಹ ಪೀಡನೆಗಳೊಳಗಿಂದ ಸಾವಿತ್ರಿಯನ್ನು ಮುಕ್ತಗೊಳಿಸುವುದೇ ನನ್ನ ಇತಿ ಕರ್ತವ್ಯವು; ಮತ್ತು ಅದಕ್ಕೆಂದೇ ಅಂದಿನಿಂದ ನಾನು ಹಿತಾಹಿತ ವಿವೇಚನಾ ಶೂನ್ಯನಾಗಿ ಹೋಗಿದ್ದೇನೆ.

( ೬ )

ಮುಂದೊಂದು ವಾರ ಕಳೆದ ಮೇಲೊಂದು ದಿನ ಸಂಜೆಯು ಹೊತ್ತಿಗೆ ನಾನು ಶಂಕರರಾಯನ ಭೆಟ್ಟಿಗೆಂದು ಆತನ ಮನೆಗೆ ಹೋದೆನು. ಆಗ ಆತನು ಒಬ್ಬೊಂಟಿಗನಾಗಿ ತನ್ನ ಮೇಲಂತಸ್ತಿನ ಮೇಲಿನ ಬೈಲಮಾಳಿಗೆಯಲ್ಲಿ ಕುಳಿತು ತನ್ನ ಪಾನಸಾಮ್ರಾಜ್ಯಸುಖವನ್ನನುಭವಿಸ ಹತ್ತಿದ್ದನು; ಹಾಗು ಯಾವುದೊಂದು ವಿಕಟಗಾನದ ಚರಣವನ್ನು ಅಕಟೋ ವಿಕಟವಾಗಿ ಅನ್ನುತ್ತ, ಆ ನಿರ್ಜನ ಮೇಲ್ಮಾಳಿಗೆಯನ್ನೂ ನೀರವವಾದ ಆಕಾಶವನ್ನೂ ಪ್ರತಿಧ್ವನಿಗೊಳಿಸುತ್ತಿದ್ದನು. ಅದೇಕೋ ತಿಳಿಯದು; ಆ ದಿನ ಶಂಕರರಾಯನು ನನ್ನೊಡನೆ ಆಗ ಚೆನ್ನಾಗಿ ಮಾತು ಕೂಡ ಆಡಲಿಲ್ಲ. ಆತನ ಆ ಅಪ್ರಸನ್ನ ಭಾವವನ್ನು ಕಂಡು, ಇಂದು ಈತನ ಮನಃಸ್ಥಿತಿಯು ಸರಿಯಾಗಿಲ್ಲವೆಂದು ನಾನು ತಿಳಿದುಕೊಂಡನು.

ಕ್ರಮವಾಗಿ ರಾತ್ರಿಯ ಹತ್ತುಗಂಟೆಯಾಯಿತು. ನಾಲ್ಕೂ ಕಡೆಗೆ ಹಣ್ಣು-ಹಂಪಲುಗಳ ಗಿಡಗಳಿದ್ದು, ಮಧ್ಯದಲ್ಲಿ ಎದುರಿಗೆ ನಾನಾ ವಿಧದ ಹೂಗಳ ಗಿಡ-ಬಳ್ಳಿಗಳಿದ್ದವು ಅವುಗಳಿಂದ ಕೂಡಿದ್ದ ಆತನ ಆ ಉದ್ಯಾನವನವು ಆಗ ಬಹು ಚೆನ್ನಾಗಿ ಶೋಭಿಸುತ್ತಿದ್ದಿತು. ನಾನು ಆ ಮೇಲಂತಸ್ತಿನ ಮೆಟ್ಟಿಲುಗಳನ್ನಿಳಿದು ಆ ಉದ್ಯಾನದಲ್ಲಿ ಪ್ರವೇಶಿಸಿದೆನು.

ಆಗ ಶಂಕರರಾಯನು ನನ್ನನ್ನುದ್ದೇಶಿಸಿ—"ಸತ್ಯವಂತಣ್ಣಾ, ನಾನು ನಿನ್ನೊಡನೆ ಕೆಲ ಮಾತನಾಡಬೇಕಾಗಿದೆ." ಎಂದು ಅಂದನು.

ಕೂಡಲೆ ನಾನು ಆಶ್ಚರ್ಯಭರದಿಂದ ಮುಂದೆ ಬೆಚ್ಚಿಬಿದ್ದು, ಹಿಂದಿರುಗಿ ನಿಂತುಕೊಂಡೆನು.

ಬಳಿಕ ಶಂಕರರಾಯನು ಅನ್ನುತ್ತಾನೆ:—"ನಾಳೆಯಿಂದ ನೀನು ಇತ್ತ ಕಡೆಗೆ ಪುನಃ ಬರಬೇಡ. ನೀನು ನಿನ್ನ ಯಾವ ಮನದಿಚ್ಛೆಯಿಂದ ಇಲ್ಲಿಗೆ ಬರ-ಹೋಗುವ ಪ್ರಯತ್ನಪಡುತ್ತಿರುವೆಯೋ, ನಾನು ವ್ಯಸನಾಧೀನನಾಗಿದ್ದರೂ ಅದನ್ನೇನು ಅರಿಯೆನೇ? ನಾನೇನೂ ಅಂಥ ಬುದ್ಧಿ

ಗೇಡಿ, ದೇಹಭಾನವಿರಹಿತನಾದ ಸರೆಗುಡುಕನಾಗಲ್ಲ. ನೀನೇನೂ ಸಾಮಾನ್ಯ ಮನುಷ್ಯನಾಗಿರುವದಿಲ್ಲ. ಕಳ್ಳರ ಮನೆಯಲ್ಲಿ ದರವಡೆ ಹಾಕಬಯಸುವ ವಸ್ತಾದಿ ನೀನು!''

ಆತನ ಆ ಪಿಸುಣ ನುಡಿಗಳು ವಜ್ರಾಘಾತದಂತೆ ನನ್ನ ಹೃದಯವನ್ನು ಭೇದಿಸಿದವು. ಅಂದು ಆತನ ಮುಖದಿಂದಲೇ ನನ್ನ ವಿಷಯವಾಗಿ ಈತನು ಹರಡಿದ್ದ ನೀಚ ಸುದ್ದಿಯನ್ನು ಕೇಳಿ ನಾನು ದೇಹಭಾನವಿರಹಿತನೇ ಆಗಿದ್ದೆನು. ಕೇವಲ ಸಾವಿತ್ರಿಯ ಸಲುವಾಗೆಂದೇ ನಾನು ಅಂದು ಇವನಿಗೇನೂ ಎದುರುತ್ತರವಿತ್ತಿರಲಿಲ್ಲ; ಹಾಗು ಹಾಗೆ ಮಾತಲಿಕ್ಕೂ ಸಮರ್ಥನಾಗಿರಲಿಲ್ಲ. ಇಂದು ಆಕಸ್ಮಿಕವಾಗಿ ಹೊರಟ ಶಂಕರರಾಯನ ಈ ಕಟೋಕ್ತಿಗಳು ಬೆಂಕಿಯ ಕಿಡಿಗಳಂತೆ ಒಮ್ಮೆಲೆ ನನ್ನ ಮಸ್ತಕದಲ್ಲಿ ಪ್ರವೇಶಿಸಿದವು. ಇಂದು ನನಗುಂಟಾದ ಕೋಪವನ್ನು ನನ್ನಿಂದ ತಡೆಯುವದು ಅಸಾಧ್ಯವಾಗಿ ಹೋಯಿತು. ಆಗ ನಾನು—''ಶಂಕರರಾಯಾ, ನೀನು ಪಶುವಿಗಿಂತಲೂ ಅಧಮನು. ನಿನ್ನ ಮನಸ್ಸು ಎಷ್ಟು ಕಲುಷಿತವಾಗಿರುವದೋ, ಅದರಿಂದ ನೀನು ಹೀಗೆ ಭಾವಿಸವೆ, ಇವಕ್ಕಿಂತ ಬೇರೆ ಮತ್ತೇನನ್ನು ಭಾವಿಸಿಕೊಳ್ಳುವೆ? ನನ್ನ ಮನದಿಂಗಿತವನ್ನು ತಿಳಿದುಕೊಳ್ಳಲಿಕ್ಕೆ ನಿನ್ನಂತಹ ನರಕಭಾಜನನಿಗೆ ಇನ್ನೂ ಅನೇಕ ಕಾಲವಿಲಂಬ ಹಿಡಿದೀತು. ಕೇವಲ ಸಾವಿತ್ರಿಯ ಮೋರೆಯನ್ನು ನೋಡಿಯೇ ನಾನು ಇಂದು ನಿನ್ನೀ ಅಕ್ಷಮ್ಯವಾದ ಅಪರಾಧವನ್ನೆಲ್ಲ ಉಪೇಕ್ಷಿಸಬೇಕಾಗಿದೆ.''

ಶಂಕರರಾಯನು ಅಣುಕಿಸುವ ದನಿಯಿಂದ—''ಸಾವಿತ್ರೀ, ಸಾವಿತ್ರೀ. ಎಲೇ ಭಂಡಾ, ಸಾವಿತ್ರಿಯು ನಿನಗಾರೋ? ನೀನಾದರೂ ಸಾವಿತ್ರಿಗೇನಾಗಬೇಕೋ? ಆಕೆಯ ಹೆಸರಿನೊಡನೆ ನಿನಗಿಷ್ಟು ಆಂತರಿಕತೆಯು ಹುಟ್ಟುತ್ತಿರುವುದೇಕೆ? ನನಗೆ ಹೇಗೆ ಬೇಕೆನಿಸುವದೋ ಹಾಗೆ ನಾನು ನನ್ನ ಹೆಂಡತಿಯೊಡನೆ ವ್ಯವಹರಿಸುತ್ತೇನೆ. ಅದನ್ನು

ನೀನಿಷ್ಟು ಚಿಕಿತ್ಸೆಪೂರ್ವಕವಾಗಿ ಕೇಳುವವನಾರೋ ನೀಚಾ? ನನಗೆ ನಿನ್ನ ಅಂತರಂಗವೇನು ತಿಳಿದಿಲ್ಲವೆಂದಂದುಕೊಳ್ಳುತ್ತೀಯಾ? ಹೋ ಗೆಲೋ ಹೋಗು, ಪಿಕನಾಶಿ! ನಿನ್ನಂತಹ ಹಲವು ಮಂದಿ ಭಂಡ ತಪಸ್ವಿ ಗಳನ್ನು ನಾನು ನೋಡಿದ್ದೇನೆ. ಮೋಹದ ಎಳೆಯಿಂದ ಗಂಧರ್ವಾದಿ ಗಳೂ ಸ್ವರ್ಗಲೋಕದಿಂದ ಧಾವಿಸಿ ಬರುತ್ತಿರಲಿಕ್ಕೆ, ನೀನು ಮತ್ತೆ ಮತ್ತೆ ನಾಚಿಕೆಗೇಡಿಯಂತೆ ಇಲ್ಲಿಗೆ ಬರುತ್ತಿರುವದು ಸಾವಿತ್ರಿಯ ಆಲೋಚನೆಯಿಂದಲೇ ಎಂಬದನ್ನು ನಾನೇನು ತಿಳಿಯನೇನು ಮೂರ್ಖಾ?''

ಅನಿವಾರ್ಯಸಿಟ್ಟಿನಿಂದ ನನ್ನನ್ನು ನಾನು ಆವರಿಸಿಕೊಳ್ಳ ಲಾರದಾದೆನು. ಆಗ ನಾನು ಅಂದುದೇನಂದರೆ:—''ಶಂಕರರಾಯಾ, ಕೇಳಿಕೋ. ನಾನು ಜೀವಂತವಾಗಿರುವವರೆಗೂ ನೀನು ಸಾವಿತ್ರಿಯ ಒಂದು ಚಿಕ್ಕ ಕೂದಲಿಗೆ ಕೂಡ ಧಕ್ಕೆ ಹಚ್ಚಲಾರೆ. ಇಂದಿನಿಂದ ನೀನು ಸಾವಿತ್ರಿಯ ಮೇಲೆ ಅತ್ಯಾಚಾರವೆಸಗಿದ ಸುದ್ದಿಯೇನಾದರೂ ನನಗೆ ಹತ್ತಿದರೆ, ಅದೇ ಕ್ಷಣದಲ್ಲಿ ನಾನು ನಿನ್ನನ್ನು ನುಚ್ಚುನುಚ್ಚಾಗುವಂತೆ ಕಡಿದು ಖೂನಿಗೊಳಿಸಿಬಿಟ್ಟೇನು. ಆ ಕೊಲೆಪಾತಕದಿಂದ ನನಗೆ ಗಲ್ಲಿನ ಶಿಕ್ಷೆಯಾದರೂ ಆಗಲಿ; ನಾನು ನಿನ್ನನ್ನೆಂದಿಗೂ ನಿನ್ನಾ ಅತ್ಯಾಚಾರದ ಬಗ್ಗೆ ಕ್ಷಮಿಸಲಾರೆನು.''

ನನ್ನಾ ನುಡಿಗಳನ್ನು ಕೇಳುತ್ತಲೆ ಶಂಕರರಾಯನು ಅತ್ಯಂತ ಕ್ರೋಧಭರಿತನಾಗಿ, ತನ್ನ ತಲೆಯನ್ನಲ್ಲಾಡಿಸುತ್ತ:—''ಭಲೆ! ಭಲೆ! ಯಾರು ಯಾರನ್ನು ಕೊಲೆಗೆಯ್ಯುವರೆಂಬದನ್ನು ನೋಡಲಾದೀತು. ಮೊಟ್ಟ ಮೊದಲು ನಾನು ಸಾವಿತ್ರಿಯನ್ನು ಖೂನಿ ಮಾಡುತ್ತೇನೆ; ತದ ನಂತರ ನಿನ್ನನ್ನು ಕೊಲ್ಲುತ್ತೇನೆ. ಎಷ್ಟು ಧೈರ್ಯವಪ್ಪಾ ನಿನಗೆ! ನನ್ನ ಸಾವಿತ್ರಿಯ ಒಂದು ಚಿಕ್ಕ ಕೂದಲಿಗೆ ನನ್ನಿಂದ ಧಕ್ಕೆಯಾದರೆ, ನೀನು ನನ್ನನ್ನು ಕೊಲೆಗೆಯ್ಯುತ್ತೀಯಲ್ಲವೆ? ಇಂದು ನಾನು ಸಾವಿತ್ರಿಯ ನೆತ್ತರ

ವನ್ನು ಕಣ್ಣಾರೆ ಕಾಣದಿದ್ದರೆ, ನನ್ನ ಹೆಸರು ಶಂಕರನೇ ಅಲ್ಲ! ಆ ಬಗ್ಗೆ ನೀನು ನನ್ನನ್ನೇನು ಮಾಡುತ್ತೀಯೋ ನೋಡಿಯೇ ಬಿಡುತ್ತೇನೆ''

ಆ ಮದೋನ್ಮತ್ತನು ಆಗ ಇನ್ನಿಷ್ಟು ಸೆರೆಕುಡಿದನು. ಈತನೊಡನೆ ಇನ್ನು ಯಾವ ಮಾತು-ಕಥೆಯಾಡುವದೂ ಯೋಗ್ಯವಲ್ಲೆಂದು ಭಾವಿಸಿ ನಾನು ಆತನ ಆ ಉದ್ಯಾನದಿಂದ ಹೊರ ಹೊರಟು ಹೋದೆನು. ಆತನು ಅಲ್ಲಿಂದ ಹೊರಟು ಹೋದನೋ ಅಥವಾ ಅಲ್ಲಿಯೇ ನಿಂತುಕೊಂಡನೋ ಎಂಬದನ್ನು ನಾನು ಹೊರಳಿ ಕೂಡ ನೋಡಲಿಲ್ಲ.

( ೭ )

ಉಪವನದಿಂದ ಬಂದ ಕೂಡಲೆ ನನ್ನ ಮನಸ್ಸು ಅತ್ಯಂತ ವಿಷಾದ ಗೊಂಡಿತು. ನನ್ನನ್ನು ನಾನೇ ಪುನಃ ಪುನಃ ಧಿಕ್ಕರಿಸಿಕೊಳ್ಳತೊಡಗಿ ದನು. ನಾನು ಈ ಶಂಕರರಾಯನನ್ನು ಇಷ್ಟೇಕೆ ಸಿಟ್ಟಿಗೆಬ್ಬಿಸಿದೆನು? ಈ ಕ್ರೋಧಭರದಿಂದ ಈ ಮದೋನ್ಮತ್ತ ಪಿಶಾಚಿಯು ಇಂದು ಆ ಅಭಾಗಿನಿಯಾದ ಸಾವಿತ್ರಿಗೆ ಅದೆಷ್ಟೋಪಟ್ಟು ಹೆಚ್ಚಾಗಿ ಪೀಡಿಸ ಬಹುದಲ್ಲವೇ? ನಾನು ಇದುವರೆಗೆ ಶಂಕರರಾಯನ ಎಷ್ಟೋ ಪಿಸುಣು ನುಡಿಗಳನ್ನು ಸಹಿಸಿಕೊಂಡಿದ್ದರೂ ಈ ದಿನ ನಾನು ಹೀಗೇಕೆ ಮಾಡಿ ದೆನು? ಯಾವ ದುರ್ಮುಹೂರ್ತದಲ್ಲಿ ಹಾಗು ಯಾವ ದುರ್ಮುಖಿಯ ಮುಖ ನೋಡಿ ಇಂದು ನಾನು ಶಂಕರರಾಯನ ಭೆಟ್ಟಿಗೆಂದು ನನ್ನ ಮನೆ ಯಿಂದ ಹೊರಟಿದ್ದೇನು? ನಾನು ಈ ದಿನ ಹೀಗೆ ಮಾತನಾಡಿ ಸರ್ವ ನಾಶವನ್ನೇಕೆ ಮಾಡಿದೆನು? ಹಾಯ! ಹಾಯ! ನಾನು ಸಾವಿತ್ರಿಗೆ ಕಲ್ಯಾಣ ಮಾಡ ಹೋಗಿ, ಪ್ರಾರಂಭದಲ್ಲಿಯೇ ಅವಳ ಛಲನಕ್ಕೆ ಕಾರಣ ನಾದೆನಲ್ಲ! ಮನುಷ್ಯನು ಒಂದನ್ನು ಮಾಡಹೋದರೆ, ನಿರ್ದಯ ವಿಧಾ ತನು ಅದಕ್ಕೆ ವಿರುದ್ಧವಾಗಿ ಬೇರೊಂದನ್ನೇ ಮಾಡಿಬಿಡುತ್ತಾನೆ.

ನನ್ನ ಮಾನಸಿಕ ಪ್ರವೃತ್ತಿಯು ಆ ಕಾಲಕ್ಕೆ ಒಂದು ಬಗೆಯ

ಗೊಂದಲದಲ್ಲಿ ಸಿಲುಕಿಬಿಟ್ಟಿತು. ಏನು ಮಾಡಬೇಕೆಂದಿದ್ದೆನು, ಏನನ್ನು ಮಾಡಬೇಕಾಗಿತ್ತು. ಕಡೆಗೆ ಏನಾಯಿತು? ಇವನ್ನೆಲ್ಲ ಪುನಃ ಪುನಃ ಮನಸ್ಸಿನಲ್ಲಿ ಯೋಚಿಸಹತ್ತಲು, ನನ್ನದು ನನಗೆ ಏನೂ ತಿಳಿಯದಂತಾಯಿತು. ಸಂಪೂರ್ಣ ಸದ್ಗುಣಮಂಡಿತಳಾದ, ಸೌಮ್ಯಮುಖಮಂಡಲವುಳ್ಳ ಸಾವಿತ್ರಿಯ ಸುಖ-ದುಃಖಗಳೆಲ್ಲ ಆ ದಯಾಶೂನ್ಯ, ಕ್ಷಮಾಶೂನ್ಯ, ಕಟುಕನಂತಹ ಕ್ಷಪಣಕನ ಕೈಸೇರಿರುವವಲ್ಲ! ಎಂಬ ಚಿಂತೆಯಿಂದ ನನ್ನ ಹೃದಯವು ಪ್ರತಿ ಕ್ಷಣಕ್ಕೂ ಸಾವಿರಾರು ಚೇಳುಗಳ ಕಡಿತದಂತಹ ಜ್ವಾಲೆಯನ್ನು ಅನುಭವಿಸತೊಡಗಿತು; ಹಾಗು ಪ್ರತಿ ಕ್ಷಣದಲ್ಲೂ ಯಾವುದೊಂದು ಶ್ವಾಪದ ಸುಲಭವಾದಂಥ ಪ್ರತಿಹಿಂಸೆಯ ತೃಷ್ಣೆಯು ನನ್ನ ಹೃದಯದಲ್ಲಿ ಸಂಪೂರ್ಣವಾಗಿ ಹುಟ್ಟಿ, ಸಹಿಸಲಾರದಷ್ಟು ತೀಕ್ಷ್ಣವಾಗಹತ್ತಿತು. ಆ ಅದಮ್ಯ ಪ್ರತಿಹಿಂಸೆಯಿಂದ ಮಂತ್ರೌಷಧಿಗಳಿಂದ ಬಿಗಿಯಲ್ಪಟ್ಟ ನಾಗಿಣಿಯಂತೆ ಪ್ರತಿ ಕ್ಷಣದಲ್ಲೂ ನಾನು ನಿಶ್ಚೇಷ್ಟಿತವಾಗ ಹತ್ತಿದೆನು. ಆಗ ನಾನೇನು ಮಾಡಬೇಕು? ಬೇರೆ ಉಪಾಯವನ್ನೇನೂ ಕಾಣದೆ, ವಿಷಾಕ್ತ ಚೂರಿಯನ್ನು ಯಾವುದೊಂದು ರೀತಿಯಿಂದ ಸ್ವಂತದ ಎದೆಯಲ್ಲಿ ಬುಟಮುಟ್ಟ ಚುಚ್ಚಿಕೊಳ್ಳಬಹುದಿತ್ತು; ಆದರೆ ಆ ಮೂರ್ಖ ಶಂಕರರಾಯನ ದೇಹಕ್ಕೆ ಒಂದಿಷ್ಟೂ ಗಾಯಗೊಳಿಸುವ ಸಾಮರ್ಥ್ಯವು ಮಾತ್ರ ನನ್ನಲ್ಲಿರಲಿಲ್ಲ. ಆ ನಿರ್ಜನವಾದ ದಾರಿಯಲ್ಲಿ ನನಗೆ ಕ್ಷಣಕ್ಷಣಕ್ಕೂ ಅನಿಸಹತ್ತಿತೇನಂದರೆ, ಚಿಂತೆಯೆಂಬ ರಕ್ಕಸಿಯು ನನ್ನ ಹೃತ್ಪಿಂಡವನ್ನು ನಿರ್ವಿಘ್ನವಾಗಿ ಶೋಷಿಸಿಬಿಟ್ಟಿದ್ದು, ಇನ್ನು ಅವಳು ನನ್ನ ರಕ್ತವನ್ನೆಲ್ಲ ಗಟಗಟನೆ ಕುಡಿಯಹತ್ತಿರುವಳು. ಆಗ ನಾನು ಕೇವಲ ಷಂಡನಂತೆ ಮನೆಗೆ ಹಿಂದಿರುಗಿದೆನು! ಆ ಮೇಲೆ ಏನಾಯಿತೋ ಅದೆಲ್ಲವನ್ನು ಆ ಸರ್ವಜ್ಞನೇ ಬಲ್ಲನು! ಆ ಸರ್ವ ಶಕ್ತಿಮಂತನಾದ ಪ್ರಭುವೇ ಅದನ್ನು ತಿಳಿದವನು. ಆ ಮೇಲೆ ಏನಾಯಿತೋ ಅದನ್ನು ಹೇಳಲು ನಾನೆಂತು ಸಮರ್ಥನಾದೇನು?

( ೮ )

ಹಾಯ! ಹಾಯ! ಮರುದಿನ ಮುಂಜಾವಿನಲ್ಲಿ ನಡೆದ ಆ ರೋಮ ಹರ್ಷಣ ಘಟನೆಗಳನ್ನು ಮರೆಯುವುದಾದರೆ ನಾನು ಇಹಲೋಕವನ್ನೇ ತ್ಯಜಿಸಬೇಕಾದೀತು?

ಮರುದಿನ ಬೆಳಗಿನ ಹತ್ತುಗಂಟೆ. ಆಗ ನಾರಾಯಣನು ಓಡು ತ್ತೋಡುತ್ತ ಬಂದು ನಮ್ಮ ಮನೆಯನ್ನು ಪ್ರವೇಶಿಸಿದನು. ಆಗ ಆತನು ಒಳ್ಳೇ ಬಲವಾಗಿ ಉಸಿರಾಡುತ್ತಿದ್ದನು. ಆತನ ಮುಖವು ಕಪ್ಪಿಟ್ಟಿ ದ್ದಿತು. ದೃಷ್ಟಿಯು ಉನ್ಮಾದನಂತಾಗಿತ್ತು. ಆತನ ಮುಖ ಮತ್ತು ಕಣ್ಣುಗಳ ದರ್ಶನದಿಂದ ಅವನಲ್ಲಿ ಯಾವುದೋ ಒಂದು ಭೀಷಣತೆಯ ಛಾಯೆಯು ಸ್ಪಷ್ಟವಾಗಿ ಮೂಡಿತ್ತು. ಅದನ್ನು ಕಂಡು ನನ್ನ ಮೈಯು ನಡುಗಿಬಿಟ್ಟಿತು!

ನಾರಾಯಣನು ನನ್ನ ಅಂಗಿಯನ್ನು ಗಟ್ಟಿಯಾಗಿ ಹಿಡಿದು ಒಮ್ಮೆ ಬಲವಾಗಿ ಜಗ್ಗಿದನು. ಆ ನನ್ನ ಅಂಗಿಯು ಒಂದಿಷ್ಟು ಹಳೆಯದಾಗಿ ದ್ದರೆ ಅದು ಆಗಲೆ ಹರಿದುಹೋಗುತ್ತಿತ್ತು. ಆ ನಾರಾಯಣನು ಬಳಿಕ ವ್ಯಾಕುಲ ಕಂಠದಿಂದ ಹೇಳತೊಡಗಿದನೇನಂದರೆ:—“ಸತ್ಯವಂತಣ್ಣಾ, ಸರ್ವನಾಶವಾಗಿ ಹೋಗಿದೆ! ನಾನು ಏನಾದೀತೆಂದು ಭಾವಿಸಿದ್ದೆನೋ, ಕಡೆಗೆ ಅದೇ ಆಗಿ ಹೋಗಿದೆ! ಒಮ್ಮಿಲೆ ಕೊಲೆಯಾಗಿ ಹೋಗಿದೆ. ಇನ್ನಾವ ಉಪಾಯವೂ ಇಲ್ಲದಂತಾಗಿದೆ. ಸತ್ಯವಂತಣ್ಣಾ, ಮುಂದೇ ನಾಗುವದೋ ತಿಳಿಯದು. ನೀನು ಅಲ್ಲಿಗೆ ನಡೆ; ಬೇಗನೆ ಎದ್ದೇಳು. ಅದೆಂತಹ ಕೊಲೆಯಪ್ಪಾ!!”

ವಿಸ್ಮಯ ವಿಹ್ವಲಿತ ಚಿತ್ತದಿಂದ ನಾನು ಎದ್ದು ನಿಂತೆನು. ಅದೇ ಕಾಲಕ್ಕೆ ಒಂದು ಅನಿವಾರಕ ವಿಮೂಢತೆಯು ತನ್ನ ಮಸ್ತಕವನ್ನು ಸಂಪೂರ್ಣವಾಗಿ ವ್ಯಾಪಿಸಿಬಿಟ್ಟದ್ದರಿಂದ, ನಾರಾಯಣನ ಅಂಬೋಣ ವಾವುದೂ ನನ್ನ ಹೃದಯದಲ್ಲಿ ಸೇರದಂತಾಯಿತು. ಆಗ ನಾನು ಅವ

ನನ್ನು ಕುರಿತು ಒಳ್ಳೇ ಉತ್ಕಂಠಿತ ಭಾವದಿಂದ ಕೇಳಿದೆನೇನಂದರೆ:—
"ನಾರಾಯಣಾ, ಏನಂದೆ? ನನಗೆ ನಿನ್ನ ಯಾವ ಮಾತುಗಳೂ ಸರಿಯಾಗಿ ಕೇಳಿಸಲೊಲ್ಲವು."

ಕೂಡಲೆ ನಾರಾಯಣನ ಕಣ್ಣುಗಳಿಂದ ಅಶ್ರುಗಳುದುರಹತ್ತಿದ್ದನ್ನು ನಾನು ಕಂಡೆನು. ಆತನು ಅಳುತ್ತ ಅಳುತ್ತ ಅಂದಿತ್ತಲೆ:—"ಸತ್ಯವಂತಣ್ಣಾ, ಎಲ್ಲವೂ ಹಾಳಾಗಿ ಹೋಯಿತು! ಸಾವಿತ್ರಿಯಿಲ್ಲ. ಶಂಕರರಾಯನು ನಿನ್ನೆ ರಾತ್ರಿಯಲ್ಲಿ ಅವಳನ್ನು ಕೊಲೆಗೆಯ್ದಿರುವನು. ಪೋಲೀಸರು ಶಂಕರರಾಯನನ್ನು ಪ್ರತಿಬಂಧಿಸಿರುತ್ತಾರೆ."

ನಾನು ಮತ್ತೆ ಕೇಳಿಕೊಳ್ಳಲು ಶಕ್ತನಾಗಲಿಲ್ಲ. ಸಿಡಿಲು ಬಡಿದವರಂತೆ ನಿಂತಲ್ಲಿಂದಲೇ ಮೈಮರೆದು ಬಿದ್ದುಬಿಟ್ಟೆನು!

ನಾನು ಯಾವಾಗ ತುಸ ಎಚ್ಚರ ಹೊಂದಿದೆನೋ ಆಗ ನಾರಾಯಣನು ನನ್ನ ಬಳಿಯಲ್ಲಿ ಕುಳಿತು, ನನ್ನ ನೆತ್ತಿ-ಕಣ್ಣುಗಳಿಗೆ ತಣ್ಣೀರು ಬಡಿಯುತ್ತಿದ್ದನು.

ಕೂಡಲೆ ನಾನು ಚಟಕ್ಕನೆದ್ದು ಕುಳಿತು ಆತನನ್ನುದ್ದೇಶಿಸಿ: "ಇನ್ನು ನನಗಾವ ಉಪಚಾರದ ಅವಶ್ಯಕತೆಯೂ ಇಲ್ಲ. ಈ ಭಯಂಕರ ವಾರ್ತೆಯನ್ನು ಕೇಳಿ ನನಗೆ ಹಾಗಾಗಿತ್ತು. ಅದಿರಲಿ. ಪೋಲೀಸರು ಶಂಕರರಾಯನನ್ನು ಪ್ರತಿಬಂಧಿಸಿರುತ್ತಾರೆಂದು ನೀನು ಹೇಳುತ್ತಿರಲಿಲ್ಲವೇ?"

ನಾರಾಯಣ:—"ಅಹುದು, ಅವರು ಅವನಿಗೆ ಹಲವು ಬಗೆಯಿಂದ ವಿಚಾರಿಸಿದರು. ಹಾಗೆ ವಿಚಾರಿಸುವಾಗ ಅವರು ಶಂಕರರಾಯನ ಮೇಲೆ ಯಾವ ಅತ್ಯಾಚಾರವನ್ನೂ ಮಾಡಲಿಲ್ಲ. ಅವನಾಗಿಯೇ ಅವರ ಬಳಿಗೆ ಬಂದು ಪ್ರತಿಬಂಧಿತನಾಗಿರುತ್ತಾನೆ. ಹಾಗೆ ಆತನು ವರ್ತಿಸುವಾಗ ಅವನಲ್ಲಿನ್ನೂ ಗತ ರಾತ್ರಿಯ ನಿಶೆಯ ಝುಳುಕು ಇದ್ದಿತೋ ಏನೋ ತಿಳಿಯದು. ಅದು ಏನೇ ಇರಲಿ; ಸತ್ಯವಂತಣ್ಣಾ, ನೀನೊಮ್ಮೆ ಅಲ್ಲಿಗೆ ನಡೆ ನೋಡೋಣ. ಈ ಪ್ರಸಂಗದಲ್ಲಿ

ನೀನು ಅಲ್ಲಿಗೆ ಹೋಗಿ ಬರುವುದು ಬಹು ಮಹತ್ವದ್ದಾಗಿದೆ. ನೀನು ಅಲ್ಲಿಗೆ ಹೋದೆಯೆಂದರೆ, ನಿನಗೆ ಯಾವುದೊಂದು ಯೋಗ್ಯ ಉಪಾಯವು ಸೂಚಿಸಿಯೇ ಸೂಚಿಸಬಹುದು.

ನಾನು ನಡುಗುವ ದನಿಯಿಂದ, ನಡುಗುವ ಹೃದಯದಿಂದ ಹಾಗು ನಡುಗುವ ದೇಹದಿಂದ ಭೀತಿಗ್ರಸ್ತನಂತೆ ಕೇಳಿದೆನೇನಂದರೆ: "ನಾರಾಯಣಾ, ಅದೆಲ್ಲಿಗೊ? ಸಾವಿತ್ರಿಯನ್ನು ನೋಡಲಿಕ್ಕೇನು? ನಾರಾಯಣಾ, ತಡೆ; ತುಸ ತಡೆ; ನನಗ್ಗೊಂದಿಷ್ಟು ಚೆನ್ನಾಗಿ ಹುಷಾರಾಗಗೊಡು. ಈಗ ನನ್ನ ಹೃದಯದಲ್ಲಿ ಏನೇನು ನಡೆದಿದೆಯೆಂಬುದನ್ನು ಕೂಡ ನಾನು ತಿಳಿಯಲಾರದವನಾಗಿದ್ದೇನೆ."

ನನ್ನ ಆಗಿನ ಅವಸ್ಥೆಯನ್ನು ಕಂಡು ನಾರಾಯಣನಿಗೆ ನನ್ನ ಮನಸ್ಸಿನೊಳಗಿನ ಅಲ್ಲೋಲ-ಕಲ್ಲೋಲಗಳ ಪರಿಣಾಮವು ಚೆನ್ನಾಗಿ ತಿಳಿದಿರಬೇಕು. ಅದರಿಂದ ಆತನು ನನ್ನ ಮಾತಿಗೆ ಸಮ್ಮತಿಸಿದನು; ಆದರೂ ಆತನು ತೀರ ಅಧೀರ ಭಾವದಿಂದ ನನ್ನ ಆಗಮನದ ಅಪೇಕ್ಷೆ ಮಾಡುತ್ತಿದ್ದುದರಿಂದ ನಾನು ಮತ್ತೆ ಹೆಚ್ಚು ವಿಲಂಬ ಮಾಡದೆ, ಶಕ್ಯವಾದಷ್ಟು ತೀವ್ರವೇ ಆತನೊಡನೆ ನನ್ನ ಮನೆಯಿಂದ ಹೊರಬಿದ್ದೆನು.

(೯)

ನಾವಿಬ್ಬರೂ ಅಲ್ಪಾವಧಿಯಲ್ಲೇ ಶಂಕರರಾಯನ ಮನೆಗೆ ಹೋಗಿ ತಲುಪಿದೆವು. ಅಲ್ಲಿಗೆ ಹೋಗಿ ನಾನು ಏನನ್ನು ಕಂಡೆನೋ, ಅದನ್ನು ಈ ಕತೆಯಲ್ಲಿ ಹೇಳುವದು ಯೋಗ್ಯವಾಗಿದ್ದರೂ ಕೂಡ ನಾನು ಅದನ್ನು ಹೇಳಲಿಚ್ಛಿಸುವದಿಲ್ಲ. ಅದಕ್ಕಾಗಿ ವಾಚಕರು ನನ್ನನ್ನು ಕ್ಷಮಿಸಬೇಕಾಗಿ ಪ್ರಾರ್ಥನೆ.

ಆ ಕೊಲೆಯ ಸಂಬಂಧದಲ್ಲಿ ಶಂಕರರಾಯನ ವಿರುದ್ಧವಾಗಿ ಯಾವ ಪ್ರಮಾಣಗಳೆಲ್ಲ ಸಂಗ್ರಹೀತಗಳಾಗಿದ್ದವೋ, ಅವುಗಳಿಂದ ಅವನೇ ಅಪರಾಧಿ ಎಂಬ ಬಗ್ಗೆ ಅದಾರಿಗೂ ಯಾವ ಸಂದೇಹವೂ

ಇರಲಿಲ್ಲ. ಅಲ್ಲದೆ ಗತ ರಾತ್ರಿಯಲ್ಲಿ ಶಂಕರರಾಯನು ತನ್ನ ಉಪ ವನದಲ್ಲಿ ನನ್ನೊಡನೆ ಯಾವ ಯಾವ ಮಾತುಗಳನ್ನಾಡಿದ್ದನೋ ಅವ ನ್ನೆಲ್ಲ ಅವನ ಒಬ್ಬ ದಾಸಿಯು ಕೇಳಿದ್ದಳು. ಅವಳು ಪೋಲೀಸರೆದು ರಿಗಿನ ತನ್ನ ಹೇಳಿಕೆಯಲ್ಲಿ ಅವನ್ನೆಲ್ಲ ಪುನರಾವೃತ್ತಿಗೊಳಿಸಿದ್ದಳು. ಪ್ರಾತಃಕಾಲದಲ್ಲಿ ಸಾವಿತ್ರಿಯ ಪ್ರಾಣರಹಿತ ದೇಹವು ಹಾಸಿಗೆಯ ಮೇಲೆ ಬಿದ್ದಿದ್ದು, ಆ ಶರೀರದ ಹೃದಯದಲ್ಲಿ ಒಂದು ನಿಡಿದಾದ ಚೂರಿಯು ಬುಡಮಟ್ಟವಾಗಿ ಚುಚ್ಚಲ್ಪಟ್ಟಿತ್ತು. ಆ ಚೂರಿಯು ಸ್ವಂತ ಶಂಕರ ರಾಯನದೇ ಆಗಿದ್ದಿತು. ಹಲವು ಜನರು ಅದನ್ನು ಶಂಕರರಾಯನ ಕೂಡ್ರುವ ಕೋಣೆಯಲ್ಲಿ ಈ ಮೊದಲು ಎಷ್ಟೋ ಸಾರೆ ಕಂಡಿದ್ದರು. ಅದರಂತಹ ಮಾಟದ ನಿಡಿದಾದ ಚೂರಿಯು ಆ ಊರಲ್ಲಿ ಇನ್ನಾರ ಬಳಿಯಲ್ಲೂ ಇರಲಿಲ್ಲ. ಶಂಕರರಾಯನ ವಿರುದ್ಧವಾಗಿ ಇನ್ನೊಂದು ಪ್ರಮುಖ ಪುರಾವೆ ದೊರೆತುದೇನಂದರೆ, ಗತ ರಾತ್ರಿಯಲ್ಲಿ ಆ ದಂಪತಿ ಗಳೊಳಗೆ ಅತ್ಯಧಿಕವಾದ ವಾದಿಸಾಟವು ನಡೆದದ್ದು; ಮತ್ತು ಶಂಕರ ರಾಯನು ಆಗ ಸಾವಿತ್ರಿಯನ್ನು ಹೆಚ್ಚಾಗಿ ಹೊಡೆದದ್ದು. ಆತನ ಮುಷ್ಟ್ಯ ಘಾತದ ಒಂದು ಗುರ್ತು ಕೂಡ ಸಾವಿತ್ರಿಯ ಹೆಣದ ಹಣೆಯ ಮೇಲೆ ಆಗಲೂ ಸ್ಪಷ್ಟವಾಗಿ ಕಾಣುತ್ತಿತ್ತು. ಡಾಕ್ಟರೀ ಪರೀಕ್ಷೆಯಲ್ಲಿ ಕೊನೆಗೆ ನಿಶ್ಚಿತವಾದುದೇನಂದರೆ, ಸಾವಿತ್ರಿಯ ಮರಣಕ್ಕೆ ಮೊದಲು ಒಂದೆರಡು ಗಂಟೆಗಳಲ್ಲೇ ಆ ಪ್ರಹಾರವು ಆಕೆಗೆ ಮಾಡಲ್ಪಟ್ಟಿರಬೇಕು.

ಹೀಗೆ ಎಲ್ಲ ಸ್ಪಷ್ಟ ಪುರಾವೆಗಳಿದ್ದರೂ ಶಂಕರರಾಯನು ಮಾತ್ರ ತಾನು ತನ್ನ ಹೆಂಡತಿಯನ್ನು ಕೊಲೆಗೆಯ್ದ ಬಗ್ಗೆ ಒಪ್ಪಲೊಲ್ಲನು. ಆತನು ಸ್ವಲ್ಪವೂ ಅಂಜದೆ, ಪಶ್ಚಾತ್ತಾಪಕ್ಕೊಳಗಾಗದೆ ಹೇಳುತ್ತಿದ್ದುದೇನಂ ದರೆ, "ನಾನು ಸಂಪೂರ್ಣ ನಿರಪರಾಧಿಯು. ನನ್ನನ್ನು ಗಲ್ಲಿಗೇರಿಸಿರಿ; ಹೊಡೆದು-ಬಡೆದು ಕೊಲ್ಲಿರಿ; ಕೊಲೆಗೆಯ್ಯಿರಿ; ಅಥವಾ ಇಚ್ಛೆಬಂದಂತೆ ಮಾಡಿರಿ ಆ ಬಗ್ಗೆ ನಾನು ಕೊಂಚವೂ ದುಃಖಿಸುವದಿಲ್ಲ." ಶಂಕರ

ರಾಯನು ಈಗಲೂ ಎಲ್ಲರ ಸಮಕ್ಷದಲ್ಲಿ ಒಪ್ಪಿಕೊಳ್ಳುತ್ತಿದ್ದುದೇನಂದರೆ "ನಾನು ನನ್ನ ಹೆಂಡತಿಯೊಡನೆ ಅತ್ಯಂತ ದುರ್ವ್ಯವಹಾರ ಮಾಡುತ್ತಿದ್ದೆನು. ಈಗ ಸಾವಿತ್ರಿಯನ್ನು ಕಳೆಕೊಂಡದ್ದರಿಂದ ನನ್ನ ಜೀವನವು ತೀರ ಹೀನತರದ್ದಾಗಿದೆ. ಇನ್ನು ನಾನು ಜೀವಿಸಿರಲಿಕ್ಕೆ ಕೊಂಚವೂ ಇಚ್ಛಿಸುವದಿಲ್ಲ."

ಶಂಕರರಾಯನ ಈ ಎಲ್ಲ ಮಾತುಗಳು ಎಷ್ಟರಮಟ್ಟಿಗೆ ನಿಜವೆಂಬುದನ್ನು ತಿಳಿದು ನೋಡುವ ಶಕ್ತಿಯು ಆಗ ನನ್ನಲ್ಲಿರಲಿಲ್ಲ. ಆಗ ನಾನು ಮಂದಿಯ ಬಾಯಿಂದ ಕೇಳಿ ಅರಿತದ್ದೇನಂದರೆ, ಶಂಕರರಾಯನು ಒಮ್ಮೆ ನಿಮನ್ನು ಬಹು ಆಸ್ಥೆಯಿಂದ ಪ್ರತ್ಯಕ್ಷ ಕಾಣಬಯಸುತ್ತಾನೆಂದು. ಯಾರು ಯಾರು ಅವನನ್ನು ಪೋಲೀಸ ಚೌಕಿಯಲ್ಲಿ ನೋಡಲಿಕ್ಕೆ ಹೋಗುತ್ತಿದ್ದರೋ ಅವರೆಲ್ಲದುರಿಗೂ ಅವನು ಅದೇ ಸಂದೇಶವನ್ನು ನನಗೆ ಕಳಿಸಿದ್ದರಿಂದ, ನಾನು ನನ್ನ ಮನಸ್ಸಿನ ವಿರುದ್ಧವಾಗಿಯೇ ಏಕಾಗಲೊಲ್ಲದು, ಮುಂದೊಂದು ದಿನ ಆತನ ಭೆಟ್ಟಿಗೆಂದು ಆತನನ್ನು ಪ್ರತಿಬಂಧದಲ್ಲಿಟ್ಟಿದ್ದಂಥ ಪೋಲೀಸ ಚೌಕಿಗೆ ಹೋದೆನು.

( ೧೦ )

ನಾನು ತನ್ನನ್ನು ಸೆರೆಯಿರಿಸಿದ್ದ ಮನೆಗೆ ಬಂದುದನ್ನು ಕಂಡು ಶಂಕರರಾಯನು ಅತ್ಯಂತ ಮೋದಗೊಂಡನು; ಹಾಗು ನನ್ನ ಈ ಮೊದಲಿನ ಉಪದೇಶವನ್ನು ಅಲ್ಲಗಳೆದುದರಿಂದ ಹಾಗು ನನ್ನೊಡನೆ ಇದುವರೆಗೆ ಯಾವ ಯಾವ ಅನ್ಯಾಯ ಮಾಡಿದ್ದನೋ ಅವುಗಳನ್ನೆಲ್ಲ ಉಲ್ಲೇಖಿಸಿದ್ದರಿಂದ ಒತ್ತರಿಸಿ ಬರುತ್ತಿದ್ದ ಕಂಠದಿಂದ ಆತನು ಕಣ್ಣೀರು ದುರಿಸುತ್ತ ತನ್ನನ್ನು ಕ್ಷಮಿಸಬೇಕೆಂದು ಮತ್ತೆಮತ್ತೆ ನನ್ನನ್ನು ಯಾಚಿಸಹತ್ತಿದನು. ಕೆಲಹೊತ್ತಿನ ಮೇಲೆ ಆತನು:-"ಸತ್ಯವಂತಣ್ಣಾ, ನೀನು ಒಂದುವೇಳೆ ನನ್ನನ್ನು ಕ್ಷಮಿಸಿದರೂ ಅಭಾಗಿನಿಯಾದ ಸಾವಿತ್ರಿಯು ಈ ನರಕ ಕೀಟಿಕನಾದ ಶಂಕರನನ್ನೆಂದಾದರೂ ಕ್ಷಮಿಸುವಳೇ? ನಾನಿಂದು

ನನ್ನ ಪಾಪದ ಫಲವನ್ನು ಪಡೆದಿರುತ್ತೇನೆ. ಧರ್ಮದ ವಿಚಾರವು ಅವ್ಯಾಹತವಾಗಿರುತ್ತದೆ. ಇಂದೆಯೇ ಆಗದಿದ್ದರೂ ಎರಡು ದಿನ ತಡೆದಾದರೂ ಪ್ರತಿಯೊಬ್ಬರು ಖಂಡಿತವಾಗಿಯೂ ಸ್ವಕೃತ ಪಾಪ-ಪುಣ್ಯಗಳ ಫಲಗಳನ್ನು ಭೋಗಿಸಲೇಬೇಕಾಗುವದು; ಅವುಗಳನ್ನು ನಿರಾಕರಿಸಲಿಕ್ಕೆ ಯಾರೂ ಸಮರ್ಥರಾಗುವದಿಲ್ಲ. ನಾನು ಸಾವಿತ್ರಿಗೆ ಯಾವ ಯಾವ ನಿಷ್ಠೂರತನವನ್ನು ತೋರಿಸಿದೆನೋ, ಅದರಂತೆ ಯಾವ ರಕ್ಕಸನೂ ಮಾಡಲಿಕ್ಕೆ ಶಕ್ತನಾಗಲಿಕ್ಕಿಲ್ಲ. ನಾನು ಮನುಷ್ಯನೆಂದೆನಿಸಿಕೊಳ್ಳಲಿಕ್ಕೆ ತೀರ ಅಯೋಗ್ಯವಾಗಿರುತ್ತೇನೆ. ನನ್ನಂತಹ ಮಹಾ ಪಾಪಿಷ್ಠನ ಹೆಸರು ಈ ಲೋಕದೊಳಗಿಂದ ಚಿರಕಾಲವೂ ಲುಪ್ತವಾಗಿ ಬಿಡುವುದೇ ಒಳಿತು. ಅಣ್ಣಾ, ಸತ್ಯವಂತಾ, ಇಂದು ಎಲ್ಲರೂ ನಾನೇ ಸಾವಿತ್ರಿಯನ್ನು ಕೊಲೆ ಮಾಡಿದವನೆಂದು ನಂಬುತ್ತಾರೆ. ನೀನಾದರೂ ಹಾಗೆ ನಂಬಿರುವುದಿಲ್ಲೆಂತಿಲ್ಲ. ಲೋಕದವರೆಲ್ಲರ ಮನಸ್ಸಿನಲ್ಲಿಯೂ ನನ್ನ ಮಹಾ ಪಾಪದ ಪ್ರಾಯಶ್ಚಿತ್ತವೇ ನನಗಾಯಿತೆಂದು ಉಂಟಾಗಿರುವುದು. ಅವರೆಲ್ಲರ ಆ ನಂಬಿಗೆಯು ಚಿರಕಾಲವೂ ಚಲಿಸದಂತಿರಲಿ. ಅದರಿಂದಲೇ ನನಗೆ ಸುಖ-ಸಮಾಧಾನಗಳು; ಆದರೆ ಸತ್ಯವಂತಣ್ಣಾ, ನೀನು ಮಾತ್ರ ಹಾಗೆ ಎಲ್ಲರಂತೆ ನಿನ್ನ ಮನಸ್ಸಿನಲ್ಲಿ ತಿಳಕೊಳ್ಳಬೇಡ. ಈ ಸಂಗತಿಯನ್ನು ನಿನಗೆ ತಿಳಿಸುವ ಸಲುವಾಗಿಯೇ ನಾನು ನಿನ್ನನ್ನು ಇಲ್ಲಿಗೆ ನೋಡಲಿಕ್ಕೆಂದು ಕರೆಯಿಸಿದ್ದು. ನನಗೆ ಸತ್ಯವೆಂಬುದು ಗೊತ್ತಿಲ್ಲ; ನನಗೆ ಧರ್ಮವೆಂಬುದು ಇಲ್ಲವೇ ಇಲ್ಲ; ನನಗೆ ಯಾವುದೂ ಇಲ್ಲ ಎಂಬದನ್ನು ನೀನು ಈ ಮೊದಲೇ ಚೆನ್ನಾಗಿ ಮನಗಂಡವನಾಗಿರುತ್ತೀ. ನಾನು ಧರ್ಮಚ್ಯುತನು, ಮನುಷ್ಯತ್ವ ವಿವರ್ಜಿತನು, ಪಿಶಾಚಿಗಳ ಮೋಹ ಮಂತ್ರದಿಂದುತ್ಪನ್ನನಾದವನು; ಜಗತ್ತಿಗೆ ಕೇಡನ್ನುಂಟುಮಾಡುವದಕ್ಕಾಗಿಯೇ ಕಲಿಪ್ರಭಾವದಿಂದ ನಿರ್ಮಿತವಾದ ಪ್ರತಿಮೂರ್ತಿಯಾಗಿರುತ್ತೇನೆ. ಇಂಥ ನನ್ನ ಮಾತನ್ನು ಅದಾರು ನಂಬುವರು? ಆದರೆ ಅಣ್ಣಾ,

ಸತ್ಯವಂತಾ, ನೀನು ಮಾತ್ರ ಹಾಗೆ ನನ್ನಲ್ಲಿ ಅಪನಂಬಿಗೆ ತಾಳಬೇಡ. ನೀನೂ ಇತರರಂತೆ ನನ್ನಲ್ಲಿ ಅವಿಶ್ವಾಸವ ತಳೆದರೆ, ನಾನು ಸತ್ತರೂ ಕೂಡ ನನಗೆ ಸುಖ-ಶಾಂತಿಗಳು ಲಭಿಸಲಿಕ್ಕಿಲ್ಲ. ನಾನು ಎಂಥ ನಿರ್ಘೃಣಪಾಪಿಯಾಗಿದ್ದರೂ ಸಾವಿತ್ರಿಯನ್ನು ಕೊಂದವನಲ್ಲೆಂಬವನ್ನು ತಿಳಿದಿರುವಂಥ ಒಂದು ವ್ಯಕ್ತಿಯು ಈ ಜಗತ್ತಿನಲ್ಲಿರುತ್ತದೆ."

ಹೀಗೆಂದು ನುಡಿಯುತ್ತಿರುವಾಗ ಶಂಕರರಾಯನ ದನಿಯು ನಡುಗಹತ್ತಿತು. ಮಾತುಗಳು ಹೊರಡದಾದವು. ಆತನು ತನ್ನ ಎರಡೂ ಕೈಗಳಿಂದ ತನ್ನ ಮೋರೆಯನ್ನು ಗಟ್ಟಿಯಾಗಿ ಮುಚ್ಚಿಕೊಂಡು ಚಿಕ್ಕ ಬಾಲಕನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದನು.

ಹೇಳಲಿಕ್ಕೆ ಕಾರಣವಿಷ್ಟೇ, ಆತನ ಆಗಿನ ಕರುಣಾಜನ್ಯ ಅವಸ್ಥೆಯನ್ನು ಕಂಡು ಆಗ ನನ್ನ ಮರ್ಮಭೇದವಾಯಿತು. ಆತನ ವಿಷಯವಾಗಿ ನನ್ನಲ್ಲಿ ಒಳ್ಳೇ ಸಹಾನುಭೂತಿಯುಂಟಾಯಿತು. ಹಲವು ಬಗೆಯ ಮಾತುಗಳನ್ನಾಡಿ ಅವನನ್ನು ತುಸಮಟ್ಟಿಗೆ ಸಮಾಧಾನಪಡಿಸಿದ ಬಳಿಕ ನಾನು ಆತನನ್ನುದ್ದೇಶಿಸಿ ಕೇಳಿದೆನೇನಂದರೆ:--"ಶಂಕರರಾಯಾ, ಇದುವರೆಗೆ ಏನೇನು ಘಟಿಸಿತೋ ಅದೆಲ್ಲವನ್ನೂ ನೀನು ಮುಚ್ಚುಮರೆ ಮಾಡದಂತೆ ನನಗೆ ತಿಳಿಸು. ಯಾವ ಸಂಗತಿಯನ್ನೂ ಗೌಪ್ಯವಾಗಿರಿಸುವ ಪ್ರಯತ್ನಮಾಡಬೇಡ; ಅಂದರೆ ಈ ದುಃಸಮಯದಲ್ಲಿ ನಿನಗೆ ಯೋಗ್ಯವಾದ ಉಪಕಾರ ಮಾಡಲಿಕ್ಕೆ ನನಗನುಕೂಲವಾಗುವದು."

ಆಗ ಶಂಕರರಾಯನು ಹೇಳಹತ್ತಿದನು:—"ಸತ್ಯವಂತಣ್ಣಾ, ಆ ದಿನ ಬೆಳಿಗ್ಗೆ ಎದ್ದ ಕೂಡಲೆ ನನ್ನ ಕಣ್ಣಿಗೆ ಸಂಶಪ್ದೇನಂದರೆ, ಸಾವಿತ್ರಿಯು ರಕ್ತಾಂಗಿಯಾಗಿ ನನ್ನ ಹಾಸಿಗೆಯ ಹತ್ತರ ಬಿದ್ದುಬಿಟ್ಟಿದ್ದಳು. ಕೂಡಲೆ ನಾನು ಆಕೆಯನ್ನು ಹಿಡಿದೆಬ್ಬಿಸಹೋದೆನು. ಅವಳ ದೇಹದಲ್ಲಿ ಪ್ರಾಣವೇ ಇರಲಿಲ್ಲೆಂದು ತಿಳಿಯಿತು. ಆ ಕೂಡಲೆ ನನ್ನ ಹೃದಯದೊಳಗಿನ ರಕ್ತವೆಲ್ಲ ಗಡ್ಡೆಗಟ್ಟಿದಂತಾಯಿತು. ಸಾವಿತ್ರಿಯು

ಈ ಪಿಶಾಚಿ ಶಂಕರನನ್ನು ಇಲ್ಲಿಯೇ ಬಿಟ್ಟು ತಾನು ಸ್ವರ್ಗದ ದಾರಿ ಹಿಡಿದಿರುವಳೆಂದೂ, ವಿಶ್ವಬ್ರಹ್ಮಾಂಡವನ್ನೆಲ್ಲ ಶೋಧಿಸಿದರೂ ಅವಳನ್ನು ನಾನಿನ್ನು ಹೊಂದಲಾರೆನೆಂದೂ ತಿಳಿದುಬಿಟ್ಟೆನು. ಹೇಳಲೇನಣ್ಣಾ--ಸತ್ಯವಂತಾ? ಸೆರೆಯ ಅಮಲಿವಲ್ಲಿ ನಾನೇ ಗತ ರಾತ್ರಿಯಲ್ಲಿ ಅವಳನ್ನು ಕೊಲೆಗೆಯ್ದಿರಬೇಕೆಂದು ನನಗೆ ಮೊದಲು ಅನಿಸಿತು; ಆದರೆ ಪೂರ್ವ ರಾತ್ರಿಯ ಘಟನೆಗಳನ್ನೆಲ್ಲ ಸಂಪೂರ್ಣವಾಗಿ ಮನದಂದ ಬಳಿಕ ಹಾಗು ನನ್ನ ಸ್ವಂತದ ಚೂರಿಯೇ ಆಗಲೂ ಆವಳ ಮೃತದೇಹದ ಎದೆಯಲ್ಲಿ ಬುಡಮಟ್ಟ ಚುಚ್ಚಲ್ಪಟ್ಟಿರುವದನ್ನು ನಾನು ಯಾವಾಗ ಕಂಡೆನೋ, ಆಗ ಮಾತ್ರ ನನ್ನ ಆ ಭ್ರಮವೆಲ್ಲ ಒಮ್ಮೆಲೆ ನಿರಸನವಾಯಿತು. ನನ್ನ ಆ ಚೂರಿಯು ನನ್ನ ಕೂಡ್ರುವ ಕೋಣೆಯೊಳಗಿನ ಯಾವ ಸ್ಥಳದಲ್ಲಿ ಸದಾ ಇರಿಸಲ್ಪಡುತ್ತಿತ್ತೋ ಅಲ್ಲಿ ಅದು ಮುಂಚಿನ ರಾತ್ರಿ ಇದ್ದಿಲ್ಲವೆಂಬದೂ, ಆ ರಾತ್ರಿ ನಾನು ಅದನ್ನು ಬಹಳವಾಗಿ ಹುಡುಕಿದ್ದರೂ ಅದು ಸಿಕ್ಕಲಿಲ್ಲೆಂಬ ದೂ ನನಗೆ ಚೆನ್ನಾಗಿ ನೆನಪಿಗೆ ಬಂದಿತು. ನಾನು ಆ ಸಂಗತಿಯನ್ನು ಆ ರಾತ್ರಿ ಸಾವಿತ್ರಿಗೆ ಕೂಡ ತಿಳಿಸಿದ್ದೆನು. ಅದರಿಂದಲೇ ನನ್ನ ಮನಸ್ಸಿನಲ್ಲೊಂದಿಷ್ಟು ಅನುಮಾನವಾಗುತ್ತಿದೆ. ಇಲ್ಲದಿದ್ದರೆ ಈಗಲೂ ನನ್ನ ಮನಸ್ಸಿನ ನಂಬಿಗೆಯೇನಂದರೆ, ಸೆರೆಯ ಮದದಿಂದ ಸ್ಮೃತಿರಹಿತನಾಗಿದ್ದ ನಾನೇ ಸಾವಿತ್ರಿಯನ್ನು ಕೊಲೆಗೆಯ್ದಿರಬೇಕೆಂದು; ಆದರೆ ಸತ್ಯವಂತಣ್ಣಾ, ಆ ಚೂರಿಯ ಬಗ್ಗೆಯೂ ಹಾಗು ಇನ್ನೊಂದು ವಿಷಯಕ್ಕೂ ನನಗೊಂದು ಬಲವಾದ ಸಂದೇಹವಿದೆ; ಆದರೆ-ಆದರೆ-ನಾನದನ್ನು ಸ್ಪಷ್ಟವಾಗಿ ಹೇಳಲಾರದವನಾಗಿದ್ದೇನೆ. ಒಂದುವೇಳೆ-ಒಂದುವೇಳೆ—''

ಶಂಕರರಾಯನು ಹಾಗೆ ಸಂದೇಹಗೊಂಡವನಂತೆ ಮಾಡಲು, ಸ್ವಂತ ನಾನೂ ಒಂದಿಷ್ಟು ಅನುಮಾನಕ್ಕೊಳಪಟ್ಟಂತಾದೆನು; ಆದರೆ ಆ ನನ್ನ ವೃತ್ತಿಯನ್ನು ನಾನು ಆಗಲೇ ಸುಧಾರಿಸಿಕೊಂಡು ಆತನನ್ನು

ಕುರಿತು:—ಶಂಕರರಾಯಾ, ಆ ಸಂಗತಿ ತಿಳಿಸಲಿಕ್ಕೆ ನೀನು ಇಷ್ಟೇಕೆ ಸಂಕೋಚಪಡುತ್ತೀ? ನೀನು ಏನನ್ನು ಬಲ್ಲೆಯೋ ಅಥವಾ ಕಂಡು ಹಿಡಿದಿರುವಿಯೋ ಅದನ್ನು ನನ್ನೆದುರಿಗೆ ಸ್ಪಷ್ಟವಾಗಿ ತಿಳಿಸಿಬಿಡು''

ಶಂಕರರಾಯ:—ನನ್ನ ಸಾವಿತ್ರಿಯ ಹೃದಯದಲ್ಲಿ ಹೀಗೆ ಅಮಾನುಷ ರೀತಿಯಿಂದ ಚೂರಿ ಚುಚ್ಚಲಿಕ್ಕೆ ಆದೊಂದು ವ್ಯಕ್ತಿಯ ಹೊರತು ಅಂಥ ಭಯಾನಕ ವೈರಿಯು ಅವಳಿಗಿನ್ನಾರೂ ಇರಲಿಲ್ಲ. ಆ ವ್ಯಕ್ತಿಯ ಸಂಬಂಧದಲ್ಲೇ ನನಗೊಂದಿಷ್ಟು ಸಂದೇಹವಿದೆ; ಆದರೆ—

ಆಗ ನಾನು ವಿಶೇಷ ಕಠೋರದನಿಯಿಂದ ಕೇಳಿದೆನೇನಂದರೆ:- ''ಶಂಕರರಾಯಾ, ಆ ವ್ಯಕ್ತಿಯ ಹೆಸರನ್ನೇಕೆ ಬಿಚ್ಚಿ ಹೇಳಲೊಲ್ಲೆ?''

ಶಂಕರರಾಯನು ತೀರ ಮೆಲ್ಲನೆ:—''ನೀನು ಅವಳನ್ನು ಬಲ್ಲೆ. ಆ ವ್ಯಕ್ತಿಯು ಮೋಹಿನಿಯೇ ಇರಬೇಕೆಂದು ನನಗನಿಸುತ್ತದೆ. ಯಾವ ದಿವಸ ನನ್ನ ಮದುವೆಯಾಯಿತೋ, ಅಂದಿನಿಂದ ಮೋಹಿನಿಯು ನನ್ನ ಮೊದಲಿನ ಮೋಹಿನಿಯಾಗಿ ಉಳಿದಿಲ್ಲ. ಯಾವುದೋ ಒಂದು ತೀವ್ರ ನಿರಾಶೆಯಿಂದ ಆವಳು ಕೇವಲ ಜೀವಚ್ಛ್ರವವಾಗಿ ಬಿಟ್ಟಿದ್ದಾಳೆ. ಅವಳು ಹಲವು ಸಾರೆ ನನ್ನನ್ನು ಕುರಿತು ನಿಷ್ಠೂರರಾಗಿ ನುಡಿದಿರುವದೇನಂದರೆ:—'ಶಂಕರರಾಯಾ, ನಿನ್ನೀ ಕೃತ್ಯದ ಫಲವನ್ನು ನೀನು ಬೇಗನೆ ಭೋಗಿಸಲೇ ಬೇಕಾಗುವದು. ನಾನು ಅಂಥಿಂಥ ಹೆಣ್ಣು ಮಗಳಲ್ಲ; ಮೋಹಿನಿ ಎಂದಿದೆ ನನ್ನ ಹೆಸರು. ನನ್ನ ಒಂದೇ ಒಂದು ಮೋಹನಾಸ್ತ್ರದಿಂದ ಎರಡು ಹಕ್ಕಿಗಳೂ ಒಮ್ಮೆಲೆ ಹೇಗೆ ನೆಲಕ್ಕುರುಳುವವೆಂಬದನ್ನು ನೀನು ಒಂದಾನೊಂದು ದಿನ ಕಣ್ಣಾಣದಿರಲಾರೆ.' '

ಹೀಗೆಂದು ನುಡಿದು ಶಂಕರರಾಯನು ಪುನಃ ತನ್ನ ಎರಡೂ ಕೈಗಳಿಂದ ಮೋರೆಮುಚ್ಚಿಕೊಂಡು ಕಣ್ಣೀರುದುರಿಸುತ್ತ ಬಿಕ್ಕಿ ಬಿಕ್ಕಿ ಅಳಹತ್ತಿದನು.

ನಾನು ಅತ್ಯಂತ ಚಕಿತನಾಗಿ ಗಟ್ಟಿಯಾಗಿ ಅಂದೆನೇನಂದರೆ:—

"ಶಂಕರರಾಯಾ, ಅದು ಅಸಂಭವ; ಹಾಗೆಂದಾದರೂ ಆದೀತೇ?" ಅನುತಾಪದಗ್ಧನೂ ಬಿಕ್ಕಿಬಿಕ್ಕಿ ಅಳುವವನೂ ಆದ ಶಂಕರರಾಯನು: "ಹಾಗಾಗದಿದ್ದರೆ ನಾನು ನಿನಗೆ ಅತ್ಯಾಗ್ರಹದಿಂದ ಸೂಚಿಸುವದೇನಂದರೆ, ಸಾವಿತ್ರಿಯನ್ನು ಕೊಲೆಗೆಯ್ದುವರಾರೆಂಬದನ್ನು ಕಂಡುಹಿಡಿಯುವ ಬಗ್ಗೆ ನೀನು ಸಾಕಷ್ಟು ರೀತಿಯಿಂದ ಪ್ರಯತ್ನಿಸಬೇಕು." ಹೀಗೆಂದು ಹೇಳಿ, ಅವನು ತನ್ನ ಮೋರೆಯ ಮೇಲಿನ ಕೈಗಳನ್ನು ತೆಗೆದುಕೊಂಡು ಅಶ್ರುವರ್ಷಣದಿಂದ ತೊಯ್ದ ತನ್ನ ಕರುಣದೃಷ್ಟಿಯನ್ನು ನನ್ನ ಮುಖದ ಮೇಲಿಟ್ಟು ಹೇಳತೊಡಗಿದನು:—"ಆದರೆ ಸತ್ಯವಂತಣ್ಣಾ, ನಾನು ನನ್ನ ಸ್ವಂತದ ಬಿಡುಗಡೆಯ ಸಲುವಾಗೆಂದು ನಿನ್ನನ್ನು ಕುರಿತು ಹೀಗೆ ಒತ್ತಾಯಪಡಿಸುತ್ತಿರುವೆನೆಂತಲ್ಲ; ನನಗೆ ಗಲ್ಲು ಆಗಲಿ-ಆಗದಿರಲಿ, ಆ ಬಗ್ಗೆ ನಾನು ಕೊಂಚವೂ ಚಿಂತಿಸುವದಿಲ್ಲ. ಎಲ್ಲೂ ಒಂದಾನೊಂದು ದಿನ ಸಾಯಲೇಬೇಕು. ಕೆಲವರು ನಾಲ್ಕುದಿನ ಮುಂಚೆ; ಕೆಲವರು ನಾಲ್ಕುದಿನ ಹಿಂದೆ, ಇಷ್ಟೇ; ಆದರೆ ಸತ್ಯವಂತಾ, ಸಾವಿತ್ರಿಯನ್ನು ಕೊಂದವನಿಗೆ ಆತನ ನರಹತ್ಯೆಯ ಬಗ್ಗೆ ಯಾವ ಶಿಕ್ಷೆಯೂ ಆಗಲಿಲ್ಲೆಂಬದಕ್ಕಷ್ಟೇ ನನಗೆ ಕೆಡಕೆನಿಸುತ್ತದೆ."

ಮಾತುಮಾಡುತ್ತಿರಲಿಕ್ಕೆ ಶಂಕರರಾಯನ ಅಶ್ರುಗಳನ್ನುದುರಿಸುತ್ತಿದ್ದ ಕಣ್ಣುಗಳು ಒಮ್ಮೆಲೆ ಕಾರ್ಮೋಡಗಳಿಂದ ಆವೃತ್ತವಾದ ರಾತ್ರಿಯೊಳಗಿನ ಕೋಲ್ಮಿಂಚುಗಳಂತೆ ಕೆಂಡಗಳನ್ನುದುರಿಸಹತ್ತಿದವು; ಮತ್ತು ತನ್ನ ಸ್ವಂತ ಕೈಗಳ ಮುಷ್ಟಿಗಳನ್ನು ಒಳ್ಳೇ ಬಲವಾಗಿ ಹಿಡಿದುದರಿಂದ, ಅವನ ಉಗುರುಗಳು ಅವಸಿಗೇ ನೆಟ್ಟು, ಆತನ ಕೈಗಳಿಂದ ಬಳಬಳನೆ ನೆತ್ತರ ಸುರಿಯುಹತ್ತಿತು!

ಆಗ ನಾನು ಶಂಕರರಾಯನನ್ನು ತೀರ ತಿರಸ್ಕಾರದೃಷ್ಟಿಯಿಂದ ನೋಡುತ್ತಿದ್ದರೂ ಕೂಡ ಅವನು ಅತ್ಯಂತ ಪಶ್ಚಾತ್ತಾಪದಿಂದ ಬಳಲಿದ್ದನ್ನೂ ಹಾಗು ಮರ್ಮಾಹತವಾದದ್ದನ್ನೂ ಕಂಡು ನನ್ನ ಮನಸ್ಸಿ

ನೊಳಗಿನ ಆ ಭಾವವು ಒಮ್ಮೆಲೆ ಮಾಯವಾಗಿಬಿಟ್ಟಿತು. ಆದರಿಂದ ಶೋಕದಿಂದ ಬಳಲುತ್ತಿದ್ದ ಶಂಕರರಾಯನನ್ನು ನಾನು ಅದೇ ಅವಸ್ಥೆಯಲ್ಲಿ ಮತ್ತೆ ಇರಗೊಡದಾದೆನು. ಬಳಿಕ ನಾನು ಹೇಳಿದೆನೇನಂದರೆ: "ಶಂಕರರಾಯಾ. ಯಾವದೇ ಬಗೆಯಿಂದಾಗಲಿ ನಾನು ನಿನ್ನ ನಿರ್ದೋಷತೆಯನ್ನು ಸಪ್ರಮಾಣವಾಗಿ ಸಿದ್ಧಗೊಳಿಸುತ್ತೇನೆ. ಈ ಕ್ಷಣದಿಂದಲೇ ನಾನು ಆ ಕೆಲಸಕ್ಕಾಗಿ ನನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತೇನೆ."

ಈ ಪ್ರಕಾರವಾಗಿ ಅವನಿಗೆ ವಚನ ಕೊಟ್ಟನಂತರ ನಾನು ಅಲ್ಲಿಂದ ಹೊರಟಿದ್ದೆನು; ಹಾಗು ಈ ದಿನ ನಿಮ್ಮೆದುರಿಗೆ ಬಂದು ಅದಕ್ಕಾಗಿಯೇ ನಿಮ್ಮನ್ನು ಪ್ರಾರ್ಥಿಸುತ್ತಿದ್ದೇನೆ, ಎಂದು ನಾನು ಆ ಸುಪ್ರಸಿದ್ಧ ಪತ್ತೆದಾರನಾದ ವೃದ್ಧ ಭಗವಾನ್‌ದಾಸನೆದುರಿಗೆ ನನ್ನ ಸಂಗತಿಗಳನ್ನೆಲ್ಲ ತಿಳಿಸಿದೆನು.

( ೧೭ )

ನನ್ನ ಸಂಗತಿಯನ್ನೆಲ್ಲ ಕೇಳಿಕೊಂಡ ಬಳಿಕ ಭಗವಾನ್‌ದಾಸನು ಎಷ್ಟೋ ಹೊತ್ತಿನವರೆಗೆ ತನ್ನ ಗೋಣನ್ನು ಅಂಗೈಮೇಲಿಟ್ಟುಕೊಂಡು ನೀರವವಾಗಿ ಕುಳಿತು ಯೋಚಿಸಿದನು. ಆಗ ಆತನು ನನ್ನನ್ನು ಕುರಿತು ಏನನ್ನೂ ಕೇಳಲಿಲ್ಲ; ಅಥವಾ ನನಗೆ ಏನೂ ಹೇಳಲಿಲ್ಲ ಸಹ.

ಭಗವಾನ್‌ದಾಸನು ಹಾಗೆ ಎಷ್ಟೋ ಹೊತ್ತಿನವರೆಗೆ ನಿಸ್ತಬ್ಧವಾಗಿ ಯೋಚಿಸುತ್ತ ಕುಳಿತದ್ದನ್ನು ಕಂಡು, ನನ್ನಿಂದ ಮತ್ತೆ ಹೆಚ್ಚು ಹೊತ್ತು ಸುಮ್ಮನಿರಲಾಗದ್ದರಿಂದ ಕೊನೆಗೆ ನಾನೇ ಅವನನ್ನುದ್ದೇಶಿಸಿ: "ಭಗವಾನ್‌ದಾಸರೇ, ತಾವು ಇದುವರೆಗೆ ಹೀಗೆ ಒಂದೇಸವನೆ ಯೋಚಿಸುತ್ತಿರುವದನ್ನು ಕಂಡು ನಡೆದ ಸಂಗತಿಗಳಲ್ಲಿ ಏನನ್ನಾದರೂ ಹೇಳಲಿಕ್ಕೆ ನಾನು ಮರೆತಿರುವೆನೋ ಏನೋ ಎಂಬ ಸಂದೇಹವು ನನ್ನಲ್ಲುಂಟಾಗಹತ್ತಿದೆ. ತಮಗೆ ಏನಾದರೂ ಅಪ್ರಸ್ತುತವಾಗಿ

ತೋರಿ ಸಂಶಯ ಬರುತ್ತಿದ್ದರೆ, ನನಗೆ ಆ ಬಗ್ಗೆ ಪ್ರಶ್ನಿಸಬೇಕು; ಆಂದರೆ ಒಂದು ವೇಳೆ ನಾನು ಏನನ್ನಾದರೂ ಮರೆತಿದ್ದರೆ, ಅದರ ನೆನಪು ನನಗಾಗಿ ನಾನದನ್ನು ನಿಮಗೆ ತಿಳಿಸಲಿಕ್ಕೆ ಅನುಕೂಲವಾದೀತು" ಎನ್ನಲು,

ಆ ಮುದುಕನು ಬಹು ಸೌಮ್ಯವಾಗಿ:—"ಇಲ್ಲ, ನನಗಾವ ಸಂಶಯವೂ ಉಂಟಾಗಿಲ್ಲ" ಎಂದಂದು, ಚೆನ್ನಾಗಿ ಕುಳಿತು ಮತ್ತೊಮ್ಮೆ ಡಬ್ಬಿಯೊಳಗಿಂದ ನಶ್ಯವನ್ನು ತಕ್ಕೊಂಡನು. ತದನಂತರ ಆ ಭಗವಾನದಾಸನು:-"ಇಲ್ಲಪ್ಪಾ-ಇಲ್ಲ; ನನಗಾವ ಸಂದೇಹವೂ ಉಳಿದಿಲ್ಲ. ನಾನದನ್ನೆಲ್ಲ ಚೆನ್ನಾಗಿ ಕೇಳಿಕೊಂಡಿರುತ್ತೇನೆ. ಈಗ ನಾನು ಆ ಬಗ್ಗೆ ಆಲೋಚಿಸುತ್ತಿಲ್ಲ; ಆದರೆ ಈ ಕೆಲಸವು ತೋರುವಷ್ಟು ಸಹಜವಾಗಿಲ್ಲ. ಸಹಜವಾಗಿರದಿದ್ದರೂ ಆದನ್ನು ಸಹಜವಾಗಗೊಳಿಸಲಿಕ್ಕೆ ಪ್ರಯತ್ನ ಪಡಬೇಕಾಗಿದೆ. ಅದಕ್ಕಿಂತ ಮೊದಲು ನೀವು ನನ್ನಲ್ಲೊಂದು ಮಾತಿನ ಬಗ್ಗೆ ಒಪ್ಪಬೇಕಾಗುವುದು; ಹಾಗು ನನ್ನ ಒಂದೆರಡು ಪ್ರಶ್ನೆಗಳಿಗೆ ಸ್ಪಷ್ಟ ಮತ್ತು ಸರಳವಾದ ಉತ್ತರಗಳನ್ನು ಕೊಡಬೇಕಾಗುವುದು."

"ಒಂದೆರಡೇ ಏಕೆ; ತಾವು ಏನೇನನ್ನು ಕುರಿತು ಪ್ರಶ್ನಿಸಬೇಕಾಗಿದೆಯೋ ಅದನ್ನೆಲ್ಲ ಕೇಳಿರಿ; ನಾನು ಅವುಗಳಿಗೆಲ್ಲ ಈಗಲೆ ತಕ್ಕ ಉತ್ತರಗಳನ್ನು ಕೊಡುತ್ತೇನೆ; ಆದರೆ ನಾನು ತಮ್ಮ ಬಳಿಗೆ ಏನನ್ನು ಕುರಿತು ಒಪ್ಪಬೇಕಾಗುವದೆಂಬದನ್ನು ಮೊದಲು ತಿಳಿಯದ ಹೊರತು ನಾನು ಅದಕ್ಕೆ ಸಮ್ಮತಿ ಅಥವಾ ಅಸಮ್ಮತಿ ದರ್ಶಿಸುವ ಬಗೆ ಹೇಗೆ? ನನ್ನಿಂದ ಆ ತಮ್ಮ ಕೆಲಸವು ಆಗುವಂತಿದ್ದರೆ, ತಾವು ತಿಳಿಸಿದ ಕೂಡಲೆ ನಾನದಕ್ಕೆ ಸಮ್ಮತಿಸದಿರಲಾರೆನು" ಎಂದು ಅಂದೆನು.

"ಆ ಮಾತೇನೂ ಸುಳ್ಳಲ್ಲ" ಎಂದಂದು, ಭಗವಾನದಾಸನು ಒಂದಿಷ್ಟು ಸಂದೇಹಗೊಂಡವನಂತೆ ಮಾಡಿದನು. ಬಳಿಕ ಹೇಳಿದನೇನಂದರೆ:—"ನಾನು ನಿಮ್ಮನ್ನು ಒಪ್ಪಹೇಳುವ ವಿಷಯವು ಅಂಥದೇನೂ ಗಡಚಾದುದಲ್ಲ. ನೀವು ಮನಸ್ಸು ಮಾಡಿದರೆ ಅದನ್ನು ಈಗಲೆ

ಮಾಡಬಲ್ಲಿರಿ. ಇತ್ತೀಚೆಗೆ ಮನುಷ್ಯರ ವಚನಕ್ಕೆ ಬೆಲೆಯಿಲ್ಲದಂತಾಗಿದೆ. ಆದರಿಂದ ನಾನೀಗ ಹೇಳುವ ಮಾತು ಅನವಶ್ಯಕವಲ್ಲ. ಈ ಗುಹ್ನೆಯ ಶೋಧಕ್ಕೆಂದು ನೀವು ನನಗೆ ಎಷ್ಟು ಹಣ ಕೊಡುತ್ತೀರೆಂಬದನ್ನು ಮೊದಲು ಸ್ಪಷ್ಟವಾಗಿ ತಿಳಿಸಿರಿ."

'ಭಗವಾನ್‌ದಾಸರೇ, ಹಣದ ಬಗ್ಗೆ ನಿಮಗೇಕೆ ಚಿಂತೆ? ನಿಜವಾದ ಗುಹ್ನೆಗಾರನನ್ನು ಹಿಡಿದುಕೊಟ್ಟರೆ ನೀವು ಕೇಳುವಷ್ಟು ಹಣವನ್ನು ನಾನು ನಿಮಗೆ ಸಲ್ಲಿಸುತ್ತೇನೆ.'

"ಸತ್ಯವಂತರಾಯರೇ, ಅಷ್ಟು ದೊಡ್ಡ ಮಾತೇತಕ್ಕೆ? ನಾನು ಈ ಗುಹ್ನೆಯ ಶೋಧವನ್ನು ಶಕ್ಯವಾದಷ್ಟು ತೀವ್ರ ಮಾಡಲಿಕ್ಕೆ ಪ್ರಯತ್ನಿಸುತ್ತೇನೆ; ಆದರೆ ನೀವು ಕೊಡಲಿರುವ ಪುರಸ್ಕಾರದ ಹಣವನ್ನು ಯಾವನೊಬ್ಬ ನಂಬಿಗಸ್ತನಲ್ಲಿ ಈಗಲೆ ಕಟ್ಟಿಡಬೇಕು."

"ನಿಜವಾದ ಕೊಲೆಗಾರನನ್ನು ಕಂಡುಹಿಡಿದರೆ ನಾನು ನಿಮಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುವೆನು."

"ಸಾಕು; ಅದಕ್ಕಿಂತ ಹೆಚ್ಚಿನ ಹಣದ ಅವಶ್ಯಕತೆಯಿಲ್ಲ; ಆದರೆ ನೀವು ಅದನ್ನೀಗ ನಿಮ್ಮ ನಂಬಿಗೆಯ ಹಾಗು ನನ್ನ ಪರಿಚಯದ ಆ ಮೂಲೀಮನೆ ಗೋಪಾಲರಾಯರಲ್ಲಿ ಇಡುಗಂಟೆಂದು ಇಂದೇ ಕೊಟ್ಟಿಡಬೇಕು. ನಾನು ಕೃತಕಾರ್ಯನಾದರೆ ಅವರಿಂದ ಆ ಹಣವನ್ನು ಪಡೆಯುವೆನು; ಇಲ್ಲವಾದರೆ ನಿಮ್ಮ ಹಣವನ್ನು ಅವರು ನಿಮಗೇ ಮುಟ್ಟಿಸುವರು."

ನಾನು "ಇದಕ್ಕೆ ನನ್ನ ಸಂಪೂರ್ಣ ಒಪ್ಪಿಗೆಯಿದೆ. ನಾನು ಈ ಬಗ್ಗೆ ಅಸಮ್ಮತಿ ಪ್ರಕಟಿಸುವ ಬಗೆಯಾದರೂ ಉಂಟೇ? ಅದಿರಲಿ. ಇನ್ನು ತಾವು ನನಗೆ ಕೇಳತಕ್ಕ ಪ್ರಶ್ನೆಗಳನ್ನು ಕೇಳಿಕೊಳ್ಳಿರಿ."

ಭಗವಾನ್‌ದಾಸ:—"ಮೊದಲನೇ ಪ್ರಶ್ನೆಯೇನಂದರೆ, ನನ್ನೆದುರಿಗೆ ಯಾವ ಸಂಗತಿಯನ್ನೂ ನೀವು ಮುಚ್ಚುಮರೆ ಮಾಡಲಾಗದು;

ಸತ್ಯವಾದುದನ್ನೇ ಹೇಳಬೇಕು. 'ಶಂಕರರಾಯನು ನಿರ್ದೋಷಿಯೆಂದು ಅಂದುಕೊಳ್ಳುವನಲ್ಲ; ಆ ಮಾತನ್ನು ನೀವು ನಂಬುವಿರಾ?''

ನಾನು:—''ಖಂಡಿತವಾಗಿಯೂ ಹಾಗಿರಬೇಕು. ಆತನ ದುಶ್ಚರಿತ್ರಕ್ಕಾಗಿ ನಾನು ಆತನನ್ನು ಮನಃಪೂರ್ವಕವಾಗಿ ತಿರಸ್ಕರಿಸುತ್ತಿದ್ದೆನು; ಆದರೆ ಸಾವಿತ್ರಿಯ ಕೊಲೆಯ ವಿಷಯದಲ್ಲಿ ಆತನೇ ದೋಷಿ ಎಂದು ನನ್ನ ಮನಸ್ಸಿಗೆ ಎಳ್ಳಷ್ಟಾದರೂ ಸಂದೇಹವೆನಿಸಿದ್ದರೆ, ಆತನ ಬಂಧ ವಿಮೋಚನಕ್ಕೆಂದು ನನ್ನ ಅಂಗುಲಿಯು ಒಂದಿಷ್ಟು ಚಲಿಸಿದ್ದರೂ ನಾನ ದನ್ನು ಆಗಲೆ ಕತ್ತರಿಸಿ ಚೆಲ್ಲುತ್ತಿದ್ದೆನು.''

ಭಗ:—''ಹಾಗಲ್ಲವೇ! ಅದಿರಲಿ. .ಇನ್ನು ಎರಡನೇ ಪ್ರಶ್ನೆಯು-ಶಂಕರರಾಯನಷ್ಟು ಕೊಲೆಗಾರನಲ್ಲವೆಂಬ ಬಗ್ಗೆ ಸಪ್ರಮಾಣವಾಗಿ ಸಿದ್ಧವಾದರೆ ಸಾಕೋ? ಅಥವಾ ಯಾರಿಂದ ಆ ಸ್ತ್ರೀಹತ್ಯೆಯಾಗಿ ದೆಯೋ ಆತನನ್ನು ಹಿಡಿದೇ ತೀರಬೇಕೆಂದು ಬಯಸುವಿರೋ? ಇದನ್ನು ನೀವೀಗ ನನಗೆ ಸ್ಪಷ್ಟವಾಗಿ ತಿಳಿಸಿರಿ.''

ನಾನು:—''ರಾಯರೇ, ಕ್ಷಮಿಸಬೇಕು; ನನಗೆ ತಮ್ಮ ಪ್ರಶ್ನೆಯ ಇಂಗಿತವೇ ತಿಳಿಯಲಿಲ್ಲ.''

ಭಗ:—''ಇದರಲ್ಲಿ ತಿಳಿಯದಂತಹ ಗಡಚಾದ ವಿಷಯವೇ ಇಲ್ಲವಲ್ಲ! ಒಂದಿಷ್ಟು ಸಾವಧಾನದಿಂದ ಯೋಚಿಸಿ ನೋಡಿದರೆ ಸಕಲವೂ ಸ್ಪಷ್ಟ ಗೊತ್ತಾಗುವದು. ಅದನ್ನು ನಾನೇ ನಿಮಗೆ ತಿಳಿಹೇಳುತ್ತೇನೆ, ಕೇಳಿರಿ. ಮುಖ್ಯ ವಿಷಯವೆಂದರೆ, ಪ್ರಸ್ತುತದ ಕೊಲೆಗಾರನನ್ನು ಶೋಧಿಸಿ ಪ್ರತಿಬಂಧಿಸುವುದು ಅಷ್ಟು ಸಾಮಾನ್ಯಕೆಲಸವಾಗಿರುವದಿಲ್ಲ! ನಾನು ಹಾಗೆ ಮಾಡಲಿಕ್ಕೆ ಪ್ರಯತ್ನಿಸಿದರೂ ಆತನು ಒಮ್ಮೆಲೆ ಸಿಗಲಿಕ್ಕಿಲ್ಲ. ಅದು ಬಹು ಕಠಿಣ ಕೆಲಸವಾಗಿರುತ್ತದೆ. ಅದಕ್ಕಿಂತಲೂ ಸುಮ್ಮನೆ ಯಾವನೊಬ್ಬ ನಿರಪರಾಧ ವ್ಯಕ್ತಿಯನ್ನು ಹಲವು ಕಲ್ಪಿತ ಪುರಾವೆಗಳಿಂದ ಪ್ರತಿಬಂಧಿಸುವುದೇ ಸುಲಭವು.

ಭಗವಾನ್‌ದಾಸನ ಆ ನುಡಿ ಕೇಳಿ ನನಗೆ ನಗೆ ಬಂದಿತು. ಆಗ ನಾನು:—“ಭಗವಾನ್‌ದಾಸರೇ, ತಮ್ಮ ಮಾತಿನ ಇಂಗಿತವು ತಿಳಿಯಿತು. ನಾನು ಯಾವ ಸಾವಿರ ರೂಪಾಯಿ ಕೊಡಲಿಕ್ಕೆ ವಚನಬದ್ಧನಾಗಿರುವೆನೋ ಅವುಗಳನ್ನು ನೀವು ಶಂಕರರಾಯನನ್ನು ನಿರಪರಾಧಿಯೆಂದು ನಿರ್ಧರಿಸಿದ ಕೂಡಲೆ ಪಡೆಯತಕ್ಕದ್ದು; ಆದರೆ ಈಗಿನ ಸ್ಥಿತಿಯಲ್ಲಿ ನಾನು ನನ್ನ ಬಯಕೆಯನ್ನು ಇದಕ್ಕೂ ಮುಂದಗಿಸುವದು ಯೋಗ್ಯವಾಗಲಿಕ್ಕಿಲ್ಲ; ಆದರೂ ನನಗನಿಸುವದೇನಂದರೆ-ನೀವು ಕೊಲೆಗಡಕನನ್ನೂ ಹಿಡಿದುಕೊಡಬೇಕು; ಶಂಕರರಾಯನನ್ನೂ ನಿರಪರಾಧಿಯೆಂದು ಉದ್ಧರಿಸಬೇಕು. ಅಂದರೇನೇ ನೀವು ಈ ಸಾವಿರ ರೂಪಾಯಿಗಳನ್ನು ಪಡೆಯಲು ಅಧಿಕಾರಿಗಳಾಗುವಿರಿ.”

ನನ್ನ ಮಾತನ್ನು ಕೇಳಿ ಭಗವಾನ್‌ದಾಸನು ನುಡಿದನೇನಂದರೆ: “ಹಾಗೆಯೇ ಆಗಲಿ. ಆ ಮೇಲೆ ಇಲ್ಲದ ಗೊಂದಲಕ್ಕೆ ಆಸ್ಪದವುಳಿಯಬಾರದೆಂದು ನಾನು ಮೊದಲೇ ಎಲ್ಲ ಮಾತಿನ ನಿಷ್ಕರ್ಷಮಾಡಿಕೊಳ್ಳುವದುಚಿತವು- ಇನ್ನು ನೀವು ಹೋಗಬಹುದು; ನಿಮಗೆ ನಾನು ಕೇಳತಕ್ಕದ್ದೇನೂ ಉಳಿದಿರುವದಿಲ್ಲ.”

(೧೨)

ಅಂದು ಹೀಗೆ ಉಭಯತರಲ್ಲಿ ಮಾತು-ಕಥೆಗಳಾಗಲು, ಮುಂದೆ ನಾಲ್ಕೈದು ದಿನಗಳ ನಂತರ ಭಗವಾನದಾಸನು ನನ್ನ ಮನೆಗೆ ತಾನೇ ಬಂದನು. ಆಂದು ಆತನು ಒಳ್ಳೇ ಸಿಟ್ಟಿಗೆದ್ದಿರುವಂತೆ ತೋರುತ್ತಿದ್ದನು. ನಾನು ಆತನನ್ನು ಕುರಿತು ಪ್ರಶ್ನೆಮಾಡುವ ಮೊದಲೇ ಆತನು ನನ್ನನ್ನುದ್ದೇಶಿಸಿ:—“ಮನಸ್ಸಿನಲ್ಲಿ ಯಾವ ಭಾವವನ್ನು ಧರಿಸಿ ನಾನು ಕಾರ್ಯಪ್ರವೃತ್ತನಾದೆನೋ ಅದು ಸರಿಯಾಗಲಿಲ್ಲ; ದುಡ್ಡಿನ ಲೋಭ ದೋರಿ, ನೀವು ಈ ಮುದುಕನ ತಲೆಯ ಮೇಲೆ ನನ್ನಿಂದ ನೀಗಲಾರ

ದಂತಹ ಬಹು ದೊಡ್ಡ ಹೊರೆಯನ್ನು ಹೊರಿಸಿಬಿಟ್ಟಿರುವಂತೆ ತೋರುತ್ತದೆ" ಎಂದಂದನು.

"ಏಕೆ? ಏನಾಯಿತು? ಇಂದು ತಾವೊಳ್ಳೇ ಸಂತಪ್ತರಾಗಿರುವಂತಿದೆಯಲ್ಲ!"

"ಮಹಾನುಭಾವರೇ, ಹೌದು. ಮೈಯು ಉರಿಯಹತ್ತಿದ ಬಳಿಕ ಸಂತಾಪವಾಗದಿರುವುದೇ?"

"ಕಳೆದ ನಾಲ್ಕೈದು ದಿನಗಳಲ್ಲಿ ಯಾವ ಸಂಗತಿಯನ್ನೂ ತಾವು ನಿರ್ದಿಷ್ಟಗೊಳಿಸಲಿಲ್ಲವೇ?"

ಆಗ ಭಗವಾನ್‌ದಾಸನು: "ಮತ್ತೇನು ನಿರ್ದಿಷ್ಟಗೊಳಿಸಿಕೊಳ್ಳಬೇಕು? ಶಂಕರರಾಯನಿಂದ ಈ ಕೊಲೆಯಾಗಿರುವದಿಲ್ಲೆಂಬದು ನನ್ನ ಮನಸ್ಸಿಗೆ ಖಾತ್ರಿಯಾಗಿಹೋಗಿದೆ; ಮತ್ತು ಅದು ಬಹುಶಃ ಸತ್ಯವೇ ಆಗಿರಬೇಕು. ಹಾಗಿದ್ದರೂ ಕೂಡ ಶಂಕರರಾಯನು ಈ ಕೊಲೆಯ ಪ್ರಕರ್ಣದಲ್ಲಿರುವನು; ಆತನ ಸಲಹೆಯಿಂದಲೇ ಈ ಕೊಲೆಯಾಗಿರುತ್ತದೆ; ಅಂದರೆ ಕೊಲೆಯಾದ ಕಾಲಕ್ಕೆ ಶಂಕರರಾಯನು ಅಲ್ಲಿಯೇ ಇದ್ದಿರಬೇಕು."

"ತಮ್ಮ ಮಾತಿನ ಅರ್ಥವು ನನಗೆ ಚೆನ್ನಾಗಿ ತಿಳಿಯಲಿಲ್ಲ; ಆದರೂ ತಾವು ಈ ವಿಷಯದಲ್ಲಿ ಏನಾದರೂ ಯೋಗ್ಯ ಪ್ರಮಾಣವನ್ನು ಕಂಡುಹಿಡಿದಿರಬಹುದಲ್ಲವೇ?"

"ಪ್ರಮಾಣವಿನ್ನೇನು ಬೇಕು? ಶಂಕರರಾಯನು ಆ ರಾತ್ರಿಯಲ್ಲಿ ಯಾರ ಬಳಿಯಿಂದ ಹೊರಟುಹೋದನೋ ಆಗ ಆತನು ತನ್ನ ಹೆಂಡತಿಯನ್ನು ತಾನು ಕೊಲೆಗೆಯ್ಯುತ್ತೇನೆಂದು ಅವನ ಮುಂದೆ ಹೇಳಿಬಿಟ್ಟನೆಂದು ಒಬ್ಬ ಶ್ರೋತೃವು ಸ್ಪಷ್ಟವಾಗಿ ಹೇಳುತ್ತಿದ್ದು, ಅದನ್ನು ಅವನು ಪೋಲೀಸರೆದುರಿಗೆ ಕೂಡ ತೀವ್ರವೇ ಹೇಳಲಿರುವನು."

ಆಗ ನಾನು ಗದಗುಟ್ಟಿ ನಡುಗಿ: 'ಅವರಾರು?' ಎಂದು ಕೇಳಿದೆನು.

ಭಗವಾನ್‌ದಾಸ:—“ಅವಳೆಂದರೆ ಮೋಹಿನಿಯು. ಶಂಕರ ರಾಯನು ತನ್ನ ಹೆಂಡತಿಯ ಕೊಲೆಯ ಅಪರಾಧವನ್ನು ಈಗ ಯಾವಳ ಮೇಲೆ ಹೊರಿಸುವ ಪ್ರಯತ್ನ ನಡೆಸಿರುವನೋ ಅವಳು. ಆಕೆ ಆ ರಾತ್ರಿ ಶಂಕರರಾಯನ ಮನೆಯ ಕಡೆಗೆ ಆತನ ಹಿಂದಿನಿಂದಲೇ ಮೆಲ್ಲ ಮೆಲ್ಲನೆ ಬಂದಿದ್ದಳೆಂಬದನ್ನು ನೀವು ಇದುವರೆಗೂ ಅರಿತಂತಿಲ್ಲ.”

ನಾನು:—“ಎಂಥ ಆಶ್ಚರ್ಯವಿದು! ನೀವು ಆ ಹೇಸಿ ಮೋಹಿನಿಯ ಮಾತನ್ನು ನಂಬುತ್ತಿರುವಿರಾ?”

“ಯಾರಲ್ಲೂ ಎಂದೂ ಸುಮ್ಮ ಸುಮ್ಮನೆ ನಂಬಿಗೆಯಿಡುವ ಅಭ್ಯಾಸವನ್ನು ನಾನಿಟ್ಟುಕೊಂಡಿಲ್ಲ. ಅವಳು ಪೋಲೀಸರ ಬಳಿಗೆ ಇದುವರೆಗೂ ಹೋಗಿಲ್ಲ; ಮುಂದೆಯೂ ಹೋಗುವ ಇಚ್ಛೆಯುವಳಿಲ್ಲ. ಆದರೂ ಅವಳು ಆ ಸಂಗತಿಗಳನ್ನೆಲ್ಲ ಬಹಿರಂಗಪಡಿಸಿಬಿಟ್ಟರೆ, ಅದರಿಂದ ಶಂಕರ ರಾಯನ ಅಪರಾಧವು ಇನ್ನಿಷ್ಟು ಹೆಚ್ಚಲಾರದೆಂದು ಆದಾರು ಹೇಳಬೇಕು? ಶಂಕರರಾಯನನ್ನು ಬದುಕಿಸಿಕೊಳ್ಳಬೇಕಾಗಿದ್ದರೆ, ಮೊಟ್ಟ ಮೊದಲು ಮೋಹಿನಿಯ ಬಾಯಿಗೆ ಬೆಣೆ ಹಾಕಲೇಬೇಕು.”

ಅದಕ್ಕೆ ನಾನು:—“ಅದು ಏತರಿಂದಾಗುವದು? ಈ ಎಲ್ಲ ಪೋಲೀಸರ ಗೊಂದಲದಲ್ಲಿ ತಾನು ಬೀಳುವುದು ನಿಹಿತವಲ್ಲೆಂದು ಅವಳೇ ನಿರ್ಧರಿಸಿಕೊಂಡು ಸುಮ್ಮನಿರಬೇಕಲ್ಲವೆ, ನಾವು ಅವಳ ಬಾಯನ್ನು ಯಾವ ಉಪಾಯದಿಂದ ಮುಚ್ಚಬಂದೀತು?”

ಭಗವಾನ್‌ದಾಸ:—“ಹಣ-ಹಣ; ಹಣದಿಂದ ಎಲ್ಲವೂ ಸಾಧ್ಯವಾಗುವುದು. ಹಣದಿಂದ ಈ ಕೆಲಸವೂ ಸಾಧ್ಯವಾಗುವುದು. ಇದನ್ನೆಲ್ಲ ತಿಳಿಕೊಳ್ಳಲಿಕ್ಕಂತೇ ನಾನು ನನ್ನ ತಲೆಯ ಕೂದಲುಗಳನ್ನೆಲ್ಲ ಬೆಳ್ಳಗೆ ಮಾಡಿಕೊಂಡಿರುತ್ತೇನೆ. ನೀವು ಈಗ ಒಂದು ಕೆಲಸ ಮಾಡಬೇಕು. ನೀವು ಆವಳಲ್ಲಿಗೆ ಸ್ವಂತ ಹೋಗಿ ಆವಳಿಗೊಮ್ಮೆ ಭೆಟ್ಟಿಯಾಗಿ ಬನ್ನಿರಿ. ಅಲ್ಲಿಗೆ ಹೋದಿರೆಂದರೆ, ಯಾವ ಉಪಾಯದಿಂದ

ಅವಳ ಬಾಯಿ ಮುಚ್ಚಲಾಗುವದೆಂಬದನ್ನು ನೀವೇ ಕಂಡು ಹಿಡಿಯು ವಿರಿ."

ನಾನು ಆಶ್ಚರ್ಯಭರದಿಂದ ಕೇಳಿದೆನು:-"ಭಗವಾನ್‌ದಾಸರೇ, "ನಾನೇ? ನಾನು ಮೋಹಿನಿಯನ್ನು ಕಾಣಬೇಕೇ!"

ಭಗವಾನ್‌ದಾಸನು ಮುಗುಳುನಗೆಯಿಂದ:--"ಅದರ ಹೊರತು ಬೇರೆ ಉಪಾಯವೇನಿದೆ? ಅವಳ ಸ್ವಂತ ಮುಖದಿಂದ ಹೊರಟದ್ದನ್ನು ನಿಮ್ಮ ಕಿವಿಗಳು ಕೇಳಿದಾಗಲೇ ನಿಮ್ಮ ಮನಸ್ಸಿನೊಳಗಿನ ಸಂದೇಹವು ತೊಳೆದು ಹೋದೀತು. ನಾನು ಹೆಚ್ಚಿಗಿನ್ನೇನು ಹೇಳಲಿ? ನನ್ನ ಮನ ಸ್ಸಿನಲ್ಲಿ ಈಗ ಇನ್ನಾವ ಸಂದೇಹವೂ ಉಳಿದಿರುವದಿಲ್ಲ; ನನ್ನ ಅನು ಮಾನಗಳೆಲ್ಲ ದೃಢವಾಗಿ ಪರಿಣಮಿಸಿಬಿಟ್ಟದೆ; ಆದರೆ ಈ ಕಾಲಕ್ಕೆ ನೀವು ಅವಳನ್ನು ಕಾಣದಿದ್ದರೆ ಮಾತ್ರ ನನ್ನ ಕೆಲಸವೆಲ್ಲ ಕೆಟ್ಟು ಹೋಗು ವದು. ಇಂಥ ಸುಸಂಧಿಯಲ್ಲಿ ನೀವು ಹೀಗೆ ಅಡ್ಡ ಹೂಡುವಿರೆಂಬದನ್ನು ನಾನು ಈ ಮೊದಲಾವಾಗಲೂ ಕಲ್ಪಿಸಿರಲಿಲ್ಲ."

ನಾನು ಸಂದೇಹಗಳಿಂದ ತುಂಬಿದ ಹೃದಯದಿಂದಲೂ ಭಾರ ವಾದ ಕಂಠದಿಂದಲೂ:—"ಇಲ್ಲ-ಇಲ್ಲ, ನನ್ನ ಅಡ್ಡಿಯಿಲ್ಲ. ಮೋಹಿನಿ ಯನ್ನು ನಾನೆಲ್ಲಿ ಕಾಣಬೇಕು? ಅವಳ ಮನೆಯಲ್ಲೋ? ಅವಳು ಇಲ್ಲಿ ಗೇಕೆ ಬರುವುದಿಲ್ಲ?"

ವೃದ್ಧ ಭಗವಾನದಾಸನು ಕ್ಷಣ ಕಾಲವೇ ತಲೆ ತಗ್ಗಿಸಿಕೊಂಡು ಏಕಾಗ್ರಚಿತ್ತದಿಂದ ಯೋಚಿಸಿದನು. ತದನಂತರ ಅವನು ನನ್ನನ್ನು ದ್ದೇಶಿಸಿ:— "ನಿಮ್ಮನ್ನು ಕಾಣಲಿಕ್ಕೆ ಅವಳು ಇಲ್ಲಿಗೆ ಬರಲು ಒಡಂಬಡ ಲಾರಳೆಂದು ತೋರುತ್ತದೆ. ಅದಿರಲಿ. ನಾನು ನಿಮ್ಮಗಳ ಭೆಟ್ಟಿಗೊಂದು ಬೇರೆ ಉಪಾಯವನ್ನೇ ಕೈಕೊಳ್ಳುವೆನು. ನಾನು ವಾಲಿಯವರ ತೋ ಪಿನ ಬಳಿಯಲ್ಲೊಂದು ಹೊಸ ತೋಟವನ್ನು ಕೊಂಡುಕೊಂಡಿರುತ್ತೇನೆ. ಆ ತೋಟಕ್ಕೆ ನಾಳೆ ಇಳಿಹೊತ್ತಿನಲ್ಲಿ ನೀವು ಬಂದುದಾದರೆ ಅಲ್ಲಿ

ನಾನು ನಿಮಗೆ ಮೋಹಿನಿಯ ಭೆಟ್ಟಿ ಮಾಡಿಸುವೆನು. ನೀವು ಈ ನನ್ನ ಸಲಹೆಗಾದರೂ ಒಪ್ಪುವಿರಾ? ಆ ಭಾಗದ ಹಲವರು ಆ ನನ್ನ ತೋಟ ವನ್ನು ಬಲ್ಲರು. ಭಗವಾನ್‌ದಾಸರ ಹೊಸ ತೋಟವಾವುದೆಂದು ಕೇಳಿ ದರೆ ಅಲ್ಲಿಯವರಾರು ಬೇಕಾದರೂ ನಿಮಗೆ ಆ ನನ್ನ ತೋಟವನ್ನು ತೋರಿಸುವರು."

ನಾನು:—"ಮೋಹಿನಿಯನ್ನು ನೀವು ನಿಮ್ಮ ಆ ಹೊಸತೋಟಕ್ಕೆ ಬರಮಾಡಿಕೊಳ್ಳುವಿರಾ?"

ಭಗವಾನ್‌ದಾಸ:—"ಆ ಮಾತನ್ನು ಈಗಲೇ ನಾನು ಖಂಡಿತ ವಾಗಿ ಹೇಗೆ ಹೇಳಲಿ? ಆದರೂ ಯಾವ ಪ್ರಯತ್ನವನ್ನು ಮಾಡಿಯಾ ದರೂ ಮೋಹಿನಿಯು ಅಲ್ಲಿಗೆ ಬರುವಂತೆ ಮಾಡುವ ಕೆಲಸವು ನನ್ನನ್ನು ಕೂಡಿತು. ನಾನು ಆ ಬಗ್ಗೆ ಹೆಚ್ಚಾಗಿ ಯತ್ನಿಸುವೆನು. ಯಾವು ದೊಂದು ಕಾರ್ಯ ನೀಗಿಸಲಿಕ್ಕೆಂದು ಕೈ ಹಾಕಿ ಆ ಬಗ್ಗೆ ಹೆಚ್ಚಾಗಿ ಪ್ರಯತ್ನಿಸಿ ನಾನು ಇದುವರೆಗೆಂದೂ ಅಯಶಸ್ವಿಯಾಗಿರುವದಿಲ್ಲ."

ಭಗವಾನ್‌ದಾಸರ ಆ ಹೊಸ ತೋಟಕ್ಕೆ ಮರುದಿನ ಅಪರಾಹ್ಣ ಕಾಲದಲ್ಲಿ ಹೋಗಲಿಕ್ಕೆ ನಾನು ಸಮ್ಮತಿಸಿದ ಬಳಿಕ ಭಗವಾನ್‌ದಾಸರು ತಮ್ಮ ಮನೆಗೆ ಹೊರಟುಹೋದರು.

(೧೩)

ಮರುದಿನದ ಇಳಿಹೊತ್ತಿನಲ್ಲಿ ನಾನು ವಾಲಿಯುವರ ತೋಟದ ಬಳಿಗೆ ಹೋಗಿ ಭಗವಾನ್‌ದಾಸರ ಆ ಹೊಸ ತೋಟದ ಪತ್ತೆ ಹಚ್ಚಿ ದೆನು. ಆಗ ಸೂರ್ಯನು ಮುಳುಗಿ ಕೆಂಬಣ್ಣದ ಛಾಯೆ ಹೊರಬೀಳ ಲಿಕ್ಕೆ ಹೆಚ್ಚು ಅವಕಾಶವಿರಲಿಲ್ಲ. ನಾನು ಆ ತೋಟವನ್ನು ಹೊಕ್ಕು ಅತ್ತಿತ್ತ ನೋಡಲು, ಭಗವಾನ್‌ದಾಸರು ಒಂದು ಉಣ್ಣೆಯ ಕೋಟು ಹಾಕಿಕೊಂಡು ಆ ಉದ್ಯಾನದಲ್ಲಿ ಅತ್ತಿತ್ತ ತಿರುಗಾಡುತ್ತಿದ್ದರು. ಆಗಿನ ಅವರ ಮುಖಭಾವದಿಂದ ಅವರು ಯಾವುದೋ ಒಂದು ಬಗೆಯ

ವಿಶೇಷ ಚಿಂತೆಯಲ್ಲಿ ಮುಳುಗಿದವರಂತೆ ವ್ಯಕ್ತವಾಗುತ್ತಿತ್ತು. ನಾನು ಅವರ ಸಮೀಪಕ್ಕೆ ಹೋದ ಕೂಡಲೆ ಅವರು ನನ್ನ ಕಡೆಗೆ ಒಂದಿಷ್ಟು ಚಕಿತದೃಷ್ಟಿಯಿಂದ ನಿರೀಕ್ಷಿಸಿ—"ಓಹೋ! ಸತ್ಯವಂತರಾಯರೇ, ನೀವು ಬಂದೇ ಬಿಟ್ಟಿರಲ್ಲ? ನಿಮ್ಮನ್ನು ಕರೆತರುವದಕ್ಕೆ ನಾನಿನ್ನು ನಮ್ಮ ಜವಾನನ್ನೇ ಕಳಿಸಬೇಕೆಂದು ಯೋಚಿಸುತ್ತಿದ್ದೆನು."

ಅದಕ್ಕೆ ನಾನು—"ನನ್ನಿಂದ ವಿಶೇಷ ತಡವಾಯಿತೇನು?"

ಭಗವಾನ್‌ದಾಸ—"ಇಲ್ಲ. ನೀವು ಯೋಗ್ಯಕಾಲಕ್ಕೇ ಆಗಮಿಸಿರುತ್ತೀರಿ."

ನಾನು—"ಮೋಹಿನಿಯು ಬಗ್ಗೆ ಏನಾಯಿತು?"

ಭಗವಾನ್‌ದಾಸ—"ಅವಳು ಬಂದು ಎಷ್ಟೋ ಹೊತ್ತಾಗಿದೆ."

ಹೀಗೆಂದು ಹೇಳಿದವನೇ ಭಗವಾನದಾಸನು ಆ ತೋಟದೊಳಗಿನದೊಂದು ಉಪ್ಪರಿಗೆಯ ಮನೆಯ ಕಡೆಗೆ ನಡೆದನು; ಹಾಗು ಅದರಲ್ಲಿಯೇ ಮೋಹಿನಿಯಿರುವಳೆಂದು ಅವನು ಅತ್ತ ಕಡೆಗೆ ಬೊಟ್ಟು ಮಾಡಿ ತೋರಿಸಿ ನನಗೆ ತಿಳಿಸಿದನು.

ಆ ಮೇಲಟ್ಟದ ಮನೆಯು ಆ ಹೊಸತೋಟದ ಮಧ್ಯಭಾಗದಲ್ಲಿದ್ದಿತು. ನಾನು ಭಗವಾನ್‌ದಾಸನೊಡನೆ ಇದುವರೆಗೆ ಎಲ್ಲಿ ನಿಂತುಕೊಂಡು ಮಾತಾಡುತ್ತಿದ್ದೆನೋ ಅಲ್ಲಿಗೆ ಸಮೀಪದಲ್ಲೇ ಅದಿತ್ತು. ಭಗವಾನ್‌ದಾಸರ ಹೊಸ ತೋಟದೊಳಗಿನ ಅವರ ಆ ಮನೆಯು ತೀರ ಹಳೆಯದು. ಅದು ಹೆಚ್ಚಾಗಿ ಜೀರ್ಣವಾಗಿಬಿಟ್ಟಿತ್ತು ಶರಾಘಾತದಿಂದ ಮೈಯೆಲ್ಲ ತೂತುತೂತಾಗಿದ್ದ ಅಭಿಮನ್ಯುವಿನಂತೆ ಆ ಇಟ್ಟಂಗಿಗಳಿಂದ ಕಟ್ಟಿದ್ದ ಮನೆಯ ಹೊರಗೋಡೆಗಳು ಛಿದ್ರಛಿದ್ರವಾಗಿದ್ದವು. ಆ ಮನೆಗೆ ಹೊಂದಿಯೇ ಅಗಣಿತಗಳಾದ ಬಿದಿರು ಮೆಳೆಗಳೂ ಸಣ್ಣಪುಟ್ಟ ಕಂಟಿಗಳೂ ಬೆಳೆದು ಅದೊಳ್ಳೇ ಇಕ್ಕಟ್ಟಿನಲ್ಲಿ ಸಿಕ್ಕಂತಾಗಿದ್ದಿತು. ಆದರೂ ಅದರ ದರ್ಶನೀಯ ಭಾಗವನ್ನು ಇತ್ತೀಚೆಗೆ ಹೊಸ ನಮೂನೆಯ

ಸುಣ್ಣ-ಬಣ್ಣಗಳಿಂದ ಸುಶೋಭಿಗೊಳಿಸುವ ಕಾರ್ಯವು ನಡೆದಿದ್ದಿತು. ಭಗವಾನ್‌ದಾಸನು ನನ್ನನ್ನು ಆ ದರ್ಶನೀಯ ಭಾಗದ ಕಾಮಗಾರಿ ನಡೆವ ಕಡೆಗೇ ಕರೆದೊಯ್ದನು.

ನಾವು ಅಲ್ಲಿಗೆ ತಲುಪಿದಾಗ ಅಲ್ಲಿ ನಾಲ್ಕೂ ಕಡೆಗೆ ಗಾರೆ ಹಾಕುವ, ಸಿಮೆಂಟು ಮಾಡುವ ಕೆಲಸವು ಭರದಿಂದ ನಡೆದಿತ್ತು. ಹೋದ ಕೂಡಲೆ ಎದುರಿಗೊಂದು ಬಹು ದೊಡ್ಡ ಹಾಲ್ (ಪಡಸಾಲೆ) ಇದ್ದು, ಅದರ ಎರಡೂ ಪಕ್ಕಗಳಲ್ಲಿ ಕೋಣೆಗಳಿದ್ದವು. ಕೆಳಗಿನ ಭೂಮಿ ಯಿಂದ ಮನೆಯ ನೆಲವನ್ನು ಮುಟ್ಟಲಿಕ್ಕೆ ನಾಲ್ಕೈದು ಮೆಟ್ಟಿಲು ಗಳನ್ನು ಹತ್ತಿ ಹೋಗಬೇಕಾಗುತ್ತಿತ್ತು. ಆ ಸೋಪಾನಗಳಿಗೆ ಎಡ-ಬಲಗಳಲ್ಲಿ ಎತ್ತರವಾದ ಕಲ್ಲುಗಳನ್ನು ನಿಲ್ಲಿಸಿ ಮಧ್ಯದಲ್ಲಿ ಮೆಟ್ಟಿಲು ಗಳ ಸಾಲು ನಿರ್ಮಿಸಲ್ಪಟ್ಟಿದ್ದಿತು. ಆ ನೂತನ ಸೋಪಾನ ಶ್ರೇಣಿಯು ಆಗತಾನೆ ಗಚ್ಚು-ಸಿಮೆಂಟುಗಳಿಂದ ನಿರ್ಮಿಸಲ್ಪಟ್ಟು ಗಿಲಾಯಿ ಮಾಡ ಲಾಗಿತ್ತು. ಅದರ ಬಳಿಗೆ ತಲುಪಿದ ಕೂಡಲೆ ಭಗವಾನ್‌ದಾಸನು ತನ್ನ ಕಾಲೊಳಗಿನ ಜೋಡುಗಳನ್ನು ಕಳಚಿ, ಅವುಗಳನ್ನು ಎಡಗೈಯಲ್ಲಿ ಹಿಡಿದುಕೊಂಡು ಮೆಟ್ಟಿಲುಗಳನ್ನೇರ ಹತ್ತಿದನು. ಮನೆಯ ಯಜ ಮಾನನೇ ಹಾಗೆ ಮಾಡುತ್ತಿರಲಿಕ್ಕೆ ಅಲ್ಲಿಗೆ ಆಗಂತುಕನಾಗಿ ಹೋಗಿದ್ದ ನಾನೂ ಅದರಂತೆಯೇ ಬರಿಗಾಲಿನಿಂದ ಆ ಹಸೀ ಮೆಟ್ಟಿಲುಗಳನ್ನು ಹತ್ತುತ್ತ ನಡೆದೆನು; ಆದರೆ ನನಗೆ ಅವನಂತೆ ಸಾವಧಾನದಿಂದ ಅವು ಗಳನ್ನು ಹತ್ತಲಿಕ್ಕೆ ಸಾಧಿಸದ ಮೂಲಕ ನನ್ನ ಹೆಜ್ಜೆಗಳು ಆ ಹಸೀ-ನುಣುಪಾದ ಸಿಮೆಂಟಿನ ಮೇಲೆ ಬಹು ಸ್ಪಷ್ಟವಾಗಿ ಮೂಡಿಬಿಟ್ಟವು. ಭಗವಾನ್‌ದಾಸನು ಅವುಗಳನ್ನು ನೋಡಿದರೂ ನೋಡದವನಂತೆ ಮುಂದೆ ಮುಂದೆ ಸಾಗಿದನು; ಆದರೆ ನಾನು ಮಾತ್ರ ನನ್ನ ಮನಸ್ಸಿನಲ್ಲಿ ಆ ಬಗ್ಗೆ ಕೊಂಚ ಅಂಜುತ್ತಲೇ ಸಾಗಿದ್ದೆನು.

( ೧೪ )

ನಾವು ಅಲ್ಲಿಯ ಆ ವಿಶಾಲವಾದ ಪಡಸಾಲೆಗೆ ತಲುಪಿದ ಕೂಡಲೆ ಭಗವಾನ್‌ದಾಸನು ಸಮೀಪದಲ್ಲಿದ್ದ ಕುರ್ಚಿಗಳಲ್ಲಿಯ ಒಂದು ಕುರ್ಚಿಯನ್ನು ಮುಂದಕ್ಕೆ ಎಳೆದು ನನಗೆ ಅದರ ಮೇಲೆ ಕೂರ ಹೇಳಿದನು. ನಾನು ಅದರ ಮೇಲೆ ಕುಳಿತ ಬಳಿಕ ಭಗವಾನ್‌ದಾಸರು ನನ್ನನ್ನು ಕುರಿತು:—'ಸತ್ಯವಂತರಾಯರೇ, ನಾನು ನಿಮಗೆ ಇಲ್ಲಿಗೆ ಬರುವ ಬಗ್ಗೆ ಸುಮ್ಮನೆ ತೊಂದರೆ ಕೊಟ್ಟಂತಾಯಿತೆಂದು ತೋರುತ್ತದೆ; ಯಾಕಂದರೆ ನಾನು ಯಾವ ಉದ್ದಿಶ್ಯಕ್ಕಾಗಿ ನಿಮ್ಮನ್ನಿಲ್ಲಿಗೆ ಬರ ಹೇಳಿದ್ದೆನೋ ಅದು ಆಗುವ ಸಂಭವವಿಲ್ಲ. ಮೋಹಿನಿಯು ಅತ್ಯಂತ ಕ್ರುದ್ಧಳಾಗಿರುತ್ತಾಳೆ. ಅವಳು ನನ್ನ ಯಾವ ಹಿತೋಕ್ತಿಗಳನ್ನೂ ಕೇಳಿಕೊಳ್ಳಲೊಲ್ಲಳು. ಶಂಕರರಾಯನ ವಿಷಯಕ್ಕೆ ಅವಳು ತೀರ ಸಂತಪ್ತಳಾಗಿ ಬಿಟ್ಟಿದ್ದಾಳೆ. ತನ್ನ ಅಧಃಪತನಕ್ಕೆ-ಶೀಲಭ್ರಷ್ಟತೆಗೆ-ಅವನೇ ಮೂಲ ಕಾರಣನು. ಶಂಕರರಾಯನು ತನಗೆ ಮೊದಲು ಕೊಟ್ಟ ವಚನವನ್ನು ಭಂಗಗೊಳಿಸಿ, ತನ್ನ ಅಭಿಪ್ರಾಯಕ್ಕೆ ವಿರುದ್ಧವಾಗಿ ಆ ಲಗ್ನವಾಗಿದ್ದನು. ಅವನು ತನ್ನೊಡನೆ ಘೋರತರವಾದ ವಂಚನೆಯನ್ನಾಚರಿಸಿರುವನು. ಈ ಎಲ್ಲ ಕಾರಣಗಳ ಸಲುವಾಗಿ ಶಂಕರರಾಯನ ಮೇಲೆ ಮೋಹಿನಿಗೆ ಸಹಿಸಲಾರದಷ್ಟು ಸಿಟ್ಟು. ತನ್ನನ್ನು ಆ ಶಂಕರರಾಯನೊಡನೆ ಗಲ್ಲಿಗೇರಿಸಿಬಿಟ್ಟರೂ ಅವಳಿಗೆ ಸಮ್ಮತವೇ; ಆದರೆ ಅವಳು ಅಂದು ತಾನು ಶಂಕರರಾಯನ ಮುಖದಿಂದ ಹೊರಟದ್ದ ಮಾತುಗಳನ್ನು ಬಹಿರಂಗಪಡಿಸದೆ-ಪೋಲೀಸರಿಗೆ ತಿಳಿಸದೆ-ಬಿಡಳು. ನೀವು ಅವಳ ಆ ಸಿಟ್ಟನ್ನು ಯಾವ ಬಗೆಯಿಂದಲೂ ಶಾಂತಗೊಳಿಸಲಾರಿರೆಂದು ನಾನು ನಂಬುತ್ತೇನೆ. ಆದರೂ ನೀವು ಅವಳನ್ನು ಕಂಡು ಪ್ರಯತ್ನಿಸಲಿಕ್ಕೆ ಆತಂಕವೇನು? ನೀವು ಇಲ್ಲಿಯೇ ಕುಳಿತಿರ್ರಿ. ನಾನು ಅವಳನ್ನು ಇಲ್ಲಿಗೇ ಕಳಿಸಿಕೊಡುತ್ತೇನೆ.'' ಎಂದು ಅಂದವನೇ ಆ ಮೇಲಟ್ಟವನ್ನು ಹತ್ತಿ ಹೋದನು.

ಅಲ್ಪಾವಧಿಯಲ್ಲೇ ಒಬ್ಬ ತರುಣಿಯು ಆ ಅಟ್ಟದಿಂದಿಳಿದು ಬಂದಳು. ಅವಳನ್ನು ನಾನು ಈ ಮೊದಲೆಂದೂ ನೋಡಿರಲಿಲ್ಲ; ಆದರೆ ಈ ಮೊದಲು ಭಗವಾನ್‌ದಾಸನ ವರ್ಣನೆಯ ಮೂಲಕ ನನ್ನಲ್ಲಿ ಮೋಹಿನಿಯ ರೂಪ ಚಿತ್ರವು ಮೂಡಿದ್ದಿತೋ, ಈಗ ಆ ಮೋಹಿನಿಯನ್ನು ನಾನು ಪ್ರತ್ಯಕ್ಷ ನೋಡಿದ ಬಳಿಕ ಹಾಗು ಅವಳ ಒನಪು-ಒಯ್ಯಾರಗಳಿಂದಲೂ ಗರ್ವದಿಂದ ಚೆಲ್ಲುತ್ತಿರುವ ಹೆಜ್ಜೆಗಳಿಂದಲೂ ಅದು ಯಥಾರ್ಥವೇ ಎಂದು ನನ್ನ ಅನುಭವಕ್ಕೆ ಬಂದಿತು. ಬಳಿಕ ಅವಳ ಮಾತು-ಕತೆಗಳ ಮೇಲಿಂದ ಕಂಡು ಬಂದುದೇನಂದರೆ, ಶಂಕರರಾಯನು ಅವಳೊಡನೆ ಅತ್ಯಂತ ಅಸದ್ವ್ಯವಹಾರಗೆಯ್ದುದ್ದರಿಂದ ಅಂದಿನಿಂದ ಅವಳು ಅವನನ್ನು ಹೆಚ್ಚಾಗಿ ತಿರಸ್ಕರಿಸುತ್ತಿದ್ದು, ಆ ರಾಕ್ಷಸತುಲ್ಯ ತಿರಸ್ಕಾರಕ್ಕಾಗಿ ಅವಳು ಶಂಕರರಾಯನ ಮರಣವನ್ನೇ ಬಯಸುತ್ತಿರುವಂತೆ ತೋರಿತು. ಇಷ್ಟೇ ಅಲ್ಲ, ನಾನು ಶಂಕರರಾಯನ ಪಕ್ಷ ವಹಿಸಿ ಒಂದೆರಡು ಶಬ್ದಗಳನ್ನು ನುಡಿಯಲು, ಅವಳು ನನ್ನನ್ನೂ ತಿರಸ್ಕೃತ ದೃಷ್ಟಿಯಿಂದ ನೋಡತೊಡಗಿದಳು. ನಾನು ಶಂಕರರಾಯನ ಪಕ್ಷವನ್ನು ಇನ್ನಿಷ್ಟು ಎತ್ತಿ ಹಿಡಿದಿದ್ದರೆ ಆದರಿಂದ ಅವಳ ಮುಖದಲ್ಲಿ ತಿರಸ್ಕಾರದ ಲಕ್ಷಣವು ಅತಿ ತೀವ್ರವಾಗಿ ಹೆಚ್ಚದೆ ಇರುತ್ತಿರಲಿಲ್ಲ ಅದರಿಂದಲೇ ನಾನು ತಿಳಿದೆನೇನಂದರೆ, ಶಂಕರರಾಯನು ಆ ನಾಗಿಣಿಯ ಬಾಲವನ್ನು ಬೇಕಂತ ತುಳಿದು ಅವಳನ್ನು ಅತ್ಯಂತ ರೇಗಿಗೆಬ್ಬಿಸಿದ್ದರಿಂದ ಆತನ ವಿಷಯದ ಅವಳ ಸಿಟ್ಟು ಮೇರೆದಪ್ಪಿದ್ದು, ಅದು ಯಾತರಿಂದಲೂ ಶಮನವಾಗದಂತಾಗಿಬಿಟ್ಟಿದೆ; ಮತ್ತು ಅವಳು ಅಷ್ಟು ಸಿಟ್ಟಾಗುವುದಾದರೂ ಸ್ವಾಭಾವಿಕವೇ ಆಗಿದೆ. ಅದರಿಂದ ಅವಳಿನ್ನು ಏತರಿಂದಲೂ ವಶಳಾಗುವ ಸಂಭವವಿಲ್ಲ. ಅವಳೀಗ ನನ್ನ ಪ್ರಯತ್ನಗಳಿಗೆ ನಿಲುಕದಂತೆ ಬಹು ದೂರ ಹೋಗಿ ನಿಂತುಕೊಂಡಿರುತ್ತಾಳೆ. ಅವಳು ಅಸ್ಪೃಶ್ಯಳೂ, ಪತಿತಳೂ, ವೇಶ್ಯೆಯೂ ಆಗಿದ್ದರೂ ಕೂಡ ನಾನು ಅವಳ ಎರಡೂ ಕೈಗಳನ್ನು ಹಿಡಿದು ಹತ್ತಾರ

ಕುಳ್ಳಿರಿಸಿಕೊಂಡು ಹಲವು ಬಗೆಯಾಗಿ ಹೇಳಿದೆನು; ಹಲವು ರೀತಿಯಿಂದ ಪ್ರಾರ್ಥಿಸಿದೆನು; ಹಲವು ಪ್ರಕಾರಗಳಿಂದ ಪ್ರಯತ್ನಿಸಿದೆನು; ಆದರೆ ಆಶ್ಚರ್ಯದ ಸಂಗತಿಯೆಂದರೆ, ನನ್ನ ಯಾವ ಪ್ರಯತ್ನಗಳೂ ಅವಳ ಅಭಿಪ್ರಾಯವನ್ನು ಒಂದು ಎಳ್ಳುಕಾಳಷ್ಟು ಕೂಡ ಪರಿವರ್ತನಗೊಳಿಸ ಲಿಕ್ಕೆ ಶಕ್ತಗಳಾಗಲಿಲ್ಲ. ಅವಳು ನನ್ನ ಕೈಗಳಿಂದ ಕೊಸರಿಕೊಂಡು ದೂರ ಸರಿದು ನಿಂತಳು; ಹಾಗು ಬಹು ತೀವ್ರಗತಿಯಿಂದ ನನ್ನ ದೃಷ್ಟಿ ಸೀಮೆಯನ್ನು ದಾಟಿ ಹೊರಟೇ ಹೋದಳು. ಅವಳ ಆವೆಲ್ಲ ಲಕ್ಷಣ ಗಳಿಂದ ಆಗಾಮಿ ಸಂಕಟವು ಸಾರಾಗದಂಥದಿದೆಂದು ನನಗನಿಸಿತು.

( ೧೫ )

ಮೋಹಿನಿಯು ಹಾಗೆ ಕೋಲ್ಮಿಂಚಿನಂತೆ ಹೊರಟು ಹೋದ ಬಳಿಕ ಭಗವಾನ್‌ದಾಸನು ಕೇವಲ ಸಾಗರದಂತಹ ಶಾಂತಮುದ್ರೆ ಯಿಂದ ಬಂದು ನನ್ನೆದುರಿಗೆ ಕುಳಿತುಕೊಂಡನು. ಕೆಲ ಕ್ಷಣ ಸುಮ್ಮನೆ ಕುಳಿತು, ಬಳಿಕ ಆತನು ನನ್ನನ್ನು ಕುರಿತು:—'ಸತ್ಯವಂತರಾಯರೇ, ನೀವು ಈಗಲೂ ಶಂಕರರಾಯನನ್ನು ನಿರ್ದೋಷಿಯೆಂದೇ ನಂಬುವಿರಾ?' ಎಂದು ಕೇಳಿ, ನನ್ನ ಮೋರೆಯು ಕಡೆಗೆ ಒಳ್ಳೇ ತೀಕ್ಷ್ಣದೃಷ್ಟಿಯಿಂದ ನಿರೀಕ್ಷಿಸಹತ್ತಿದನು.

ಆತನ ಮಾತಿನ ಒಲವಿನಿಂದಲೂ ದೃಷ್ಟಿಕ್ಷೇಪದಿಂದಲೂ ಅವನು ಮರೆನೆ ನಿಂತುಕೊಂಡು ನನ್ನ-ಮೋಹಿನಿಯ ಸಂಭಾಷಣವನ್ನು ಕೇಳಿರು ವಂತೆಯೂ ಆಗಿನ ಕಾಲದ ನಮ್ಮಗಳ ಹಾವ-ಭಾವಗಳನ್ನು ನೋಡಿರು ವಂತೆಯೂ ನನಗನಿಸಿತು. ಆಗ ನಾನು ಹೇಳಿದೆನೇನಂದರೆ:— "ಆಹುದು, ಶಂಕರರಾಯನು ನಿರಪರಾಧಿಯೆಂದು ಈಗಲೂ ನನಗೆ ಅನಿಸುತ್ತದೆ. ಶಂಕರರಾಯನು ನಿಶ್ಚಯವಾಗಿಯೂ ನಿರ್ದೋ ಷಿಯು. ಆ ವಿಷಯದ ನನ್ನ ನಂಬಿಗೆಯು ಅಚಲವಾಗಿದೆ. ನಿಮಗೆ ಹೇಗೆನಿಸುತ್ತದೆ? ಮೋಹಿನಿಯ ಅಂಬೋಣವೆಲ್ಲ ಕೇವಲ ಸುಳ್ಳು. ಆದ

ರಿಂದ ಅದು ಕೇವಲ—"

ನನ್ನ ಬಾಯೊಳಗಿಂದ ಹೊರಟ ಆ ಕೊನೆಯ ಶಬ್ದಗಳನ್ನೇ ಎತ್ತಿ ಹಿಡಿದು ಭಗವಾನ್‌ದಾಸರು:-"ಅದರಲ್ಲಿ ಕೊಂಚವೂ ನಂಬತಕ್ಕ ವಿಷಯವಿರುವದಿಲ್ಲವೇ?,ಒಳ್ಳೇದು. ನಾನು ಅದನ್ನು ಇನ್ನೂ ಒಮ್ಮೆ ಚೆನ್ನಾಗಿ ಪರೀಕ್ಷಿಸಿ ನೋಡುತ್ತೇನೆ. ಅದು ಯೋಗ್ಯವೂ ವಿಶ್ವಾಸಕ್ಕೆ ಪಾತ್ರವೂ ಎಂದೆನಿಸಿವರೆ ನಾನು ಈ ಕೇಸನ್ನು ಇತ್ಯರ್ಥಗೊಳಿಸುವ ಪ್ರಯತ್ನಕ್ಕೆ ಮುಂದರಿಯುವೆನು; ಇಲ್ಲವಾದರೆ ಇಲ್ಲಿಗೇ ಬಿಟ್ಟುಬಿಡುವೆನು. ನೀವು ಮತ್ತೊಬ್ಬನಾರಾದರೂ ನನಗಿಂತ ಬಲ್ಲ ಪತ್ತೆದಾರನನ್ನು ಈ ಕೊಲೆಯ ಶೋಧಕ್ಕೆ ಉದ್ಯುಕ್ತನನ್ನಾಗ ಮಾಡಬಹುದು. ಇನ್ನು ಆ ಮಾತಿರಲಿ. ನಾಳೆಯ ದಿವಸ ನಾನು ನಿಮ್ಮ ಮನೆಗೆ ಯಾವ ಕಾಲಕ್ಕೆ ಬಂದರೆ ನಿಮ್ಮ ಭೆಟ್ಟಿಯು ನನಗೆ ಖಂಡಿತವಾಗಿ ಆದೀತೆಂಬದನ್ನಷ್ಟು ಈಗಲೆ ಹೇಳಿರಿ ನೋಡೋಣ."

ನಾನು:-"ನೀವು ಯಾವಾಗ ಬರುವಿರೆಂಬದನ್ನು ನೀವೇ ಹೇಳಿರಿ; ಅಂದರೆ ಆ ಕಾಲಕ್ಕೆ ನಾನು ನಿಮ್ಮ ಭೆಟ್ಟಿಗಾಗಿ ನನ್ನ ಮನೆಯಲ್ಲೇ ಕಾದಿರುತ್ತೇನೆ."

ಭಗವಾನ್‌ದಾಸ:—'ನಾಳೆ ಮಧ್ಯಾಹ್ನ ನಾಲ್ಕರ ನಂತರ ಬರಲಿರುವೆನು."

ನಾನು:—"ಹಾಗೆಯೇ ಆಗಲಿ."

(೧೬)

ಬಳಿಕ ನಾನು ಭಗವಾನ್‌ದಾಸರ ಆ ಹೊಸ ತೋಟದಿಂದ ಹೊರಬಿದ್ದು ವಾಲಿಯುವರ ತೋಟಿನ ಬಳಿ ನಡೆದಿರಲು, ಯಾವನೋ ಒಬ್ಬನು ಹಿಂದಿನಿಂದ ನನ್ನ ಸಮೀಪದಲ್ಲೇ ಆ ಮುಕ್ತಾಂಜೆಯ ಕತ್ತಲಲ್ಲಿ ಪಕ್ಕದ ಗಿಡ-ಮರಗಳ ಕವಿಸಿನಲಲ್ಲಿ ಅಡಗುತ್ತ ಅಡಗುತ್ತ ನನ್ನನ್ನನುಸರಿಸಿ ಬರುತ್ತಿರುವ ಹಾಗೆ ಭಾಸವಾಯಿತು. ನಾನು ಆ ವ್ಯಕ್ತಿಯ

ಕಡೆಗೆ ಮತ್ತೆ ಹೊರಳಿ ನೋಡದೆ, ಜನಶೂನ್ಯವಾದ ಆ ಮುಚ್ಚಂಜೆಯು ಸಮಯದಲ್ಲಿ ಆ ತೋಪಿನ ವಿಶಾಲವಾದ ವೃಕ್ಷಗಳ ಕವಿನೆಳಲೊಳಗಿನ ದಾರಿ ಹಿಡಿದು ಲಗುಬಗನೆ ನನ್ನ ಮನೆಯಕಡೆಗೆ ಸಾಗಿದೆನು.

ಕೊಂಚ ದಾರಿ ಕ್ರಮಿಸಿದ ಬಳಿಕ ನಾನು ಮತ್ತೊಮ್ಮೆ ಹಿಂದಿರುಗಿ ನೋಡಿದೆನು; ಹಾಗು ಹಾಗೆ ನೋಡಿದಾಗ ನನ್ನನ್ನನುಸರಿಸಿ ಬರುತ್ತಿದ್ದ ಆ ವ್ಯಕ್ತಿಯು ತುಸ ದೂರದಲ್ಲೇ ಬರುತ್ತಿರುವಂತೆ ಕಾಣಿಸಿತು. ಈಗ ಮಾತ್ರ ನನ್ನ ಮನಸ್ಸಿನಲ್ಲೊಂದಿಷ್ಟು ಸಂದೇಹವು ಪ್ರಾಪ್ತವಾಯಿತು; ಆದರೂ ಆಗ ನಾನು ಭಾವಿಸಿಕೊಂಡೆನೇನಂದರೆ, ಆ ವ್ಯಕ್ತಿಯು ಹೋಗುವ ದಾರಿಯಾದರೂ ಇದೇ ಅದೇಕಾಗಿರಕೂಡದೆಂದು. ಆ ಬಳಿಕ ಯಾವಾಗ ನಾನು ನನ್ನ ಮನೆಯ ಎದುರಿಗೆ ಹೋದೆನೋ, ಆಗಲೂ ಆ ವ್ಯಕ್ತಿಯನ್ನು ಕಂಡೆನು; ಆದರೆ ಈಗ ಅವನು ನನ್ನ ಹಿಂದೆಯೇ ಇರದೆ. ಅವನು ನನ್ನ ಮನೆಯ ಮುಂದಿನಿಂದ ವೇಗವಾಗಿ ಹೋಗಿ, ಆಚೆಗಿನ ನಾಲ್ಕಾರು ಮನೆಗಳ ಹತ್ತಿರದ ಒಂದು ಸಂದಿಯ ಓಣಿಯ ಬಾಯಿಗೆ ನಿಂತುಕೊಂಡನು; ಹಾಗು ನನ್ನನ್ನೂ ನನ್ನ ಮನೆಯನ್ನೂ ಮತ್ತೆ ಮತ್ತೆ ದಿಟ್ಟಿಸಿ ನೋಡಹತ್ತಿದನು. ಆತನ ಆ ಎಲ್ಲ ಲಕ್ಷಣಗಳಿಂದ ಅವನು ನನ್ನನ್ನೇ ಅನುಸರಿಸಿ ಬಂದಿರುವನೆಂದು ನಾನು ನಿಷ್ಕರ್ಷಿಸಿಕೊಂಡೆನು. ಹೀಗೆ ಆತನು ನನ್ನ ಹಿಂದೆಯೇ ಬರಲಿಕ್ಕೆ ಅವನ ಉದ್ದೇಶವೇನಾದರೂ ಇರಲೇಬೇಕು. ಆ ಕಾರಿರುಳಲ್ಲಿ ಕಣ್ಣು ಕೆಕ್ಕರಿಸಿ ಕೆಕ್ಕರಿಸಿ ನೋಡಿದರೂ ಅಷ್ಟು ದೂರದಲ್ಲಿದ್ದ ಆತನ ಆಕೃತಿಯಿಂದಲೂ ವೇಷ-ಭೂಷಣಗಳಿಂದಲೂ ಅವನು ಸಭ್ಯಗೃಹಸ್ಥನೆಂದು ತೋರಲಿಲ್ಲ. ಆತನು ಸಭ್ಯಗೃಹಸ್ಥನೇ ಇರಲಿ, ಇನ್ನಾವನೇ ಇರಲಿ; ಆದರೆ ಆತನಾರು? ಯಾವ ಉದ್ದಿಶ್ಯದಿಂದ ಅವನು ನನ್ನನ್ನನುಸರಿಸಿ ಬಂದಿರುವನು? ಎಂಬುದಾವುದೂ ನನಗಾಗ ತಿಳಿಯಲೇ ಇಲ್ಲ.

ಆ ಅನುಮಾನದಿಂದ ನನ್ನ ಮನಸ್ಸು ಕೊಂಚ ಚಂಚಲವೇ

ಆಯಿತೆನ್ನಿ. ಆಗ ನಾನು ನನ್ನ ಮನಸ್ಸಿನಲ್ಲಿ ಆಲೋಚಿಸಿದೆನೇನಂದರೆ, ಈಗ ನಾನು ನನ್ನ ಸ್ವಂತದ ಮನೆಯಲ್ಲೇ ಕೂಡ್ರದೆ ಬೇರೆ ಬೇರೆಯವರ ಮನೆಗೆ ಹೋಗಿ ಬಂದು ಕೆಲ ಕಾಲವನ್ನು ಹರಣಮಾಡಬೇಕು; ಅಂದರೆ ಅದರಿಂದ ಈ ವ್ಯಕ್ತಿಯನ್ನು ದೂರೀಕರಿಸಬಂದೀತು. ಇವೇ ಮುಂತಾದ ಹಲವು ದುರ್ಭಾವನೆಗಳಿಂದ ನನ್ನ ಮನಸ್ಸು ಅತ್ಯಂತ ಪೀಡಿತವಾಗಿತ್ತು. ಆದರಿಂದ ನನ್ನ ಮನಸ್ಸಿನ ಯಾವ ಇಚ್ಛೆಗಳೂ ಫಲಿಸದೆ "ಉದ್ಭದ್ಯಂತೇ ವಿಲೀಯಂತೇ ದರಿದ್ರಾಣಾಮ್ ಮನೋರಥಃ" ಎಂಬಂತಾಯಿತು. ನಾನು ಲಗುಬಗೆಯಿಂದ ನನ್ನ ಮನೆಯನ್ನು ಹೊಕ್ಕೆನು. ಅಲ್ಲಿಗೆ ಹೋದ ಕೆಲ ಕ್ಷಣಗಳಲ್ಲೇ ನನ್ನ ಮನಸ್ಸಿನೊಳಗಿನ ಆ ಎಲ್ಲ ದುಗುಡು ಮರೆತೇ ಹೋಯಿತು.

(೧೭)

ಮರುದಿನ ಮಧ್ಯಾಹ್ನದ ನಾಲ್ಕು ಗಂಟೆಗೆ ಸರಿಯಾಗಿ ಭಗವಾನ್‌ದಾಸನು ನಮ್ಮ ಮನೆಯ ಎದುರಿಗೆ ಬಂದು ನಿಂತುಕೊಂಡನು. ಅಂದು ಆತನು ಹರ್ಷಪ್ರಫುಲ್ಲಿತನಾಗಿದ್ದನು. ಅವನ ವದನಮಂಡಲವು ಸುಹಾಸ್ಯಪೂರ್ಣವಾಗಿತ್ತು. ಆತನನ್ನು ಕಂಡ ಕೂಡಲೆ ಇವನು ಈ ದಿನ ಹಲವು ಉಪಯುಕ್ತ ಸಂಗತಿಗಳನ್ನು ಸಂಗ್ರಹಿಸಿಕೊಂಡು ಬಂದಿರುವನೆಂದು ತೋರುತ್ತಿತ್ತು. ಅವನು ನನ್ನನ್ನು ಬಲಪೂರ್ವಕವಾಗಿ ಜಗ್ಗಿಕೊಂಡು ಒಂದು ಖುರ್ಚಿಯ ಮೇಲೆ ಕೂಡ್ರಿಸಿ:-"ಮಹಾನುಭಾವರೇ, ಕುಳಿತುಕೊಳ್ಳಿರಿ; ಗಾಬರಿಪಡಬೇಡಿರಿ" ಎಂದು ಆಗ್ರಹಪಡುತ್ತಿರುವವನ್ನು ನೋಡಿದರೆ, ಆತನು ನನ್ನ ಮನೆಗೆ ಬಂದಿರದೆ, ನಾನೇ ಅವನ ಮನೆಗೆ ಹೋಗಿರುವೆನೋ ಏನೋ ಎಂಬಂತಾಯಿತು!

ಅದು ಏನೇ ಆದರೂ ನಾನು ದೀರ್ಘಸ್ವರದಿಂದ:—"ಭಗವಾನ್‌ದಾಸರೇ, ನಿಮ್ಮ ಈಗಿನ ಹುರುಪನ್ನೂ ಆವೇಶವನ್ನೂ ನೋಡಿದರೆ ನೀವು ಈ ಕೊಲೆಯ ಪತ್ತೆಯನ್ನು ಸಂಪೂರ್ಣವಾಗಿ ಹಚ್ಚಿರು

ತ್ತೀರೆಂದು ಊಹಿಸಬಹುದಾಗಿದೆ.”

ಅದಕ್ಕೆ ಭಗವಾನ್‌ದಾಸನು:“ಅಹುದು. ನಾನು ಸಾಹಸಪೂರ್ವಕವಾಗಿ ಹೇಳುವದೇನಂದರೆ- ಈ ಕೇಸಿನ ಪತ್ತೆ ಹಚ್ಚಿ ಇದನ್ನು ನಾನೀಗ ನನ್ನ ಕೈಯಲ್ಲಿ ಹಿಡಿದಂತಾಗಿ ಬಿಟ್ಟಿದೆ. ಈ ಕೊಲೆಯ ಸಂಗತಿಯು ಬಹು ಆಶ್ಚರ್ಯಕರವಾದುದು! ನನ್ನಂತಹ ವಿಚಕ್ಷಣ ಪತ್ತೆದಾರನ ಕಡೆಗೆ ಎಷ್ಟು ಕೇಸುಗಳು ಬಂದಿದ್ದವೋ ಇದೊಂದನ್ನುಳಿದರೆ ಇಂತಹ ಅತ್ಯಾಶ್ಚರ್ಯಕರವಾದ ಯಾವ ಬೇರೆ ಕೇಸೂ ಬಂದಿಲ್ಲ. ನಾನು ಇಷ್ಟು ವಯಾತೀತನಾಗಿದ್ದರೂ, ಇಷ್ಟು ವಿಚಕ್ಷಣನಾಗಿದ್ದರೂ, ಎಂಥ ಮನ್ನಣೆ ಪಡೆದವನಾಗಿದ್ದರೂ ಇಂದು ಅವೆಲ್ಲ ವ್ಯರ್ಥವಾಗುವ ಪ್ರಸಂಗವೊದಗಿತ್ತು. ನಿನ್ನೆ ಸಾಯಂಕಾಲದಲ್ಲಿ ಮೋಹಿನಿ ಹಾಗು ನಿಮ್ಮಲ್ಲಿ ನಡೆದ ಸಂಭಾಷಣದಿಂದ ಈ ಕೊಲೆಯ ಪತ್ತೆಯು ಪರಿಪೂರ್ಣವಾಗಿಬಿಟ್ಟಿತು; ಇನ್ನು ಆ ವಿಷಯದಲ್ಲಿ ಯಾವ ಸಂದೇಹವೂ ಬಾಕಿ ಉಳಿದಿರುವದಿಲ್ಲ. ಆ ಮೋಹಿನಿ ತರುಣಿಯು ಬಲು ಚಾಣಾಕ್ಷಳು; ಬಹು ಚತುರಳು. ಅವಳ ಆಗಿನ ಮುರಕವನ್ನು ಕಂಡರೆ ಎಂಥವನೂ ಮರುಳಾಗುವನು! ಅವಳನ್ನು ಯಾವುದೊಂದು ಸಿನೇಮಾ ಕಂಪನಿಗೆ ಕಳಿಸಿದರೆ, ಅವಳು ಅಲ್ಲಿ ತೀವ್ರವೇ ಪ್ರಖ್ಯಾತ ನಟಿಯಾಗದಿರಳು.”

ಭಗವಾನ್‌ದಾಸನ ಆ ಮಾತುಗಳನ್ನು ಕೇಳಿ ಪರಮ ಚಕಿತನಾದ ನಾನು ಅವನನ್ನು ಕುರಿತು:—“ಭಗವಾನ್‌ದಾಸರೇ, ಇದೇನು? ನೀವು ನಿನ್ನೆಯ ದಿವಸ ಹೇಳಿದ್ದಿರಲ್ಲ; ಆ—”

ಭಗವಾನ್‌ದಾಸನು ನನ್ನನ್ನು ಹೆಚ್ಚು ಮಾತಾಡಗೊಡದೆ “ಇದೇನು ಸಂಕಟ? ನಿನ್ನಿನ ಆ ಮಾತು ಇಂದೇಕೆ? ಬಿಟ್ಟುಬಿಡಿರಿ. ನಾನು ಏನು ಅನ್ನುವೆನೋ ಅದನ್ನು ಮನಸ್ಸುಗೊಟ್ಟು ಕೇಳಿಸಿಕೊಳ್ಳಿರಿ. ಇತ್ತೀಚಿಗಿನ ತರುಣ ಪೀಳಿಗೆಯವರ ರಕ್ತವು ಕುದಿಯುತ್ತಿದ್ದರೂ ಅವರಲ್ಲಿ ಧೈರ್ಯ ಮಾತ್ರ ತೀರ ಕಡಿಮೆಯೇ ಸರಿ. ನಿನ್ನೆ ಅಲ್ಲಿ ನಡೆದ ಸಮಸ್ತ

ಸಂಗತಿಗಳನ್ನು ನಾನು ನಿಮಗೆ ವಿವರಿಸಿ ಹೇಳಿದ್ದಾದರೆ, ಅವುಗಳನ್ನು ಕೇಳಿ ನೀವು ನನ್ನನ್ನು ಕೆಲಸಕ್ಕೆ ಬಾರದ ಪ್ರಾಣಿಯೆಂದರೂ ಅನ್ನ ಬಹುದು; ಆದರೆ ಆ ಮೋಹಿನಿ ತರುಣಿಯು ಬಹು ಚಾಲಕಳು, ಅವಳ ಚಾಲಾಕಿಯನ್ನು ಎಷ್ಟು ಹೊಗಳಿದರೂ ಅಲ್ಪವೇ ಸರಿ.''

ಆಗ ನಾನು ಧೈರ್ಯಹೀನನಾಗಿ ಆತನನ್ನು ಕುರಿತು:—''ಭಗವಾನ್‌ದಾಸರೇ, ನೀವು ಮೋಹಿನಿಯು ಬಳಿಯಿಂದ ಈ ಕೊಲೆಯ ಪತ್ತೆಯ ಯಾವುದೊಂದು ರಹಸ್ಯದ ಎಳೆಯನ್ನು ಕಂಡುಕೊಂಡಿರುತ್ತೀರೇನು?'' ಎಂದು ಕೇಳಲು,

ಭಗವಾನ್‌ದಾಸನು ಮುಗುಳು ನಗೆ ನಗುತ್ತಲೇ:-''ಸತ್ಯವಂತರಾಯರೇ, ನನ್ನ ಅಂಬೋಣವನ್ನಷ್ಟು ಕೇಳಿಕೊಳ್ಳಿರಿ. ನಿಮ್ಮ ತರ್ಕವೇ ನಿಜವು. ಈ ಹತ್ಯಾಕಾಂಡದಲ್ಲಿ ಶಂಕರರಾಯನದು ಕೊಂಚವೂ ಅಪರಾಧವಿಲ್ಲ. ಮತ್ತೊಂದು ಸಂಗತಿಯೇನೆಂಬದನ್ನು ಬಲ್ಲಿರಾ? ಆ ಕೊಲೆಗಡಕನು ಶಂಕರರಾಯನನ್ನು ಕೊಲ್ಲ ಹೋಗಿ, ಭ್ರಮದಿಂದ ಸಾವಿತ್ರಿಯನ್ನೇ ಕೊಂದುಬಿಟ್ಟಿರುತ್ತಾನೆ.''

ಆಗ ನನ್ನ ತಲೆಯೊಳಗಿಂದ ವಿದ್ಯುಚ್ಛಕ್ತಿನದೊಂದು ಬಹು ತೀವ್ರವಾದ ಆವೇಗವು ಹೊರಟು ಸಂಚಲಿತವಾಗುತ್ತಿರುವ ಹಾಗೆ ನನಗೆ ಭಾಸವಾಯಿತು. ಆದರಿಂದ ನಾನು ಅತ್ಯಂತ ವಿಸ್ಮಯಗೊಂಡವನಾಗಿ ಬಿಟ್ಟೆನು.

(೧೮)

ನಂತರ ಭಗವಾನ್‌ದಾಸನು ಹೇಳತೊಡಗಿದನು:—'ರಾಯರೇ, ಸ್ವಸ್ಥವಾಗಿ ಕುಳಿತು ಕೇಳಿರಿ. ಇದನ್ನು ಕೇಳಿಕೊಳ್ಳುವಾಗ ವಿಸ್ಮಯಪಡುವ ಅಂಥ ಯಾವ ಸಂದರ್ಭವೂ ಇಲ್ಲ. ಶಂಕರರಾಯನ ಯಾವ ಅಪರಾಧವಿರಲಿ-ಇಲ್ಲದಿರಲಿ; ಅವನೀಗ ಈ ಲೋಕದಲ್ಲಿರುವದಿಲ್ಲ. ಆತನು ನಿನ್ನೆಯ ರಾತ್ರಿಯಲ್ಲಿ ಸೆರೆಮನೆಯಲ್ಲೇ ನೇಣುಹಾಕಿಕೊಂಡು

ಆತ್ಮಹತ್ಯೆಮಾಡಿಕೊಂಡಿರುತ್ತಾನೆ. ಶಂಕರರಾಯನ ಮಲಗುವ ಕೋಣೆಯ ದಕ್ಷಿಣ ದಿಕ್ಕಿಗೊಂದು ಸಂಧಿಯಓಣಿಯ ಮುಖವಿದೆಯೆಂದು ತಿಳಿಯುತ್ತದೆ. ನಿಮಗಾದರೂ ಆ ಸಂಗತಿ ಗೊತ್ತೇ ಇದೆ. ಒಂದು ಸಾಮಾನ್ಯ ಎತ್ತರದ ಗೋಡೆ ಹಾಗು ಅಗರಾಚೆಗೆ ಪೇರಲ, ಮಾವು ಮುಂತಾದ ಫಲಗಳ ವೃಕ್ಷಗಳು ಇಷ್ಟೇ ಅಂತರವು ಆ ಸಂಧಿಯ ಓಣಿಗೂ ಶಂಕರರಾಯನ ಕೋಣೆಗೂ ಇರುತ್ತದೆ. ಶಂಕರರಾಯನ ಶಯನಾಗಾರದಲ್ಲಿ ಎರಡು ಹಾಸಿಗೆಗಳಿರುತ್ತಿದ್ದವು. ಒಂದರಲ್ಲಿ ಸಾವಿತ್ರಿಯು ತನ್ನ ಮಗನಾದ ಮನಮೋಹನನೊಡನೆ ಮಲಗುತ್ತಿದ್ದಳು; ಇನ್ನೊಂದರ ಮೇಲೆ ಸ್ವಂತ ಶಂಕರರಾಯನೊಬ್ಬನೇ ಮಲಗುತ್ತಿದ್ದನು. ಯಾವ ರಾತ್ರಿಯಲ್ಲಿ ಸಾವಿತ್ರಿಯ ಕೊಲೆಯಾಯಿತೋ ಆ ರಾತ್ರಿಯಲ್ಲ ಶಂಕರರಾಯನು ಮೋಹಿನಿಯ ಮನೆಗೆ ಹೋಗಿರಲಿಲ್ಲ. ಆದರಿಂದ ಆಗ ಮೋಹಿನಿಯೇ ಮಂದಿಗೆ ಕಾಣದ ರೀತಿಯಲ್ಲಿ ಶಂಕರರಾಯನ ಮನೆಗೆ ಬಂದಿದ್ದಳು. ಅಂದು ಶಂಕರರಾಯನು ಮಿತಿಮೀರಿ ಸೆರೆ ಕುಡಿದಿದ್ದನು. ಅದರಿಂದ ಅವನು ಜೋಲಿ ಹೊಡೆಯುತ್ತ ಹೊಡೆಯುತ್ತ ತನ್ನ ಮಲಗುವ ಮನೆಗೆ ಹೋಗಿ ಸಾವಿತ್ರಿಯನ್ನು ಹೆಚ್ಚಾಗಿ ಥಳಿಸಿದನು. ಆ ರಾತ್ರಿಯಲ್ಲಿ ಅವರ ಕೋಣೆಯೊಳಗಿನ ಆ ಸಂದಿಯ ಓಣಿಯ ಕಡೆಯ ಕಿಟಕಿಯು ತೆರೆದಿತ್ತಾದ್ದರಿಂದ ಆ ಸಂದಿಯ ಓಣಿಯಲ್ಲಿ ನಿಂತುಕೊಂಡವರಿಗೆ ಆ ಶಯನಾಗಾರದೊಳಗಿನ ಎಲ್ಲ ದೃಶ್ಯವೂ ಸಹಜವಾಗಿ ಗೋಚರವಾಗುತ್ತಿತ್ತು. ಅದಿರಲಿ. ಆ ಮೇಲೆ ಶಂಕರರಾಯನು ಹೋಗಿ ಒಂದು ಹಾಸುಗೆಯ ಮೇಲೆ ಮಲಗಿದನು; ಹಾಗು ಸೆರೆಯ ಮದದಿಂದ ಕೆಲ ಕಾಲ ಅತ್ತಿತ್ತ ಹೊರಳಾಡಿದ ಬಳಿಕ ಆತನಿಗೆ ನಿದ್ದೆಹತ್ತಿತು. ತದನಂತರ ಕೆಲ ನಿಮಿಷಗಳ ಮೇಲೆ ಸಾವಿತ್ರಿಯೂ ಮಲಗಿ ಗೊರಕೆ ಹೊಡೆಯಹತ್ತಿದಳು. ಬಳಿಕ ಒಂದು ತಾಸಿನ ಮೇಲೆ ಆ ಕೊಲೆಗಡಕನು

ಆ ಸಂದಿಯ ಓಣಿಯೊಳಗಿಂದ ಆ ಚಿಕ್ಕ ಗೋಡೆಯನ್ನು ಏರಿ, ಅಲ್ಲಿಂದ ಪಕ್ಕದ ವೃಕ್ಷಗಳನ್ನು ಹತ್ತಿ, ಅವುಗಳ ಸಹಾಯದಿಂದ ಆ ಬದಿಯ ತೆರೆದಿದ್ದ ಕಿಟಕಿಯೊಳಗಿಂದ ಒಳಹೊಕ್ಕು, ಅಲ್ಲಿ ಮಲಗಿದ್ದ ಸಾವಿತ್ರಿಯನ್ನು ಕೊಂದಿರುವನು. ತನ್ನ ಕೆಲಸ ಪೂರೈಸಿಕೊಂಡ ಬಳಿಕ ಆವನು ಆ ತೆರೆದಿದ್ದ ಕಿಟಕಿಯ ಮೂಲಕವೇ ವೃಕ್ಷಗಳ ಮೇಲಿಳಿದನು. ಆಗ ಸಾವಿತ್ರಿಯ ಪತಿಯು ಸೆರೆಯ ಹಾಗು ನಿದ್ದೆಯ ಗುಂಗಿನಲ್ಲಿ ಸಂಪೂರ್ಣ ಸಂಜ್ಞಾಹೀನನಾಗಿದ್ದನು. ಸತ್ಯವಂತರಾಯರೇ, ನಾನು ಹೇಳುತ್ತಿರುವ ಸಂಗತಿಯು ನಿಮಗೊಳ್ಳೇ ಆಶ್ಚರ್ಯಕರವಾಗಿ ತೋರುತ್ತಿರುವದೆಂದು ನಿಮ್ಮ ಮುಖಭಾವದಿಂದ ತಿಳಿಯುತ್ತದೆ; ಆದರೆ ಇದರಲ್ಲಿಯ ಒಂದಕ್ಕರವೂ ಕೂಡ ಸುಳ್ಳಾಗಿರುವದಿಲ್ಲ. ನಾನು ಇದೆಲ್ಲಕ್ಕೂ ಪ್ರಮಾಣಗಳನ್ನು ಕಂಡುಕೊಂಡಿದ್ದೇನೆ, ನಾನು ನಿಮ್ಮ ಈ ಕೇಸನ್ನು ಕೈಕೊಂಡ ಕೂಡಲೆ ಮೊಟ್ಟಮೊದಲು ಶಂಕರರಾಯನ ಪರಿವಾರದ ವೃತ್ತಾಂತವನ್ನೆಲ್ಲ ತಿಳಕೊಳ್ಳಲಿಕ್ಕೆ ಪ್ರಯತ್ನಿಸಿದೆನು. ಆ ನನ್ನ ಪ್ರಯತ್ನವು ಒಮ್ಮೆಲೆ ಸಂಪೂರ್ಣ ನಿಷ್ಫಲವಾಯಿತೆಂತಲ್ಲ; ಆ ನನ್ನ ವಿಚಾರಣೆಯಲ್ಲಿ ನನಗೆ ತಿಳಿದುದೇನಂದರೆ—ಶಂಕರರಾಯನ ಶಯನಾಗಾರದಲ್ಲಿ ಎರಡು ಹಾಸಿಗೆಗಳಿದ್ದವು. ಒಂದು ದೊಡ್ಡದು; ಅದರ ಮೇಲೆ ಸಾವಿತ್ರಿಯು ತನ್ನ ಚಿಕ್ಕ ಮಗುವಿನೊಡನೆ ಮಲಗುತ್ತಿದ್ದಳು; ಮತ್ತು ಯಾವದು ಚಿಕ್ಕದಿದ್ದಿತೋ ಅದರ ಮೇಲೆಯೇ ಸ್ವಂತ ಶಂಕರರಾಯನು ಮಲಗುತ್ತಿದ್ದನು. ಶಂಕರರಾಯನು ತನ್ನ ಹೆಂಡತಿ-ಮಗುವಿನೊಡನೆ ಒಂದೇ ಹಾಸುಗೆಯ ಮೇಲೆ ಮಲಗದಿರಲಿಕ್ಕೆ ಮುಖ್ಯ ಕಾರಣವೆಂದರೆ, ಆತನು ಬಹಳ ರಾತ್ರಿಯ ನಂತರ ಹಾಗು ಹೆಚ್ಚಾಗಿ ಮದಗ್ರಸ್ತನಾಗಿ ಮನೆಗೆ ಹಿಂದಿರುಗುತ್ತಿದ್ದು, ತನಗೆ ಎಲ್ಲಿಯವರೆಗೆ ನಿದೆ ಬರುತ್ತಿರಲಿಲ್ಲವೋ ಅಲ್ಲಿಯುವರೆಗೂ ಆತನು ತನ್ನ ಹಾಸಿಗೆಯ ಮೇಲೆ ಅತ್ತಿಂದಿತ್ತ ಇತ್ತಿಂದತ್ತ ಒಂದೇಸವನೆ ಹೊರಳಾಡುತ್ತಿದ್ದನು. ತನ್ನ ಆ

ಬಗೆಯ ಅವಸ್ಥೆಯಲ್ಲಿ ಮತ್ತೆರಡು ಪ್ರಾಣಿಗಳೊಡನೆ ಒಟ್ಟಾಗಿ ಮಲಗಿ ಕೊಳ್ಳುವುದು ಅವನದವನಿಗೇ ಅಯೋಗ್ಯವೆಂದೆನಿಸಿದ್ದರಿಂದ ಆತನು ತನ್ನ ಮಲಗುವ ವ್ಯವಸ್ಥೆಯನ್ನು ಹಾಗೆ ಪ್ರತ್ಯೇಕ ಹಾಸಿಗೆಯಲ್ಲೇ ಮಾಡಿ ಕೊಂಡಿದ್ದನು. ಅಲ್ಲದೆ ದಿನಾಲು ಮಧ್ಯರಾತ್ರಿಯಲ್ಲಿ ಮಗ್ಗುಲೊಳಗಿನ ಹುಡುಗನ ಹೆಚ್ಚಾದ ಅಳುವಿನಿಂದಲೂ ಅವನಿಗೆ ಹತ್ತಿದ್ದ ನಿದ್ದೆಯು ಕೆಡುವ ಸಂಭವವಿತ್ತು; ಅದನ್ನು ನಿವಾರಿಸಿಕೊಳ್ಳುವದಕ್ಕೆಂದೂ ಆತನು ಹಾಗೆ ಬೇರೆ ಹಾಸಿಗೆಯಲ್ಲಿ ನಿದ್ರಿಸುತ್ತಿರಬಹುದು. ಅದಿರಲಿ. ಕೊಲೆ ಯಾದ ಮರುದಿನ ಬೆಳಿಗ್ಗೆ ಸಾವಿತ್ರಿಯ ಮೃತದೇಹವು ಅವಳ ಗಂಡನ ಹಾಸಿಗೆಯ ಮೇಲೆ ಬಿದ್ದಿದ್ದನ್ನು ಅಲ್ಲಿಯವರೆಲ್ಲರೂ ನೋಡಿರುತ್ತಾರೆ. ಆ ಸೂತ್ರವನ್ನವಲಂಬಿಸಿ ನಾನು ಎರಡು ಅನುಮಾನಗಳನ್ನು ಕಟ್ಟ ಲಿಕ್ಕೆ ಉದ್ಯುಕ್ತನಾದೆನು. ನನ್ನ ಮೊದಲನೇ ಅನುಮಾನವೇನಂದರೆ, ಅಂದು ರಾತ್ರಿ ಶಂಕರರಾಯನು ಅತಿ ಮದಗ್ರಸ್ತನಾಗಿರಲು, ಆದರಿಂದ ಮೈ ಮೇಲೆ ಎಚ್ಚರವಿರದೆ ಆತನು ಮತಿಭ್ರಮಣದಿಂದ ತನ್ನ ಹಾಸಿಗೆ ಬಿಟ್ಟು ತನ್ನ ಹೆಂಡತಿಯ ಹಾಸಿಗೆಯ ಮೇಲೆಯೇ ಮಲಗಿರಬೇಕು; ಹಾಗು ಅಲ್ಪಾವಧಿಯಲ್ಲಿ ಅಲ್ಲಿಯೇ ಸುಖನಿದ್ರಾರತನಾಗಿರಬೇಕು. ಗಂಡನಿಗೆ ನಿದ್ದೆ ಹತ್ತಿದ್ದನ್ನು ಕಂಡು, ಸಾವಿತ್ರಿಯು ಆತನ ನಿದ್ದೆ ಕೆಡಿ ಸುವದು ಅನುಚಿತವೆಂದು ಭಾವಿಸಿ, ತನ್ನ ಕೂಸಿನೊಡನೆ ಗಂಡನದೇ ಆಗಿದ್ದ ಆ ಬೇರೆ ಹಾಸಿಗೆಗೆ ಹೋಗಿ ಮಲಗಿರಬೇಕು. ಇನ್ನು ನನ್ನ ಎರಡನೇ ಅನುಮಾನವೇನಂದರೆ-ಆ ಬಳಿಕ ಯಾವನೊಬ್ಬನು ಆಗ ತೆರೆ ದಿದ್ದ ದಕ್ಷಿಣ ದಿಕ್ಕಿನ ಕಿಟಿಕಿಯದ್ವಾರದಿಂದ ಆ ಅಂಧಕಾರಮಯವಾದ ಕೋಣೆಯನ್ನು ಪ್ರವೇಶಿಸಿರಬೇಕು. ಆತನು ಆ ದಂಪತಿಗಳ ನಿತ್ಯದ ಆ ಅಪೂರ್ವ ಶಯನದ ವ್ಯವಸ್ಥೆಯನ್ನು ಮೊದಲಿನಿಂದಲೂ ಅರಿತಿರ ಬೇಕು. ಆದರಿಂದಲೇ ಅವನು ಆ ಕತ್ತಲಲ್ಲಿ ಯಾವುದನ್ನೂ ಸ್ಪಷ್ಟ ವಾಗಿ ತಿಳಿಯಲಾರದೆ ಶಂಕರರಾಯನ ಬದಲು ಸಾವಿತ್ರಿಯನ್ನೇ ಕೊಲೆ

ಗೈದಿರಬೇಕು. ಈ ಸಿನ್ನ ಎರಡೂ ಅನುಮಾನಗಳಿಗಾಗಿ ನಾನು ಸಾಕಷ್ಟು ಪ್ರಮಾಣಗಳನ್ನೂ ಸಂಗ್ರಹಿಸಿರುತ್ತೇನೆ. ಆಗ ಅವರ ಆ ಶಯನಾಗಾರದಲ್ಲಿ ಯಾವ ಬೇರೊಂದು ವ್ಯಕ್ತಿಯು ಗೌಪ್ಯವಾಗಿ ಪ್ರವೇಶಿಸಿದ್ದಿತೋ ಅದಕ್ಕೆ ಪ್ರಮಾಣವೆಂದರೆ, ಆ ಕಿರಿಓಣಿಯು ಬದಿಯು ಗೋಡೆಯ ಮೇಲಿನ ಎರಡು-ಮೂರು ಅಸ್ಪಷ್ಟವಾದ ಪದಚಿಹ್ನಗಳು. ಆ ಕಿರಿಓಣಿಯ ಮುಖದಲ್ಲಿಯೂ ಅವೇ ಬಗೆಯ ಅನೇಕ ಪದಚಿಹ್ನಗಳು ಸುಸ್ಪಷ್ಟವಾಗಿ ಮೂಡಿರುತ್ತವೆ. ಅಲ್ಲಿಯ ಆ ಗಿಡಗಳ ಗುಚ್ಛವಾದ ಹರಿ-ಬೊಂಗೆಗಳು ಶಂಕರರಾಯನ ಶಯನಾಗಾರದ ಅಟ್ಟದಮೇಲಿನ ಆ ಕೋಣೆಯೊಳಗಿನ ಆ ತೆರವಿದ್ದ ಕಿಟಕಿಗೆ ಹೋಗಿ ತಲುಪಿರುತ್ತವೆ. ಅದರಿಂದ ಆ ಸಂದಿಯ ಓಣಿಯೊಳಗಿನ ನೆಲದ ಮೇಲೆ ಸೂರ್ಯನ ಬಿಸಿಲು ಬಹುದಿನಗಳಿಂದಲೂ ಬಿದ್ದಿರುವುದಿಲ್ಲ. ಆ ಕಾರಣದಿಂದಲೇ ಅಲ್ಲಿಯ ನೆಲದ ಮೇಲಿನ ಮಣ್ಣು ಯಾವಾಗಲೂ ತೀರ ಮೃದುವಾಗಿರುತ್ತದೆ. ಅದಕ್ಕೆ ಸಾಮಾನ್ಯವಾಗಿ - ಕೆಸರೆಂದರೂ ತಪ್ಪಾಗಲಿಕ್ಕಿಲ್ಲ. ಅಂಥ ಆ ಮೆತ್ತನ್ನ ಹಸಿಮಣ್ಣಿನಲ್ಲಿ ಪ್ರತಿಯೊಬ್ಬರ ಹೆಜ್ಜೆಗಳ ಚಿಹ್ನಗಳೂ ಬಹು ಸುಸ್ಪಷ್ಟವಾಗಿಯೂ ಪರಿಷ್ಕಾರವಾಗಿಯೂ ಮೂಡಲಾಗುತ್ತವೆ. ಮುಂದೆ ಯಾವಾಗಲಾದರೂ ಉಪಯುಕ್ತಗಳಾದಾವೆಂದು ನಿರ್ಧರಿಸಿ ನಾನು ಆಗಲೇ ಆ ಎಲ್ಲ ಪದಚಿಹ್ನಗಳಲ್ಲಿ ಯಾವವು ಹೆಚ್ಚಾಗಿ ಒತ್ತಿ ಮೂಡಲ್ಪಟ್ಟಿದ್ದವೋ ಹಾಗು ಯಾವವು ಮಾಸಿ ಹೋಗಿರಲಿಲ್ಲವೋ ಅವುಗಳ ಮೇಲೆ ಅಲ್ಲಿಯೇ ಒಣಗಿ ಬಿದ್ದಿದ್ದ ಗಿಡಗಳ ಎಲೆಗಳನ್ನು ಒಟ್ಟಿ ಬೆಂಕೀ ಹಚ್ಚಿದೆನು. ಅದರಿಂದ ಆ ಪದಚಿಹ್ನಗಳೆಲ್ಲ ಚನ್ನಾಗಿ ಒಣಗಲು ನಾನು ಅವುಗಳ ಮೇಲೆ ಮೇಣವನ್ನೊತ್ತಿ ಅವುಗಳ ಅಚ್ಚು ತೆಗೆದುಕೊಂಡೆನು. ಆ ಪದಚಿಹ್ನಗಳ ಅಚ್ಚಿನಂತಹ ಗುರುತುಗಳು ಶಂಕರರಾಯನ ಆ ಶಯನಾಗಾರದ ಆ ತೆರವಿದ್ದ ಕಿಡಕಿಯ ಹೊರ ಮಗ್ಗಲಿನ ಚೌಕಟ್ಟಿನ ಮೇಲೂ ಒಂದೆರಡು

ಕಡೆಗೆ ಕಾಣಿಸಿದವು. ಇನ್ನು ನೀವು ನನ್ನ ಮಾತಿನ ಬಗ್ಗೆ ಸಂಶಯತಾಳಿ ಕೇಳಬಹುದೇನಂದರೆ, ಆ ಕೊಲೆಗಡಕನು ಆ ತೀರ ಚಿಕ್ಕದಾದ ಗೋಡೆಯ ಮೇಲಿಂದ ಆ ಬಹು ಎತ್ತರವಾದ ಮೇಲಟ್ಟದ ಮೇಲಿನ ಶಯನಾಗಾರದ ಕಿಟಕಿಯನ್ನು ಹೇಗೆ ಹತ್ತಿದನು? ಎಂದು; ಆದರೆ ಆ ನಿಮ್ಮ ಶಂದೇಹವನ್ನು ನಾನು ಈಗಲೆ ಹೋಗಲಾಡಿಸುವೆನು. ಆ ಕೊಲೆಗಡಕನು ಆ ಗಿಡವನ್ನೇರಿ ಹೋಗುವಾಗಲೋ ಇಳಿದು ಬರುವಾಗಲೋ ಆತನ ಕಾಲಿಗೆ ತಾಕಿ ಆ ಚಿಗುರೆಲೆಗಳಲ್ಲಿಯ ಹಲವುಗಳು ಗಿಡದಿಂದ ಉದುರಿ ಕೆಳಗಿನ ನೆಲಕ್ಕೆ ಬಿದ್ದು ಬಾಡಿ ಹೋಗಿರುತ್ತವೆ; ಮತ್ತು ಎಷ್ಟೋ ಚಿಗುರೆಲೆಗಳು ಆ ಗಿಡದ ನಡುವಿನ ಹರಿ-ಟೊಂಗೆಗಳಲ್ಲೇ ಸಿಕ್ಕು ನೇತಾಡುತ್ತಿರುವವು. ಈ ಎಲ್ಲ ಪ್ರಮಾಣಗಳ ಮೇಲಿಂದ ಈ ಖೂನಿಯ ಕೇಸಿನಲ್ಲಿ ಶಂಕರರಾಯನ ಹೊರತು ಇನ್ನಾರದೋ ಒಬ್ಬರ ಸಂಬಂಧವುಂಟಾಗಿರಲಿಕ್ಕೇಬೇಕೆಂದು ನನ್ನ ದೃಢಮತವಾಗಿದೆ. ಆ ಬಗ್ಗೆ ನಾನೀಗ ಸಂದೇಹರಹಿತನಾಗಿರುತ್ತೇನೆ; ಹಾಗು ನೀವಂದಂತೆ ಆ ಕೊಲೆಯು ಶಂಕರರಾಯನಿಂದಾಗಿರದೆ, ಯಾರೋ ಮತ್ತೊಬ್ಬರಿಂದಲೇ ಆಗಿರಬೇಕೆಂದು ನನ್ನ ಅಭಿಪ್ರಾಯವೂ ಈಗ ನಿಮ್ಮಂತೆಯೇ ಆಗಿಬಿಟ್ಟದೆ. ಅದರಿಂದ ಈಗ ಶಂಕರರಾಯನು ಸಂಪೂರ್ಣ ನಿರಪರಾಧಿಯು. ನಾನು ಇದುವರೆಗೆ ಏನೇನು ವಿವರಿಸಿ ಹೇಳಿದೆನೋ ಅದೆಲ್ಲವೂ ನಿಮಗೆ ಸ್ಪಷ್ಟವಾಗಿ ತಿಳಿಯಿತೋ?''

ಈ ಬಗೆಯಾಗಿ ಪ್ರಶ್ನೆಮಾಡಿದ ನಂತರ ಆತನು ನನ್ನ ಉತ್ತರದ ಸಲುವಾಗಿ ಕ್ಷಣ ಕೂಡ ದಾರಿ ನೋಡದೆ, ತನ್ಮಯಚಿತ್ತದಿಂದ ತನ್ನಷ್ಟಕ್ಕೆ ತಾನೇ ಅನ್ನಹತ್ತಿದನೇನಂದರೆ—''ಮೋಹಿನಿ ತರುಣಿಯು ಬಹು ಚಾಣಾಕ್ಷಳು! ಬಹು ಚಾಲಾಕಳು! ಅವಳು ಇಷ್ಟು ಚತುರಳಿರಬಹುದೆಂದು ನನಗೆ ಈ ಮೊದಲು ಅನಿಸಿರಲಿಲ್ಲವಲ್ಲ! ಶಾಬಾಶ್! ಹೆಂಗಸಾದರೂ ಅವಳು ಇಷ್ಟು ಬುದ್ಧಿಮತಿಯಾಗಿರುವಳಲ್ಲವೆ?''

ಭಗವಾನ್‌ದಾಸನ ಆ ತನ್ಮಯತೆಯಲ್ಲೇ ನಾನೊಂದಿಷ್ಟು ಅವಕಾಶ ಮಾಡಿಕೊಂಡು—"ಅಯ್ಯೋ, ದೇವರೇ! ಹಾಗಾದರೆ ನೀವಿನ್ನು ಆ ಮೋಹಿನಿಯನ್ನೇ ಅಪರಾಧಿಯೆಂದು ನಿರ್ಧರಿಸಿ—"

ಭಗವಾನ್‌ದಾಸನು ನನ್ನನ್ನು ಪೂರ್ತಿ ಮಾತನಾಡಗೊಡದೆ, ನನ್ನ ಮೋರೆಯ ಕಡೆಗೆ ಸಂತಾಪವ್ಯಂಜಕದೃಷ್ಟಿಯಿಂದ ಕ್ಷಣ ಕಾಲ ನಿರೀಕ್ಷಿಸಿದನು. ಬಳಿಕ ಹೇಳಹತ್ತಿದನು:—"ಮೋಹಿನಿಯೇ? ಅವಳು ಅಪರಾಧ ಮಾಡುವ ಸಂಭವವಾದರೂ ಉಂಟೇ? ನೀವಿದೇನು ಹೇಳುತ್ತೀರಿ? ನೀವೀಗ ಅತ್ಯಂತ ಅಧೀರರಾಗಿರುತ್ತೀರೆಂಬಂತೆ ತೋರುತ್ತಿರುವಿರಿ. ನೀವೇ ನನ್ನನ್ನು ಈ ಕೊಲೆಯ ಪತ್ತೆಗೆ ನಿಯೋಜಿಸಿದವರು. ಅದರಿಂದ ನಾನು ನಿಮ್ಮ ಬಳಿಯಲ್ಲಿ ನಿಜ ಸಂಗತಿಯನ್ನು ಇನ್ನು ಹೆಚ್ಚು ಕಾಲ ಮರೆಯುಮಾಜಿಡುವುದು ಯೋಗ್ಯವಾಗಲಿಕ್ಕಿಲ್ಲ. ಇನ್ನು ಬೇರೆ ಯಾವ ಪ್ರಮಾಣವನ್ನೂ ಶೋಧಿಸುವ ಅವಶ್ಯಕತೆಯಿರುವುದಿಲ್ಲ. ನಾನೀಗ ಆ ಕೊಲೆಗಡಕನನ್ನೇ ಪ್ರತ್ಯಕ್ಷವಾಗಿ ನಿಮ್ಮೆದುರು ತಂದು ನಿಲ್ಲಿಸುತ್ತೇನೆ!" ಹೀಗೆಂದು ಅಂದವನೇ ಭಗವಾನ್‌ದಾಸನು ಕುರ್ಚಿಯಿಂದ ತಟ್ಟನೆ ಎದ್ದು ನಿಂತನು; ಹಾಗು ಲಗುಬಗೆಯಿಂದ ಹೋಗಿ ಎದುರಿಗಿನ ರಾಜಬಿದಿಯ ಕಡೆಗಿನ ಕಿಟಕಿಯನ್ನು ಖಡಲ್ಲೆಂದು ತೆರೆದು ಹೊರಗೆ ಇಣುಕಿ ನೋಡಿ, ಆ ಕಿಟಕಿಯೊಳಗಿಂದ ಹೊರಗಡೆಗೆ ಬೊಗ್ಗಿ ನಿಂತುಕೊಂಡು ಅಲ್ಲಿಯವರಾರನ್ನೋ ಉದ್ದೇಶಿಸಿ ತನ್ನಲ್ಲಿಯ ಪೀಪಿಯನ್ನು ಊದಿದನು.

(೧೯)

ಭಗವಾನ್‌ದಾಸನ ಆಗಿನ ಆ ಚಟುವಟಿಕೆಯನ್ನು ಕಂಡು ನಿದಾರುಣವಾದ ಉತ್ಕಂಠೆಯಿಂದ ನಾನು ಆಪಾದಮಸ್ತಕ ಪರ್ಯಂತ ನಡುಗಿಬಿಟ್ಟೆನು; ಹಾಗು ನನ್ನ ಕಣ್ಣೆದುರಿಗೆ ಕಾಮನ ಬಿಲ್ಲಿನ ಬಣ್ಣದಂತೆ ನಾನಾ ವರ್ಣದ ವಿಚಿತ್ರವಾದ ಸಣ್ಣಪುಟ್ಟ ಗೋಲಕಗಳು ಕುಣಿದಾಡಹತ್ತಿ ನನ್ನನ್ನು ಅಣಗಿಸುತ್ತಿರುವಂತೆ ಭಾಸವಾಗಹತ್ತಿತು.

ಮುಂದೆ ಒಂದೇ ಕ್ಷಣದಲ್ಲಿ ಇಬ್ಬರು ಆಗಂತುಕರು ಬಂದು ನನ್ನ ಕೋಣೆಯನ್ನು ಹೊಕ್ಕರು. ಒಬ್ಬನನ್ನು ನೋಡಿದ ಕೂಡಲೆ ಆತನು ಪೋಲೀಸ ಜಮಾದಾರನೆಂದು ಕೂಡಲೆ ತಿಳಿದೆನು; ಹಾಗು ಆತನೊಡ ನಿದ್ದ ಇನ್ನೊಬ್ಬ ವ್ಯಕ್ತಿಯು ನಿನ್ನೆ ರಾತ್ರಿ ಭಗವಾನ್‌ದಾಸನ ಆ ಹೊಸ ತೋಟದಿಂದ ನಾನು ಮನೆಗೆ ಬರುತ್ತಿರುವಾಗ ಯಾವನು ನನ್ನನ್ನನು ಸರಿಸಿ ನನ್ನ ಮನೆಯವರೆಗೂ ಬರುತ್ತಿದ್ದನೆಂದು ಆಗ ನನಗೆ ಸಂಶಯ ವುಂಟಾಗಿದ್ದಿತೋ ಆತನು!

ಭಗವಾನ್‌ದಾಸನು ಆ ಇನ್ನೊಬ್ಬ ವ್ಯಕ್ತಿಯ ಕಡೆಗೆ ಬೊಟ್ಟು ತೋರಿಸಿ, ನನ್ನನ್ನು ಕುರಿತು—"ನೀವು ಈ ಮನುಷ್ಯನನ್ನು ಗುರ್ತಿಸಬಲ್ಲಿ ರಾ?" ಎಂದು ಕೇಳಿದನು.

ಆದಕ್ಕೆ ನಾನು "ನಿನ್ನೆ ನಿಮ್ಮ ಹೊಸ ತೋಟದಿಂದ ನನ್ನ ಮನೆಗೆ ಹಿಂದಿರುಗಿದಾಗ ಈತನೇ ನನ್ನನ್ನನುಸರಿಸಿ ನನ್ನ ಮನೆಯವರೆಗೂ ಬಂದಿದ್ದನು; ಆದರೆ ಆ ಮೊದಲು ನಾನು ಇವನನ್ನೆಂದೂ ಎಲ್ಲಿಯೂ ನೋಡಿದಂತಿಲ್ಲ."

ಭಗವಾನ್‌ದಾಸ:"ನೋಡಿರಲಿಕ್ಕಿಲ್ಲ; ಮತ್ತು ನೋಡಿರುವ ಸಂಭ ವವೂ ಇಲ್ಲ. ನನ್ನ ಅಪ್ಪಣೆಯಿಂದಲೇ ಈತನು ನಿನ್ನೆ ನಿಮ್ಮನ್ನನುಸರಿಸಿ ಬಂದಿದ್ದನು." ಎಂದಂದು, ಅವನು ಬಿದ್ದು ಆವೇಗದಿಂದ ಮತ್ತೆ ಎದ್ದು ನಿಂತು, ಹೊಸದಾಗಿ ಬಂದಿದ್ದ ಆ ಉಭಯತರನ್ನುದ್ದೇಶಿಸಿ:"ನಿಮ್ಮಲ್ಲಿ ರುವ ವಾರಂಟನ್ನು ಹೊರಗೆ ತೆಗೆಯಿರಿ; ಇವರ ಹೆಸರೇ ಸತ್ಯವಂತ ರಾಯರೆಂದು. ಇವರೇ ಸಾವಿತ್ರಿಯನ್ನು ಕೊಲೆಗೈದವರು!" ಎಂದು ತಿಳಿಸಿದನು.

ಭಗವಾನ್‌ದಾಸನ ಆ ನುಡಿಗಳನ್ನು ಕೇಳಿ ವಜ್ರಾಘಾತವಾದವ ರಂತೆ ನಾನು ನಾಲ್ಕೆಂಟು ಹೆಜ್ಜೆ ಮುಮ್ಮೊಗವಾಗಿಯೇ ಚಟಕ್ಕನೆ ಹಿಂದೆ ಸರಿದು ನಿಂತೆನು; ಹಾಗು ಆ ಅಪರಾಹ್ಣಕಾಲದಲ್ಲಿ ಇನ್ನೊ

ಸೂರ್ಯನಾರಾಯಣನು ತನ್ನ ಪ್ರಖರವಾದ ಬಿಸಿಲನ್ನೂ ತೇಜ-ಪ್ರಕಾಶಗಳನ್ನೂ ಬೀರುತ್ತಿದ್ದರೂ ಕೂಡ ನನ್ನ ಕಣ್ಣುಗಳಿಗೆ ಎಲ್ಲೆಲ್ಲೂ ಕಾರ್ಗತ್ತಲೆಯೇ ಕಾಣಿಸುತ್ತಿತ್ತು. ಸುತ್ತಲೂ ಜನಸಂದಣಿಯ ಕೋಲಾಹಲವು ನಡೆದಿದ್ದರೂ ನನ್ನ ಕಿವಿಗಳು ಯುಗಯುಗಾಂತರದಿಂದ ಕಿವುಡಾಗಿರುವಂತೆ ಭಾಸವಾಗಹತ್ತಿತು. ಅತ್ಯಂತ ಗಾಢ-ಗಾಢತರ-ಗಾಢತಮವಾದ ಅಂಧಕಾರವು ನಾಲ್ಕೂ ಕಡೆಗೆ ವ್ಯಾಪಿಸಿ ಬಿಟ್ಟಂತಾಯಿತು! ಹಾಗೆ ಎಷ್ಟು ಕಾಲವು ಕಳೆಯಿತೋ ತಿಳಿಯದು. ಬಳಿಕ ನಾನು ಸ್ಮೃತಿಗೊಂಡು ನೋಡಲು ಲೋಹಕಂಕಣಗಳಿಂದ ನನ್ನ ಎರಡೂ ಕೈಗಳು ಶೋಭಿಸಲ್ಪಟ್ಟಿದ್ದು, ಅವು ಒಂದಕ್ಕೊಂದು ಕೂಡಿ ಬಿಗಿಯಲ್ಪಟ್ಟಿದವು. ಆಗ ಭಗವಾನ್‌ದಾಸನು ನನ್ನನ್ನು ಕುರಿತು ಹೇಳತೊಡಗಿದನು:—

"ಸತ್ಯವಂತರಾಯರೇ, ನಾನು ನಿಮಗಾಗಿ ಅತ್ಯಂತ ದುಃಖಿತನಾಗಿರುತ್ತೇನೆ; ಆದರೆ ಮಾಡಲೇನು? ನನಗೆ ನನ್ನ ಕರ್ತವ್ಯವು ಎಲ್ಲಕ್ಕಿಂತಲೂ ಮಿಗಿಲಾದದ್ದು! ನೀವು ತಿಳಿದೂತಿಳಿದು ಪಾಪ! ಆ ಬಡ ಮೋಹಿನಿಯ ಮೇಲೆ ಈ ಕೊಲೆಯ ಅಪರಾಧವನ್ನು ಹೊರಿಸಬಯಸುತ್ತಿದ್ದಿರಿ. ಅದರಿಂದ ನೀವು ಬಹಿರಂಗದಲ್ಲಿ ತೋರುವಷ್ಟು ಒಳ್ಳೇ ನಡತೆಯ ಗೃಹಸ್ಥರಾಗಿಲ್ಲ. ಅದು ಹಾಗಿರಲಿ. ಯಾವ ದಿವಸ ನಾನು ನಿಮ್ಮನ್ನು ಮೊಟ್ಟಮೊದಲು ಕಂಡೆನೋ, ಅದೇ ದಿವಸ ಹಾಗು ನಿಮ್ಮ ಬಾಯಿಂದ ಈ ಕೊಲೆಯ ವೃತ್ತಾಂತ ಕೇಳಿಕೊಳ್ಳುವಾಗಲೇ ನನಗೆ ಯಾವುದೋ ಒಂದು ರೀತಿಯಿಂದ ಈ ಕೊಲೆಯ ನಿಜ ಸಂಗತಿಯೂ ಕೊಲೆಪಾತಕಿಯು ಯಾರೆಂಬದೂ ಒಮ್ಮೆಲೆ ಹೊಳೆದು ಬಿಟ್ಟಿತು; ಹಾಗು ಅದಕ್ಕೋಸ್ಕರವೇ ನೀವು ನನಗೆ ಪ್ರತಿಫಲವೆಂದು ಕೊಡಲಿದ್ದ ಸಾವಿರ ರೂಪಾಯಿಗಳನ್ನು ಈ ಕೊಲೆಯ ಪತ್ತೆ ಹಚ್ಚಿದ ಕೂಡಲೆ ನನಗೆ ಕೊಡಬೇಕೆಂದು ಒಬ್ಬ ತ್ರಯಸ್ಥರ ಕಡೆಗೆ ಕೊಟ್ಟಿಡಿ

ರೆಂದು ನಾನು ನಿಮಗಾಗಲೆ ಹೇಳಿದ್ದು. ನೀವಾದರೂ ಆಗ ನನ್ನ ಹೇಳಿಕೆಯಂತೆ ನಡೆದಿರುತ್ತೀರಿ. ಅದು ಹೇಗೆಯೇ ಆಗಲಿ. ಅದರಿಂದಲೇ ನಿಮ್ಮ ಹೃದಯದೊಳಗಿನ ಬಹು ವಿಶಾಲ ಉದಾರತೆಯ ಪರಿಚಯವುಂಟಾಗುತ್ತದೆ. ಶಂಕರರಾಯನು ನಿಮ್ಮ ಘೋರತರವಾದ ವೈರಿಯಾಗಿದ್ದರೂ ಕೂಡ ಆತನು ಕೇವಲ ನಿರಪರಾಧಿಯೆಂಬದನ್ನು ನೀವು ಅಂತರಂಗದಲ್ಲಿ ಬಲ್ಲಿರಿ. ನಿಮ್ಮ ಅಪರಾಧಕ್ಕಾಗಿ ಆತನು ದೇಹ ದಂಡಣೆ ಭೋಗಿಸಬೇಕಾಗುವದೆಂಬದನ್ನು ಭಾವಿಸಿ ನೀವು ಅತ್ಯಂತ ಪಶ್ಚಾತ್ತಾಪಗೊಂಡದ್ದರಿಂದಲೇ ನಿಮ್ಮ ಜೇಬಿನೊಳಗಿನ ಆ ಸಾವಿರ ರೂಪಾಯಿಗಳನ್ನು ನನಗೆ ಇನಾಮು ಕೊಡಲಿಕ್ಕೆ ನೀವು ಸಿದ್ಧರಾದಿರಿ. ಇನ್ನು ನಾಲ್ಕಾರು ಪ್ರಮಾಣಗಳನ್ನು ತೋರಿಸಿಕೊಟ್ಟರೆ, ನೀವು ಈ ಕೇಸನ್ನು ಯಾವನೊಬ್ಬ ಹೊಸಪತ್ತೆದಾರನಿಗೇಕೆ ಒಪ್ಪಿಸಲಿಲ್ಲೆಂಬದರ ಸಂದೇಹವು ನಿಮ್ಮ ಮನಸ್ಸಿನಲ್ಲಿ ಉಳಿಯಲಾರದು."

"ಯಾವ ದಿವಸ ಸಾವಿತ್ರಿಯ ಕೊಲೆಯಾಯಿತೋ, ಆ ರಾತ್ರಿ ಹತ್ತುಗಂಟೆಯ ಸಮಯಕ್ಕೆ ಅವರ ಉದ್ಯಾನದಲ್ಲಿ ನಿಮಗೂ ಶಂಕರರಾಯನಿಗೂ ಹೆಚ್ಚಾಗಿ ವಾದಿಸಾಟವಾಯಿತು; ಹಾಗು ಆತನನ್ನು ಕೊಲೆಗೆಯ್ಯುತ್ತೇನೆಂದು ನೀವು ಅಲ್ಲಿ ಗಟ್ಟಿಯಾಗಿ ಹೇಳಿ, ಧಮಕಿ ಕೂಡ ಕೊಟ್ಟದ್ದಿರಿ; ಆದರೆ ಆ ನಿಮ್ಮ ಧಮಕಿಯ ನುಡಿಗಳು ಶಂಕರರಾಯನಿಗೆ ಕೇಳಿಸಿದಂತೆ ಅಲ್ಲಿಯೇ ಸಮೀಪದಲ್ಲಿದ್ದ ಮತ್ತೆ ಒಬ್ಬಿಬ್ಬರಿಗೂ ಕೇಳಿಸಿರುತ್ತವೆ. ಆ ವಾದಿಸಾಟವಾದ ಕೆಲ ಕ್ಷಣಗಳ ನಂತರ ಶಂಕರರಾಯನಿಗೆ ತನ್ನ ಚೂರಿಯು ಕಾಣಿಸದೆ ಅದು ಕಳವಾಗಿ ಹೋದ ಸಂಗತಿಯು ಗೋಚರವಾಯಿತು. ನೀವು ಶಂಕರರಾಯನಿಗೆ ಹೇಳದೆ ಕೇಳದೆ ಆತನ ಆ ನಿಡಿದಾದ ಚೂರಿಯನ್ನು ಅಂದು ಎತ್ತಿಹಾಕಿದ್ದಿರಿ. ಶಂಕರರಾಯನಿಗೆ ತಿಳಿಸದೆ ನೀವು ಹಾಗೆ ಆ ಚೂರಿಯನ್ನಪಹರಿಸಿದ್ದರ ಸಂಬಂಧದಲ್ಲೂ ನಾನು ಒಂದೆರಡು ಪ್ರಮಾಣಗಳನ್ನು ಸಂಗ್ರಹಿಸಿರು

ತ್ತೇನೆ. ಅಂದಿನ ಶಂಕರರಾಯನ ಆ ತೀರ ಕಠಿಣೋಕ್ತಿಗಳಿಂದ ನಿಮ್ಮ ಸಿಟ್ಟು ಹೆಚ್ಚಿ ನೀವು ದೇಹಭಾನವಿರಹಿತರಾದಿರಿ. ಆಗ ನೀವು ನಿಮ್ಮ ಮನೆಗೆ ಹೇಗಾದರೂ ಬಂದರೂ ನಿಮ್ಮಲ್ಲಿಯ ಶಂಕರರಾಯನ ವಿಷ ಯದ ಕ್ರೋಧವು ಯಾತ್ರ ಕೊಂಚವೂ ಕಡಿಮೆಯಾಗಲಿಲ್ಲ. ಆದರಿಂದ ನೀವು ಅಂದೇ ಶಂಕರರಾಯನ ಕೊಲೆಗೆಯ್ಯುವ ಸಂಕಲ್ಪ ಮಾಡಿಕೊಂ ಡು, ಮತ್ತೆ ಆತನ ಮನೆಗೆ ಬಂದಿರಿ; ಹಾಗು ಆಗಲೆ ನಿಮ್ಮ ತಲೆಯಲ್ಲಿ ಆ ಬಗ್ಗೆ ಯಾವುದೋ ಒಂದು ನಿರ್ಧಾರವು ಒಡಮೂಡಲು, ನೀವು ಮೆಲ್ಲನೆ ಆತನು ಕೂರುವ ಕೋಣೆಯನ್ನು ಪ್ರವೇಶಿಸಿ, ಆತನ ಚೂರಿ ಯನ್ನು ಕದಿಯುವ ಮಹಾ ಪಾಪಕ್ಕೆ ಕೈನೀಡಿದಿರಿ. ಆ ಕಾಲಕ್ಕೆ ಒಬ್ಬ ಪರಿಚಾರಿಕೆಯು ಅಲ್ಲಿ ನಿಮ್ಮನ್ನು ಆ ಅವಸ್ಥೆಯಲ್ಲಿ ನೋಡಿದಳು; ಆದರೆ ನೀವು ದೊಡ್ಡ ಮನುಷ್ಯರು; ಆಕೆ ಮಾತ್ರ ಸಣ್ಣ ಜನರ ವರ್ಗದವಳು. ಅದರಿಂದಲೇ ಅವಳು ನಿಮ್ಮ ಮೇಲೆ ಈ ಬಗೆಯ ಗರ್ಹಿತ ಸಂದೇಹ ತಾಳಲಾರದವಳಾದಳು. ಇತ್ತಕಡೆಗೆ ಆತನ ಕೂಡ್ರುವ ಕೋಣೆ ಯಲ್ಲಿ ಈ ಬಗೆಯ ಒಂದೆರಡು ಕ್ಷುದ್ರ ಘಟನೆಗಳು ಎಲ್ಲಿಯವರೆಗೆ ಘಟಿಸುತ್ತಿದ್ದವೋ, ಅಲ್ಲಿಯ ವರೆಗೂ ಶಂಕರರಾಯನು ಅತ್ತ ತನ್ನ ಅಟ್ಟದ ಹೊರ ಮಾಳಿಗೆಯ ಮೇಲೆ ಕುಳಿತು ತನ್ನ ಸಾರಾಯಿ ಸೇವನದ ಕೃತ್ಯವನ್ನು ಮನಸೋಕ್ತವಾಗಿ ನಡೆಯಿಸಿದ್ದನು. ಉದ್ಯಾನದೊಳಗಿನ ನಿಮ್ಮ ಉಭಯತರ ವಾಕ್ತಾಡಣದ ನಂತರ ನೀವು ಯಾವಾಗ ಅಲ್ಲಿಂದ ಹೊರಟು ಹೋದಿರೋ ಆಗ ಯಾವುದೋ ಅತರ್ಕ್ಯ ಹಾಗು ತಿಳಿಸಲಾರ ದ ಕಾರಣದಿಂದ ಶಂಕರರಾಯನ ಮನಸ್ಸಿನಲ್ಲೊಂದುಬಗೆಯ ಬಹು ದೊಡ್ಡ ಗಾಬರಿಯು ಉಂಟಾಯಿತು; ಹಾಗು ಆತನು ಆ ಗಾಬರಿಯನ್ನು ನೀಗಿಕೊಳ್ಳುವ ಸಲುವಾಗೆಂದು ಮತ್ತೆ ತನ್ನ ಮೇಲಟ್ಟದ ಮೇಲಿನ ಹೊರ ಮಾಳಿಗೆಗೆ ಹೋಗಿ ಮನಸೋಕ್ತವಾಗಿ ಸೆರೆ ಕುಡಿಯತೊಡಗಿ ದನು. ಆ ಅತ್ಯಂತ ಮದದಿಂದ ಆತನ ತಲೆಯೋ ಕೆಟ್ಟು ಹೋದಂ

ತಾಯಿತು. ಆತನು ಆ ದಿನ ಎಷ್ಟು ಹೆಚ್ಚು ಕುಡಿಯುಲಿಕ್ಕೆ ಸಾಧ್ಯವಾಯಿತೋ ಅಷ್ಟು ಸರೆಯನ್ನು ತನ್ನ ಗಂಟಲಿಗೆ ಸುರುವಿಕೊಂಡೇ ಬಿಟ್ಟನು! ಬಳಿಕ ಸೀಸೆಯ ಬಾಯಿಗೆ ಬೆಣೆಯನ್ನೊತ್ತಿ ಯಾವಾಗ ಆತನು ತನ್ನ ಕೂಡ್ರುವ ಕೋಣೆಗೆ ಹಿಂದಿರುಗಿ ಆ ಸೀಸೆಯನ್ನು ತನ್ನ ಕಪಾಟಿನಲ್ಲಿರಿಸಿ ಹೋದನೋ ಆಗ ಆತನಿಗೆ ಆ ತನ್ನ ಕಪಾಟಿನ ಕದವು ತೆರೆದಿರುವಂತೆ ತೋರಿತು; ಹಾಗು ಅದರಲ್ಲಿ ನಿತ್ಯವೂ ಸಮ್ಮುಖದಲ್ಲೇ ಇರುತ್ತಿದ್ದ ತನ್ನ ನಿಡಿದಾದ ಚೂರಿಯು ಇದ್ದಂತೆ ಕಾಣಿಸಲಿಲ್ಲ. ಅವನ್ನು ಕಂಡು ಅವನು ಕೂಡಲೆ ಒಂದಿಷ್ಟು ಚಿಂತೆಗೊಳಗಾದನು. ತದನಂತರ ಅವನು ಎರಡುಮೂರು ಸಾರೆ ಆ ಕಡೆ ಈ ಕಡೆಗಳಲ್ಲಿ ಹುಡುಕಿದರೂ ಅದು ಸಿಗದಾಗಲು, ಅವನು ಅಲ್ಲಿಂದ ಮನೆಯೊಳಗೆ ಹೊರಟು ಹೋದನು; ಹಾಗು ತನ್ನ ಶಯನಾಗಾರಕ್ಕೆ ಹೋಗಿ ಸಾವಿತ್ರಿಯ ಎದುರಿಗೆ ತನ್ನಾ ಕಪಾಟಿನೊಳಗಿನ ಆ ನಿಡಿದಾದ ಚೂರಿಯು ಅಕಸ್ಮಿಕವಾಗಿ ಗುಪ್ತವಾದ ಸಂಗತಿಯನ್ನು ತಿಳಿಸಿದನು. ಅದೇ ಕಾಲಕ್ಕೆ ಆ ಶಯನಾಗಾರದ ಪಕ್ಕದ ಸಂದಿಯ ಓಣಿಯಲ್ಲಿ ಯಾವನೋ ಒಬ್ಬನು ನಿಂತಿರುವುದನ್ನು ಮೋಹಿನಿಯು ಕಂಡಿದ್ದಳು. ಆ ಆಸಾಮಿಯ ಹೆಸರು-ದೆಸೆಗಳನ್ನು ತಿಳಿಸಬೇಕೆಂದು ನಾನು ಮೋಹಿನಿಗೆ ಕೇಳಲು, ಆಕೆಯು ಹೇಳಿದಳೇನಂದರೆ: "ಆತನನ್ನು ನಾನು ಈ ಮೊದಲೊಂದೂ ನೋಡಿಲ್ಲವಾದ್ದರಿಂದ ಗುರ್ತಿಸಲಾರೆನು" ಬಳಿಕ ನಾನೊಂದು ಕುಶಲತೆಯಿಂದ ನಿಮ್ಮನ್ನು ಅವಳೆದುರು ಒಯ್ದು ನಿಲ್ಲಿಸಿದೆನು. ನೀವು ನಡೆದ ಎಲ್ಲ ಸಂಗತಿಗಳನ್ನು ಆಕೆಯ ಬಾಯಿಂದ ಕೇಳಿಕೊಳ್ಳಬೇಕೆಂದು ನಾನು ಹಾಗೆ ಅದೊಂದು ಸೋಗು ಮಾತ್ರ ಮಾಡಿದೆನು. ನಾನೇ ಅದನ್ನೆಲ್ಲ ನಿಮಗೆ ತಿಳಿಸುವಂತೆ ಆಕೆಗೆ ಕಲಿಸಿದ್ದೆನು. ಏನೇ ಆಗಲಿ, ಮೋಹಿನಿಯು ನಿಮ್ಮನ್ನು ಕಂಡ ಕೂಡಲೆ ಗುರ್ತಿಸಿಬಿಟ್ಟಳು. ಆದರಿಂದಲೇ ಈ ಕೊಲೆಯ ರಹಸ್ಯವೆಲ್ಲ ಒಮ್ಮೆಲೆ ಪರಿಷ್ಕಾರವಾಗಿ ಹೋಯಿತು. ಹಾಗಾಗಿದ್ದರೂ ಕೂಡ ನಾನು

ಕೇವಲ ಮೋಹಿನಿಯ ಮಾತನ್ನೇ ನಂಬಲಿಲ್ಲ; ಮತ್ತು ಹಾಗೆ ನಂಬು ವುದು ಪತ್ತೆದಾರನ ಸ್ವಧರ್ಮವೂ ಅಲ್ಲ. ಆಗ ಏನಾದರೂ ಹಂಚಿಕೆ ಮಾಡಿ ಶಂಕರರಾಯನ ಆ ಶಯನಾಗಾರದ ಬಳಿಯ ಸಂದಿಯ ಓಣಿ ಯಲ್ಲಿ ಯಾವ ಸ್ಪಷ್ಟವಾದ ಪದಚಿಹ್ನಗಳು ಮೂಡಿದ್ದವೋ ಮತ್ತು ನಾನು ಯಾವುಗಳ ಅಚ್ಚುಗಳನ್ನು ಈ ಮೊದಲು ತೆಗೆದುಕೊಂಡಿದ್ದೆನೋ ಅವುಗಳಿಗೂ ನಿಮ್ಮ ಪದಚಿಹ್ನಗಳಿಗೂ ಹೊಂದಿಸಿ ನೋಡಿದರೆ ಖಾತ್ರಿ ಯಾಗುವದೆಂದು ಬಗೆದೆನು. ಅವೆರಡೂ ಒಂದಕ್ಕೊಂದು ಹೊಂದಿ ದರೆ ನನ್ನ ಕೆಲಸವು ಸಂಪೂರ್ಣವಾಯಿತೆಂದೂ ತಿಳಿದೆನು. ಅದ ಕ್ಕಾಗಿ ನಾನು ನಿಮ್ಮನ್ನು ಬೇಕಂತ ನನ್ನ ಆ ಹೊಸ ತೋಟದ ಮನೆ ಯಲ್ಲಿ ಆಗ ತಾನೆ ಹಾಕಿದ್ದ ಗಾರೆಯ ಮೇಲೆ ಬರಿಗಾಲಿನಿಂದ ನಡೆ ಯುವ ಯುಕ್ತಿ ಮಾಡಿದೆನು. ಆದರಲ್ಲಿ ನಿಮ್ಮ ಕಾಲಿನ ಗುರ್ತಗಳು ಬಹು ಸ್ಪಷ್ಟವಾಗಿ ಮೂಡಿಬಿಟ್ಟವು. ನೀವು ಅಲ್ಲಿ ಮೋಹಿನಿಯೊಡನೆ ಮಾತನಾಡುತ್ತ ಕುಳಿತಿರುವಾಗಲೇ ನಾನು ನಿಮ್ಮ ಆ ಗುರ್ತಗಳಿಗೂ ಈ ಮೊದಲು ನನ್ನಲ್ಲಿ ತೆಗೆದುಕೊಂಡಿದ್ದ ಪದ ಚಿಹ್ನಗಳ ಅಚ್ಚುಗಳಿಗೂ ಹೊಂದಿಸಿ ನೋಡಿದೆನು. ಅವು ಎಲ್ಲ ಬಗೆಯಿಂದಲೂ ಹೊಂದಿಬಿಟ್ಟವು; ಹಾಗು ಅವೆರಡೂ ನಿಮ್ಮ ಕಾಲಿನ ಗುರ್ತಗಳೇ ಎಂಬದು ಖಾತ್ರಿ ಯಾಯಿತು."

ಎಂದು ಹೇಳಿ, ಭಗವಾನ್‌ದಾಸನು ಒಳ್ಳೇ ಉತ್ಸಾಹಭರದಿಂದ ಮತ್ತೆ ಹೇಳಹತ್ತಿದನು:—"ಮೋಹಿನಿ ತರುಣಿಯು ಬಹು ಚಾಲಾ ಕಳು!-ಒಳ್ಳೇ ಬುದ್ಧಿಮತಿಯು!-ಶಾಬಾಸ್! ಹೆಂಗುಸಾದರೂ, ಅಡ್ಡ ದಾರಿ ಹಿಡಿದವಳಾದರೂ ಆಕೆಯನ್ನು ನಾನು ಹೊಗಳದಿರಲಾರೆನು. ಸತ್ಯವಂತರಾಗಿದ್ದರೇ, ಆಕೆಯು ಹಾಗಿರದಿದ್ದರೆ ನಾನೆಂದಾದರೂ ಆಕೆಯ ಮಾತಿನಲ್ಲಿಷ್ಟು ನಂಬಿಗೆ ಇಡುತ್ತಿದ್ದೆನೇ? ನಿಮ್ಮ ಅವಳ ಭೆಟ್ಟಿ ಯಲ್ಲಿ ಅವಳು ನನ್ನ ವಿಷಯದ ಸಂಗತಿಯನ್ನು ನಿಮಗೆ ಒಂದು ವೇಳೆ

ತಿಳಿಸಿಬಿಟ್ಟಿದ್ದರೆ ಅಥವಾ ಅವಳು ನನಗೇ ಮಂಕು ಬೂದಿ ಹಚ್ಚಲು ಪ್ರಯತ್ನಿಸಿದ್ದರೆ ಇಲ್ಲವೆ ನೀವು ಅವಳ ಬಾಯಿಂದ ನನ್ನ ಈ ವಿಚಕ್ಷಣತೆಯ ಯಾವುದೊಂದು ಸೂತ್ರವನ್ನು ತಿಳಿಯಲು ಪ್ರಯತ್ನಿಸಿಅದರಲ್ಲಿ ಸಫಲರಾಗಿದ್ದರೆ ನನ್ನ ಕೆಲಸವು ಕೆಟ್ಟುಹೋದೀತೆಂದು ತಿಳಿದೇ ನಾನು ನನ್ನೀ ಮನುಷ್ಯನನ್ನು ನಿನ್ನೆ ಸಂಜೆಯಿಂದ ಇದುವರೆಗೆ ನಿಮ್ಮ ಮೇಲೆ ಒಂದೇಸವನೆ ಪಾಳತಿಯಿಡಲು ಯೋಜಿಸಿದ್ದೆನು. ನೀವು ಅಲ್ಲಿಂದ ನಿಮ್ಮ ಮನೆಗೇ ಹೋಗುವಿರೋ, ಅಥವಾ ಮತ್ತೇನು ಮಾಡುವಿರಿ, ನಿಮ್ಮ ಮುಖಭಾವವೆಂತೆಂತಾಗುವದು ಇವೆಲ್ಲವುಗಳ ಮೇಲೆ ದೃಷ್ಟಿಯಿರಿಸಿ ನನಗೆ ತಿಳಿಸುವಸಲುವಾಗಿ ನಾನು ಈತನಿಗೆ ಕಟ್ಟಪ್ಪಣೆ ಗೈದಿದ್ದೆನು. ನೀವು ನಿನ್ನೆ ರಾತ್ರಿ ಯಾವಾಗ ನಿಮ್ಮ ಮನೆಯನ್ನು ಪ್ರವೇಶಿಸಿದಿರೋ ಹಾಗು ಆ ಮೇಲೆ ನಿವು ಹೊರಗೆ ಬಾರದಿದ್ದುದನ್ನು ಇವನು ನೋಡಿದನೋ ಕೂಡಲೆ ಈತನು ನಿಮ್ಮ ಮನೆಯ ಬಳಿಯಿಂದ ನಿಶ್ಚಿಂತ ಮನಸ್ಸಿನಿಂದ ನನ್ನೆಡೆಗೆ ಹಿಂದಿರುಗಿ ನಡೆದ ಸಂಗತಿಯನ್ನೆಲ್ಲ ನನಗೆ ನಿವೇದಿಸಿದನು. ತದನಂತರ ನಾನು ಇಂದು ಬೆಳಿಗ್ಗೆ ಸಿಟಿ ಮ್ಯಾಜಿಸ್ಟ್ರೇಟರ ಬಳಿಗೆ ಹೋಗಿ ನಿಮ್ಮ ಹೆಸರಿನ ವಾರಂಟು ತೆಗೆಯಿಸಿಕೊಂಡು ಬಂದು ನೀವು ನನ್ನ ಮೇಲೆ ಹೊರಿಸಿದ್ದ ಆ ಸಾವಿತ್ರಿಯ ಕೊಲೆಯ ಪತ್ತೇದಾರಿಯ ಕೆಲಸವನ್ನು ಸಂಪೂರ್ತಿಗೊಳಿಸಿರುವೆನು. ಸತ್ಯವಂತರಾಯರೇ, ಹೇಳಲೇನು? ನನ್ನ ಕಡೆಗೆ ಇದುವರೆಗೆ ಇಂಥ ಕೊಲೆಯ ಹಲವು ಕೇಸುಗಳು ಬಂದಿದ್ದವು; ಆದರೆ ಅವುಗಳಲ್ಲಿ ಇದೊಂದರ ಹೊರತು ಇನ್ನಾವವೂ ಇಷ್ಟು ಅದ್ಭುತ ಪರಿಣಾಮಕಾರಕಗಳಾಗಿರಲಿಲ್ಲ. ಏನೇ ಇರಲಿ, ನಿನುಗೀಗ ತಿಳಿಸುವದೇನಂದರೆ, ಸಾವಿತ್ರಿಯ ಈ ಕೊಲೆಯಲ್ಲಿ ಶಂಕರರಾಯನು ಕೇವಲ ನಿರಪರಾಧಿಯಾಗಿದ್ದರೂ ಕೊಲೆಪಾತಕಿ ಯಾರೆಂದು ನೀವು ಕೇಳಿದ್ದ ಪ್ರಶ್ನೆಗೆ ನಾನು ನಿಮ್ಮ ಕಡೆಗೇ ಬೊಟ್ಟು ತೋರಿಸುವ ಪ್ರಸಂಗವೊದಗಿತು! ಉಪಾಯವಿಲ್ಲ.''

( ೨೦ )

"ಈ ಹತ್ಯೆಯ ಬಗ್ಗೆ ಇನ್ನು ಹೇಳತಕ್ಕದ್ದೇನಿದೆ? ಇನ್ನು ಹೇಳುವುದಾದರೂ ಉಳಿಯಿತೇನು? ಓ ಸರ್ವಜ್ಞ! ಸರ್ವಶಕ್ತಿಮಂತನೇ! ಈ ದುರ್ಭಾಗ್ಯನ ಅಂತರಂಗದ ಸಂಗತಿಯನ್ನೆಲ್ಲ ನೀನೇ ಬಲ್ಲವನಾಗಿರುತ್ತೀಯಲ್ಲವೇ ದೇವಾ? ನಾನು ಯಾವಳನ್ನು ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದೆನೋ, ಅವಳನ್ನು ಒಬ್ಬ ನೀಚ ನೃಶಂಸನ ಕೈಗೆ ಆ ರೀತಿ ಉತ್ಪೀಡನೆಗೂ ಅತ್ಯಾಚಾರಕ್ಕೂ ಗುರಿಪಡಿಸಿದುದನ್ನು ಕಂಡು ದೇವಾ, ನನ್ನ ಹೃದಯಕ್ಕೆ ಎಷ್ಟು ಭೀಷಣವಾದ ಆಘಾತವುಂಟಾಯಿತೆಂಬದನ್ನೆಲ್ಲ ನೀನೇ ಬಲ್ಲೆ. ಅಂದಿನ ದಿವಸ ನನ್ನಿಂದ ಆ ತಪ್ಪು ಆಗದಿದ್ದರೆ, ನಾನು ನಿಜವಾಗಿಯೂ ಶಂಕರರಾಯನನ್ನೇ ಕೊಲ್ಲಲಿಕ್ಕೆ ಶಕ್ತನಾಗಿದ್ದರೆ, ಈಗ ನಾನು ಖಂಡಿತವಾಗಿಯೂ ಸುಖದಿಂದ ಮರಣ ಹೊಂದುತ್ತಿದ್ದೆನು. ನನ್ನ ಸಾವಿತ್ರಿಯನ್ನು ಒಬ್ಬಾನೊಬ್ಬ ನರರಾಕ್ಷಸನ ಪಾಶದಿಂದ ಉದ್ಧಾರ ಮಾಡಿದೆನೆಂದು ಮನಸ್ಸಿನ ಖಾತ್ರಿಯಾಗಿ ಬಿಟ್ಟಿದ್ದರೆ ನನ್ನ ಸಾವಿನಿಂದಲೂ ಒಂದು ಸತ್ಕಾರ್ಯವೇ ಆಗುತ್ತಿತ್ತು; ಆದರೆ ದೇವಾ, ಇದೇನಾಯಿತು? 'ಮಾನವನು ಬಗೆಯುವುದೊಂದು; ದೈವವು ಘಟಿಸುವುದೊಂದು' ಎಂದೆನ್ನುವರಲ್ಲ, ಆ ಮಾತು ಬೇರೆ ಸುಳ್ಳಲ್ಲ. ಆ ಜಗನ್ನಿಯಂತನ ಕೈಸನ್ನೆಯಿಂದಲೇ ಇಡಿ ಜಗತ್ತು ಸಮಭಾವದಿಂದ ನಡೆಯಿಸಲಾಗುತ್ತದೆ; ಅಂದಬಳಿಕ ಅಲ್ಲಿ ಮಾನವನು ಮಾನವನ ಶಾಸನ-ತಾರಣಗಳ ಕರ್ತನೆಂತಾಗಬಲ್ಲನು? ಪಾಪಿಯು ಸ್ವಕೃತ ಪಾಪದ ದಂಡಣೆಯನ್ನು ತನ್ನ ಕೈಯಿಂದ ತಾನೇ ಭೋಗಿಸಬೇಕೆಂದು ಹಂಚಿಕೆ ಮಾಡುವ ರಚನಾ ಕೌಶಲ್ಯವು ದೇವರಲ್ಲಿದೆ. ಅಂತೆಯೇ ಸತ್‌ಪುರುಷರಂತೆ ದುಷ್ಟ ಜನರಾದರೂ ದೇವರನ್ನು ದೊಡ್ಡವನೆಂದು ತಿಳಿಯುತ್ತಿರುತ್ತಾರೆ."

“ಕೇವಲ ಹಾಲಿನಿಂದ ಪೋಷಣೆ ಹೊಂದುತ್ತಿರುವ, ಇನ್ನೂ ಮಾತು ಬಾರದ ಮಗುವು ಹುಲಿಯ ದವಡೆಯಲ್ಲಿ ಸಿಕ್ಕಿತೆಂದರೆ ಅದಕ್ಕೆ ಹೇಗೆ ತನ್ನ ಮೇಲಿನ ಆಗಾಮಿ ಸಂಕಟದ ಅರಿವು ಆಗಿರುವುದಿಲ್ಲವೋ, ಮತ್ತು ಅದು ಆ ವ್ಯಾಘ್ರನ ಯಾವ ಪೀಡೆಗೂ ಎಲ್ಲಿಯವರೆಗೆ ತುತ್ತಾಗಿರುವುದಿಲ್ಲವೋ ಅಲ್ಲಿಯವರೆಗೂ ಅದರ ಕುಲುಕುಲು ನಗೆಯೂ, ಭೀಷಣೋಜ್ವಲವಾದ ಕಣ್ಣುಗಳೂ ಹಾಗು ಆಗಾಗ್ಗೆ ನಾಲಿಗೆ ಹೊರತೆಗೆಯುವುದೂ, ತನ್ನ ಬಾಯೊಳಗಿದ್ದ ಒಂದೆರಡೇ ಹಲ್ಲುಗಳನ್ನು ಹೊರದೆಗೆದು ನಗುವುದೂ ಇವೆಲ್ಲವುಗಳೂ ಒಳ್ಳೇ ಚೆನ್ನಾಗಿ ಒಪ್ಪುತ್ತಿರುವವು. ಹಾಯ್! ಕನಸಿನಲ್ಲಿದ್ದ ನಾನೂ ಅದರಂತೆಯೇ ದಾರಿದ್ರ್ಯ-ದುಃಖ-ಭೀಷಣವೂ ಶೋಕ-ತಾಪ-ಪೂರ್ಣವೂ ವಿಪತ್ತುಗಳ ಆಗರವೂ ಆಗಿದ್ದ ಈ ಕಠಿಣ ಪ್ರಪಂಚದ ವಕ್ಷಸ್ಥಳದ ಮೇಲೆ ಬಿದ್ದುಕೊಂಡು ಯಾವುದೊಂದು ಅಜ್ಞಾತ ಮೋಹದಿಂದ ಹಾಸ್ಯತರಂಗಗಳಲ್ಲಿ ಅವಿಶ್ರಾಂತಿವಾಗಿ ಉಲ್ಲಸಿತನಾಗಿರುತ್ತಿದ್ದೆನು. ಆ ಮೇಲೆ ಯಾವಾಗ ಯಾವುದೊಂದು ಅಪ್ರತಿಹತವಾದ ಅಸಹನೀಯ ಆಘಾತದಿಂದ ನನ್ನ ಆ ಕನಸು ಭಂಗವಾಗಿಬಿಟ್ಟಿತೋ, ಮೋಹವು ದೂರವಾಯಿತೋ. ಆಗ ದಿಕ್ಕುಗೆಟ್ಟು, ಅಂಜಿ, ಭರವಸೆ ರಹಿತನಾಗಲು, ನನ್ನ ಹೃದಯವು ಸಹಸ್ರಾರು ತುಂಡುಗಳಾಯಿತು. ಅದರಿಂದ ನಾನು ಗಟ್ಟಿ ಗಟ್ಟಿಯಾಗಿ ಅಳಹತ್ತಿದೆನು.”

ಹೀಗೆಂದು ಆ ಸತ್ಯವಂತರಾಯನು ತನ್ನ ದುರ್ಗತಿಯನ್ನು ಕುರಿತು ನಮ್ಮೆದುರು ಉಸುರಿದನು.

## ಉಪಸಂಹಾರ

(ನನ್ನ ಗತಿ)

ಆ ಸತ್ಯವಂತರಾಯನು ತನ್ನೀ ಮರ್ಮಭೇದಕವಾದ ಆತ್ಮವೃತ್ತ ವನ್ನು ಯಾವಾಗ ಹೇಳಹತ್ತುವನೋ ಆಗ ಆತನನ್ನಿಟ್ಟದ್ದ ಸೆರೆಮನೆ ಯೊಳಗಿನ ಅವನ ಸಂಗಾತಿಗಳೂ ವಾರ್ಡರ ಜಮಾದಾರರೇ ಮೊದಲು ಮಾಡಿಕೊಂಡು ಜೇಲರ-ಸುಪರಿಂಟೆಂಡೆಂಟರ ವರೆಗಿನ ಜೇಲಿನ ಎಲ್ಲ ಅಧಿ ಕಾರಿಗಳೂ ಆಶ್ಚರ್ಯ ಚಕಿತರಾಗಿ ಬಿಡುತ್ತಿದ್ದರು. ಹೀಗೆಯೇ ಆತ ನೊಂದು ದಿನ ತನ್ನ ಕಥೆಯನ್ನು ಹೇಳ ಹೇಳುತ್ತಿರಲು, ಅಂದಿನ ನಿಶೆಯ ಕಾರ್ಗತ್ತಲೆಯೆಲ್ಲ ಹರಿದು ಮರು ದಿನದ ಸುಪ್ರಭಾತವು ದೃಗ್ಗೋಚರ ವಾಗತೊಡಗಿತು. ಜೇಲರನು ಸತ್ಯವಂತರಾಯನ ಆತ್ಮವೃತ್ತದಲ್ಲಿ ಸಂಪೂರ್ಣ ನಿಮಗ್ನನಾಗಿದ್ದರಿಂದ ಆತನಿಗೆ ಆ ಪ್ರಭಾತಕಾಲದ ಅರಿವೇ ಆಗಲಿಲ್ಲ. ಆಗ ಆತನು ಮತ್ತೊಂದು ಸಿಗರೇಟು ಸೇದಲಿಕ್ಕೆಂದು ಕಡ್ಡಿ ಕೊರೆಯಲು, ಆ ಕಡ್ಡಿಯ ಬೆಂಕಿಯ ಪ್ರಕಾಶವು ಮೊದಲಿನಂತೆ ಸತೇಜವಾಗಿರದೆ, ಬಿಳುಪೇರಿ ನಿಸ್ತೇಜಗೊಂಡಿತು. ಅದರಿಂದ ಬೆಳಗಾದ ಅರಿವು ಆತನಲ್ಲುಂಟಾಗಲಿಕ್ಕೂ ಒಬ್ಬ ಪಹರೆಯವನು ಬಂದು ಒಂದು ಆದೇಶಪತ್ರವನ್ನು ತಂದು ಅವನಿಗೊಪ್ಪಿಸಲಿಕ್ಕೂ ಗಂಟೇಬಿದ್ದಿತು. ಅದರಲ್ಲಿ ಈ ಮೊದಲೇ ಗಲ್ಲಿನ ಶಿಕ್ಷೆಗೆ ಗುರಿಯಾಗಿದ್ದ ಆ ಸತ್ಯವಂತರಾಯ ನಿಗೆ ಕಟ್ಟಕಡೆಯ ಆಹಾರ-ಪಾನೀಯಗಳನ್ನು ಕೊಟ್ಟು ವಧಸ್ತಂಭದ ಬಳಿಗೆ ಸಾಗಿಸಲಿಕ್ಕೆ ಸಜ್ಜಾಗಿರಿಸುವ ಮೇಲಧಿಕಾರಿಯ ಹುಕುಮಿದ್ದಿತು ಮುಂದೆ ಕೆಲಹೊತ್ತಿನಲ್ಲೀ ಸೆರೆಮನೆಯೊಳಗಿನ ಅಡುಗೆಯ ಆಚಾರಿ ಯು ಸತ್ಯವಂತರಾಯನ ಕೂಲೆಯ ಕಳವೂಟದ ತಟ್ಟೆಯನ್ನು ತಂದು ಆತನ ಮುಂದಿರಿಸಿದನು. ಮುಂದೊಂದು ತಾಸಿನಲ್ಲೀ ಸತ್ಯವಂತನ ಇಹಲೋಕಯಾತ್ರೆಯು ಜೇಲಿನ ಪದ್ಧತಿಯಂತೆ ಕೊನೆಗಾಣಿಸಲಾ ಯಿತು! ಹಾಗು ಆತನ ಹೆಸರು ಈ ಜಗತ್ತಿನೊಳಗಿನ ಜೀವಂತ

ಮನುಷ್ಯರ ಪಟ್ಟಿಯೊಳಗಿಂದ ಕಾಯಮವಾಗಿ ಅಳಿಸಲಾಯಿತು. ಆ ಹತಭಾಗಿಯು ಆ ಗಲ್ಲಿನ ಕಂಬದ ಮೇಲೆ ತನ್ನ ಪಾಪದ ಪ್ರಾಯಶ್ಚಿತ್ತವನ್ನು ಭೋಗಿಸಲಿಕ್ಕೆಂದು ತನ್ನ ಕಲೇಬರವನ್ನು ಬಿಟ್ಟು, ತಾನು ಅಲ್ಲಿಂದ ಸ್ವರ್ಗಕ್ಕೋ ನರಕಕ್ಕೋ ತಿಳಿಯದು-ಹೊರಟು ಹೋಗಿದ್ದನು.

ವಾಚಕ ಮಹಾಶಯರೇ! ಸತ್ಯವಂತರಾಯನು ತಾನಾಗಿ ತನ್ನ ಮುಖದಿಂದ ಹೇಳಿದ್ದ ಈ 'ನನ್ನ ಗತಿ' ಎಂಬ ಆತನ ಆತ್ಮವೃತ್ತವು ಇಲ್ಲಿಗೆ ಸಂಪೂರ್ತಿಗೊಂಡಿತು. ಈ ಲೋಕದಲ್ಲಿ ಹೊಸದೆಂಬದು ಯಾವದೂ ಇಲ್ಲ. ನಮಗೆ ಕಾಣುವ ಯಾವ ಹೊಸ ಕೃತ್ಯವಾದರೂ ಪುರಾತನ ಕಾಲದಲ್ಲಿ ಒಂದಿಲ್ಲೊಂದು ವ್ಯಕ್ತಿಯಿಂದ ಆಚರಿಸಿದ್ದ ಹಳೆಯ-ಹಳಸಿದ ಕೃತಿಯೇ ಆದಾಗಿರುವದೆಂಬದು ಪುರಾಣೇತಿಹಾಸಗಳಿಂದ ನಮಗೆ ತಿಳಿಯದಿರದು. ಸತ್ಯವಂತರಾಯನಂತಹ ಜನರು ವರ್ತಮಾನ ಕಾಲದಲ್ಲಿ ಕೂಡ ನಮಗೆ ಬೇಕಾದಷ್ಟು ಮಂದಿ ನೋಡಲಿಕ್ಕೆ ಸಿಗದಿರರು.

ಸಂಪೂರ್ಣ.

ಮುದ್ರಕರು:—ಭಿ. ಪ. ಕಾಳೆ, ಶ್ರೀ ಶೇಷಾಚಲ ಪ್ರೆಸ್ಸ, ಆನಂದವನ (ಅಗಡಿ)

## ಶ್ರೀಶೇಷಾಚಲ ಗ್ರಂಥಮಾಲೆಯ ಪುಸ್ತಕಗಳ ಪಟ್ಟಿಯು

ನಮ್ಮಲ್ಲಿ ಸಿಗುವ ಕೆಲ

ಅತ್ಯುತ್ತಮ ಪುಸ್ತಕಗಳು

# ಯೋಗಾಯೋಗ

ಸಮಾಜದಲ್ಲಿ ತೀವ್ರತರ ಜಾಗ್ರತಿಯನ್ನುಂಟು ಮಾಡುವ ಇದೊಂದು ಸಾಮಾಜಿಕ ಕಾದಂಬರಿ. ಪುಟ ೨೮೦. ಬೆಲೆ ೧-೮-೦ ರೂ.

# ಭೀಷಣ ಸಾಹಸ

ರಮ್ಯವಾದ ಪತ್ತೆದಾರೀ ಕತೆ. ಪುಟ ೧೨೪. ಬೆಲೆ ೧೪ ಆಣೆ

# ಸಾಧನ ಕುಬೇರ

ಗಾಂಧಿಯುಗದ ಸಾಮಾಜಿಕ ಕತೆ ಪುಟ ೧೨೮. ಬೆಲೆ ೧ ರೂ. ೪ ಆಣೆ.

# ಪರಿಣಾಮ

ವಿಜಯನಗರ ಕಾಲದ ಐತಿಹಾಸಿಕ ಕತೆ ಪುಟ ೧೬೬. ಬೆಲೆ ೧-೪-೦ ರೂ.

# ಕರಿಸೀರು

ರಮ್ಯ ಭೀಷಣ ಸಾಮಾಜಿಕ ಕಾದಂಬರಿ. ಪುಟ ೪೦೦. ಬೆಲೆ ೨ ರೂ.

# ಚೋದ್ಯಪುರದ ಚೋಜಿಗರಾಯ

ರಾಜಕಾರಣ ಸಂಬಂಧದ ಕಾದಂಬರಿ. ಪುಟ ೩೩೨. ಬೆಲೆ ೨ ರೂ.

# ಆತ್ಮಬಲಿ

ಐತಿಹಾಸಿಕ ಕಾದಂಬರಿ. ಪುಟ ೧೩೬. ಬೆಲೆ ೧ ರೂ.

# ಕೃತಕ ಕೈಬೆರಳು

ಪತ್ತೆದಾರಿ ಕತೆ. ಪುಟ ೧೬೮. ಬೆಲೆ ೧ ರೂ.

---

ಸಿಗುವ ಸ್ಥಳ

ಶ್ರೀ ಶೇಷಾಚಲ ಪ್ರೆಸ್ಸ, ಆನಂದವನ (ಹಾವೇರಿ)